

ಜನವರಿ 06ರಿಂದ 08, 2017,
ತಿರುವನಂತಪುರದಲ್ಲಿ ನಡೆದ
ಕೇಂದ್ರ ಸಮಿತಿಯ ಸಭೆಯಲ್ಲಿ ಅಂಗೀಕರಿಸಿಜ

# ರಾಜಕೀಯ ಬೆಳವಣಿಗೆಗಳನ್ನು ಕುರಿತು ಸಿಪಿಐ(ಎಂ) ಕೇಂದ್ರ ಸಮಿತಿಯ ವರದಿ

ಪ್ರಕಟಣೆ
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)
ಕರ್ನಾಟಕ ರಾಜ್ಯ ಸಮಿತಿ

# ರಾಜಕೀಯ ಬೆಳವಣಿಗೆಗಳನ್ನು ಕುರಿತ ವರದಿ
## (ಜನವರಿ 06ರಿಂದ 08, 2017, ತಿರುವನಂತಪುರದಲ್ಲಿ ನಡೆದ ಕೇಂದ್ರ ಸಮಿತಿಯ ಸಭೆಯಲ್ಲಿ ಅಂಗೀಕರಿಸಿದ್ದು)

## ಅಂತರ್ರಾಷ್ಟ್ರೀಯ

### ಜಾಗತಿಕ ಆರ್ಥಿಕತೆ

2016ರ ಸೆಪ್ಟೆಂಬರ್ 17 ರಿಂದ 19ರವರೆಗೆ ನಡೆದ ಕೇಂದ್ರ ಸಮಿತಿ ಸಭೆಯ ನಂತರ ಜಾಗತಿಕ ಆರ್ಥಿಕ ಬಿಕ್ಕಟ್ಟು ಮುಂದುವರಿದಿದೆ, ಬಂಡವಾಳಶಾಹಿ ಬಿಕ್ಕಟ್ಟು ಆ ಇಡೀ ವ್ಯವಸ್ಥೆಯ ಮೂಲ ಸ್ವಭಾವ ಎನ್ನುವುದನ್ನು ಖಾತ್ರಿಪಡಿಸಿತು. ಉತ್ತಮ ಬೆಳವಣಿಗೆ ದರ ಮತ್ತು 2016ರಲ್ಲಿ ಆರ್ಥಿಕತೆ ಉತ್ತಮವಾಗಲಿದೆ ಎಂಬ ನಿರೀಕ್ಷೆಗಳು ಈಗ ಸುಳ್ಳಾದಂತಾಗಿದೆ. ಐಎಂಎಫ್‌ನ ಅಕ್ಟೋಬರ್ 2016ರ ಜಾಗತಿಕ ಆರ್ಥಿಕ ನೋಟದ ಪ್ರಕಾರ ಜಾಗತಿಕ ಅಭಿವೃದ್ಧಿಯು 2016ರ ಪೂರ್ವಾರ್ಧದಲ್ಲಿ 2.9% ಎಂದು ಅಂದಾಜಿಸಲಾಗಿದ್ದು, ಅದು 2015ರ ಉತ್ತರಾರ್ಧದಲ್ಲಿನ ಅಂದಾಜಿಗಿಂತ ಕಡಿಮೆಯಾಗಿದೆ. ಅದು 2016ರ ಏಪ್ರಿಲ್‌ನ ಐಎಂಎಫ್ ಅಂದಾಜಿಗಿಂತಲೂ ಕಡಿಮೆಯಾಗಿದೆ. ಜಾಗತಿಕ ಕೈಗಾರಿಕಾ ಉತ್ಪಾದನೆಯು ಎಂದಿನಂತೆ ತಗ್ಗಿದೆ ಮತ್ತು ಇತ್ತೀಚೆಗೆ ಪ್ರಮಾಣದಲ್ಲಿ ಮತ್ತೂ ತಗ್ಗುತ್ತಿರುವ ಪ್ರವೃತ್ತಿ ಕಂಡುಬರುತ್ತಿದೆ. 2016ರ ಪೂರ್ವಾರ್ಧದಲ್ಲಿ ಎಣಿಸಿದಂತೆ ಅಮೆರಿಕದ ಆರ್ಥಿಕತೆ ಚೇತರಿಸಿಕೊಂಡಿಲ್ಲ. 2016ರಲ್ಲಿ ಅದರ ಆಂತರಿಕ ಅಭಿವೃದ್ಧಿ 1.1% ಎಂದು ನಿರೀಕ್ಷಿಸಲಾಗಿದೆ. ಯೂರೋ ಪ್ರದೇಶದಲ್ಲಿ ಅಭಿವೃದ್ಧಿಯು 1.2%ಕ್ಕೆ ಕುಸಿದಿದೆ. ಆಂತರಿಕ ಬೇಡಿಕೆಯಲ್ಲಿನ ಮಂದಗತಿ ಮತ್ತು ಅದರಿಂದಾಗಿ ಹಣಹೂಡಿಕೆಯು ದೊಡ್ಡ ಮಟ್ಟದಲ್ಲಿ ಯೂರೋ ವಲಯದ ಆರ್ಥಿಕತೆಯನ್ನು ಕಾಡುತ್ತಿದೆ. ಜಪಾನಿನಲ್ಲಿ ಮೊದಲ ತ್ರೈಮಾಸಿಕದಲ್ಲಿ 2.1% ಇದ್ದ ಬೆಳವಣಿಗೆ ಎರಡನೇ ತ್ರೈಮಾಸಿಕದಲ್ಲಿ 0.7%ಗೆ ಇಳಿದಿದೆ. ಜಪಾನಿನ ಆರ್ಥಿಕತೆ ಉತ್ತಮ ಸ್ಥಿತಿಗೆ ಮರಳುತ್ತಿದೆ ಎಂಬ ನಿರೀಕ್ಷೆಯು ಕೂಡ ವಾಸ್ತವದಿಂದ ದೂರವಾಗಿದೆ ಎಂಬ ಸಂಗತಿ ಈಗ ಮತ್ತೆ ಸಾಬೀತಾಗಿದೆ.

ಜಾಗತಿಕವಾಗಿ ಆದಾಯದಲ್ಲಿನ ಅಸಮಾನತೆ ಹೆಚ್ಚುತ್ತಲೇ ಇದೆ. ಇದಕ್ಕೆ ಬಹು ಮುಖ್ಯ ಕಾರಣ, ಬಹುಸಂಖ್ಯಾತ ಜನರ ಆದಾಯದಲ್ಲಿ ಅತ್ಯಂತ ಕಡಿಮೆ ಮಟ್ಟದ ಏರಿಕೆ ಆಗಿದೆ. ಇದು ಆಂತರಿಕ ಬೇಡಿಕೆಯನ್ನು ಕಡಿಮೆ ಮಾಡುತ್ತದೆ ಮತ್ತು ಹಣ ಹೂಡಿಕೆಯನ್ನು ತಡೆಯುತ್ತದೆ, ಅದರ ಪರಿಣಾಮವಾಗಿ ಉದ್ಯೋಗ ದರವನ್ನೂ ನಿಧಾನಗೊಳಿಸುತ್ತದೆ. ಅತಿ ಕಾರ್ಪೊರೇಟ್ ಸಾಲ ಮತ್ತು ಲಾಭದಲ್ಲಿನ ಇಳಿತಗಳು

ಜಾಗತಿಕ ಬಂಡವಾಳಶಾಹಿ ಆರ್ಥಿಕತೆಯನ್ನು ಕಾಡುತ್ತಿವೆ. ಹಣ ಹೂಡಿಕೆಯಲ್ಲಿನ ವಿಶ್ವಾಸವನ್ನು ಉತ್ತೇಜಿಸುವ ಸಲುವಾಗಿ ಉಂಟಾಗುವ ಒತ್ತಡಗಳಿಂದಾಗಿ ಅಂತರ್‍ರಾಷ್ಟ್ರೀಯ ಹಣಕಾಸು ಬಂಡವಾಳದಿಂದ ಆಗುವ ಮರುದಾಳಿ ಜಾಗತಿಕವಾಗಿ ಎಲ್ಲಾ ಅಭಿವೃದ್ಧಿಶೀಲ ಆರ್ಥಿಕತೆಯ ಮೇಲೆ ಪರಿಣಾಮ ಬೀರುತ್ತಿವೆ.

2016ನೇ ವರ್ಷವು ಕೊನೆಯಾಗುವಾಗ ಜಗತ್ತಿನ ಅತ್ಯಂತ ಶ್ರೀಮಂತ ಜನರು ವರ್ಷ ಶುರುವಾಗುವುದಕ್ಕೆ ಮುಂಚೆ ಇದ್ದದ್ದಕ್ಕಿಂತ 237 ಬಿಲಿಯುನ್ ಡಾಲರುಗಿಂತಲೂ ಹೆಚ್ಚು ಸಂಪತ್ತನ್ನು ಪಡೆದರು. ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟು ಮುಂದುವರಿಯುತ್ತಿದ್ದಾಗ್ಯೂ ಸಹ, ಜನರ ಶೋಷಣೆ ತೀವ್ರವಾಗುತ್ತಲೇ ಇದ್ದು ಶ್ರೀಮಂತರು ಶ್ರೀಮಂತರಾಗುವ, ಬಡವರು ಬಡವರಾಗುವ ಪ್ರಕ್ರಿಯೆಯಲ್ಲಿ ಅದು ಪರ್ಯವಸಾನವಾಗುತ್ತಿದೆ. ಅಮೆರಿಕದಲ್ಲಿ, ಟ್ರಂಪ್ ಗೆದ್ದ ಮೇಲೆ ಸರಳ ನಿಯಮಗಳಿಂದಾಗಿ ಅಲ್ಲಿಯ ಉದ್ದಿಮೆಗಳು ಪ್ರಯೋಜನ ಪಡೆಯಬಹುದೆಂಬ ನಿರೀಕ್ಷೆಯಲ್ಲಿ ಅಮೆರಿಕದ ಬಿಲಿಯಾಧೀಶರು ಹೆಚ್ಚುವರಿ 77 ಬಿಲಿಯನ್ ಲಾಭ ಪಡೆದರು ಎಂದು ವರದಿಯಾಗಿದೆ.

ನಾವು ನಮ್ಮ ಹಿಂದಿನ ಕೇಂದ್ರ ಸಮಿತಿ ಸಭೆಯಲ್ಲಿ ಕೈಗೊಂಡ ತೀರ್ಮಾನವನ್ನು, 2008ರ ಹಣಕಾಸು ಸಂಕಟದಿಂದ ಪ್ರಾರಂಭವಾದ ಬಂಡವಾಳಶಾಹಿಯ ಆಮೂಲಾಗ್ರ ಬಿಕ್ಕಟ್ಟಿನಿಂದ ಮೇಲೇಳಲು ಜಾಗತಿಕ ಬಂಡವಾಳಶಾಹಿ ಆರ್ಥಿಕತೆಗೆ ಸಾಧ್ಯವಾಗಿಲ್ಲ ಎಂಬ ತೀರ್ಮಾನವನ್ನು, ಈ ಬೆಳವಣಿಗೆಗಳು ಗಟ್ಟಿಗೊಳಿಸಿವೆ. ಆದಾಗ್ಯೂ ಸಹ, ನಮ್ಮ ಕಳೆದ ಪಕ್ಷದ ಮಹಾಧಿವೇಶನದಲ್ಲಿ ಮತ್ತು ನಂತರದ ಕೇಂದ್ರ ಸಮಿತಿ ಸಭೆಗಳಲ್ಲಿ ಟಿಪ್ಪಣಿ ಮಾಡಿದಂತೆ, ಬಿಕ್ಕಟ್ಟಿನ ತೀವ್ರತೆ ಇದ್ದಾಗಲೂ ಸಹ, ಬಂಡವಾಳಶಾಹಿ ತಾನೇ ತಾನಾಗಿ ಕುಸಿಯುವುದಿಲ್ಲ. ಬಂಡವಾಳಶಾಹಿಗೆ ಒಂದು ಬಲಿಷ್ಠ ಸಮಾಜವಾದಿ ರಾಜಕೀಯ ಪರ್ಯಾಯ ಇಲ್ಲದಿರುವುದರಿಂದ, ಅದು ಜನರ ಶೋಷಣೆಯನ್ನು ತೀವ್ರಗೊಳಿಸುವುದರಿಂದ ಅದು ಅಂತಹ ಬಿಕ್ಕಟ್ಟಿನಿಂದ ಪಾರಾಗುತ್ತಿದೆ. ಅದೇ ಸಮಯದಲ್ಲಿ, ಒಂದು ಬಲಿಷ್ಠ ಎಡ ಶಕ್ತಿಗಳು ಇಲ್ಲದಿದ್ದಾಗ, ತೀವ್ರವಾದ ಶೋಷಣೆಯ ವಿರುದ್ಧದ ಜನರ ಅತೃಪ್ತಿಯನ್ನು ಬಲಪಂಥೀಯ ರಾಜಕೀಯ ಶಕ್ತಿಗಳು ತಮ್ಮ ಅನುಕೂಲಕ್ಕೆ ತಿರುಗಿಸಿಕೊಳ್ಳುತ್ತವೆ.

## ಬಲಕ್ಕೆ ವಾಲಿದ ರಾಜಕೀಯ
## ಅಮೆರಿಕಾ ಅಧ್ಯಕ್ಷೀಯ ಚುನಾವಣೆ

ಜಗತ್ತಿನ ಅನೇಕ ದೇಶಗಳಲ್ಲಿ ರಾಜಕೀಯವು ಬಲಪಂಥದತ್ತ ವಾಲುವ ಬಗ್ಗೆ ನಮ್ಮ ಸೆಪ್ಟೆಂಬರ್ ಸಿ.ಸಿ.ಯಲ್ಲಿ ಮಾಡಿದ ವಿಶ್ಲೇಷಣೆಯನ್ನು ಇತ್ತೀಚಿನ ಬೆಳವಣಿಗೆಗಳು ಪುಷ್ಟೀಕರಿಸುತ್ತವೆ. ಅನೇಕ ಮುಂದುವರಿದ ಬಂಡವಾಳಶಾಹಿ ದೇಶಗಳಲ್ಲಿ ಬಲಪಂಥೀಯ ರಾಜಕೀಯ ತಲೆ ಎತ್ತುತ್ತಿರುವ ಪ್ರಕ್ರಿಯೆ ಈಗ ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಡೊನಾಲ್ಡ್ ಟ್ರಂಪ್ ಗೆಲುವಿನೊಂದಿಗೆ ಇನ್ನೂ ಮುಂದುವರಿದಿದೆ.

ಈ ಫಲಿತಾಂಶವು ಜಗತ್ತಿನಾದ್ಯಂತ ಮತ್ತು ಅಮೆರಿಕ ದೇಶದೊಳಗಡೆ ಕೂಡ ಆಘಾತ ಹಾಗೂ ಆತಂಕಕ್ಕೆ ಎಡೆಮಾಡಿತು. ಜನಾಂಗೀಯವಾದ, ಸ್ತ್ರೀದ್ವೇಷ, ದೇಶೀಯತೆ ಮತ್ತು ಸರ್ವಾಧಿಕಾರಿ ಧೋರಣೆಯತ್ತ ಕೇಂದ್ರೀಕೃತವಾದ ಟ್ರಂಪ್‌ನ ಗಟ್ಟಿದನಿಯ ಪ್ರಚಾರವನ್ನು ಅಮೆರಿಕದ ಮತದಾರರ ದೊಡ್ಡ ವಿಭಾಗ ಸ್ವಾಗತಿಸಿದೆ. ಟ್ರಂಪ್ ಪ್ರಚಾರವು ಉಗ್ರ ಬಲಪಂಥದ ವಲಸೆವಿರೋಧಿ, ಮಹಿಳಾವಿರೋಧಿ, ಅಲ್ಪಸಂಖ್ಯಾತವಿರೋಧಿ, ನಾಗರಿಕ ಹಕ್ಕುಗಳ ವಿರೋಧಿ ಹಾಗೂ ಮುಸ್ಲಿಂವಿರೋಧಿಯಾಗಿತ್ತು. ನವ ಉದಾರೀಕರಣವು ಹೇರಿದ್ದ ಬೆಳೆಯುತ್ತಿರುವ ಹೊರೆಯ ವಿರುದ್ಧ ತಮ್ಮ ಪ್ರತಿರೋಧದ ಹಿನ್ನೆಲೆಯಲ್ಲಿ ಬಹುಸಂಖ್ಯೆಯ ಬಿಳಿ ಅಮೆರಿಕನ್ನರು ಗತ ಕಾಲದ್ದೆನ್ನುವ 'ಕನಸಿನ ಅಮೆರಿಕ'ವನ್ನು ಪುನಸ್ಥಾಪಿಸಲು ಆ ಪ್ರಚಾರಕ್ಕೆ ಸ್ಪಂದಿಸಿದಂತೆ ಕಾಣೀಸುತ್ತದೆ. ಕಳೆದ 25 ವರ್ಷಗಳ ಅವಧಿಯಲ್ಲಿ ಕಾಲೇಜು ಪದವಿಯಿಲ್ಲದ ಬಿಳಿ ಅಮೆರಿಕನ್ನರ ಉದ್ಯೋಗವು ಉತ್ಪಾದನಾ ರಂಗದಲ್ಲಿ 30% ಹಾಗೂ ಸಾರ್ವಜನಿಕ ರಂಗದಲ್ಲಿ 25% ನಷ್ಟು ಕಡಿಮೆಯಾಗಿದೆ.

ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ನೇತೃತ್ವದಲ್ಲಿನ ನವ ಉದಾರೀಕೃತ ಜಾಗತೀಕರಣವು ಬಹುಪಾಲು ದುಡಿಯುವ ಜನರ ನಿಜಾದಾಯವನ್ನು ಕಡಿಮೆ ಮಾಡಿದೆ ಮತ್ತು ಅದೇ ಸಮಯದಲ್ಲಿ ಅತಿಚಿಕ್ಕ ಸಂಖ್ಯೆಯ ಶ್ರೀಮಂತರನ್ನು ಶ್ರೀಮಂತರನ್ನಾಗಿಸಿದೆ. ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಬ್ರೆಕ್ಸಿಟ್ ಮತದಾನದಲ್ಲಿ ಹೇಗೆ ಇಂಗ್ಲಿಷ್ ದುಡಿಯುವ ಜನ ಪ್ರಧಾನವಾಗಿ ಅದರ ಪರವಾಗಿ ಮತ ನೀಡಿದರೋ, ಹಾಗೆಯೇ ಅಮೆರಿಕದ ಬಿಳಿ ದುಡಿಯುವ ಜನರು ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ, ಕೈಗಾರಿಕೆಗಳನ್ನು ಅಮೆರಿಕದಲ್ಲಿ ಉಳಿಸುವ ಮತ್ತು ಮುಚ್ಚಿರುವುದನ್ನು ತೆರೆಯುವ ಟ್ರಂಪ್‌ನ ಮಾತಿಗೆ ಸ್ಪಂದಿಸಿದರು. ಬಹುಕೋಟಿ ಸಂಪತ್ತಿನ ಒಡೆಯನೊಬ್ಬ, ದುಡಿಯುವ ಜನರ ಬದುಕಿನ ಬಗ್ಗೆ ಎಳ್ಳಷ್ಟೂ ಗೊತ್ತಿರದ ಮತ್ತು ಅವರ ಜತೆ ಯಾವುದೇ ಸಂಪರ್ಕವಿಲ್ಲದವನು ಜನರ ಅತೃಪ್ತಿಯ ಪರವಹಿಸುತ್ತಾನೆ.

ಎಲ್ಲಾ ಚುನಾವಣಾ ಸಮೀಕ್ಷೆಯಲ್ಲಿಯೂ ಹಿಲರಿ ಕ್ಲಿಂಟನ್ ಗೆಲ್ಲುತ್ತಾರೆಂದು ಭವಿಷ್ಯ ಹೇಳಿದ್ದರು, ಆದರೆ ಅದು ಸುಳ್ಳಾಯಿತು. ಹಿಲರಿ ಕ್ಲಿಂಟನ್ ಹೆಚ್ಚು ಮತಗಳನ್ನು ಪಡೆದಿದ್ದಾಗ್ಯೂ, ಅಮೆರಕದ ಚುನಾವಣಾ ವ್ಯವಸ್ಥೆಯ ಪ್ರಕಾರ ಟ್ರಂಪ್ ಎಲ್ಲಾ ರಾಜ್ಯಗಳ ಬಹುಪಾಲು ಮತ ಗಳಿಸಿದ್ದರು. ರಾಜ್ಯದ ಕಾರ್ಯದರ್ಶಿ ಸ್ಥಾನದಲ್ಲಿ ಅಧಿಕಾರ ಹೊಂದಿದ್ದವರಾಗಿ ಮತ್ತು ಮುಂಚೆ ಸೆನೆಟರ್ ಆಗಿದ್ದವರಾಗಿ ಹಿಲರಿ ಕ್ಲಿಂಟನ್ ಸರ್ಕಾರದ ಪರವಿರುವ ಸಂಪ್ರದಾಯವಾದಿ ನೀತಿ ನಿರೂಪಕರಾಗಿ ಮತದಾರರಿಗೆ ಕಂಡರು. ಕ್ಲಿಂಟನ್ ಅವರ ದೆಮಾಕ್ರಾಟಿಕ್ ಪಕ್ಷದ ಎದುರಾಳಿಯಾಗಿ ಎಡಪಂಥೀಯ ಪ್ರಚಾರಕರಾಗಿ ಬರ್ನಿ ಸ್ಯಾಂಡರ್ಸ್ ಪ್ರಾರಂಭದಲ್ಲಿ ಒಳ್ಳೆಯ ಜನಸ್ಪಂದನ ಪಡೆದರಾದರೂ, ಅವರನ್ನು ಸ್ಪರ್ಧೆಯಿಂದ ಹೊರ ತಳ್ಳಲು ಹಿಲರಿಯವರು ಡೆಮಾಕ್ರಾಟಿಕ್ ಪಕ್ಷದ ಯಂತ್ರವನ್ನೇ ಬಳಸಿದರು. ಅನೇಕ

ದುಡಿಯುವ ಜನರ ಬೆಂಬಲಿಗರು, ಯಾವಾಗ ಬರ್ನಿ ಸ್ಯಾಂಡರ್ಸ್ ಸ್ಪರ್ಧೆಯಿಂದ ಹೊರ್ ಹೋದರೋ, ಆಗ ಅವರು ಟ್ರಂಪ್ ಪರವಾಗಿ ಮತ ಚಲಾಯಿಸಿದಂತೆ ಕಾಣುತ್ತದೆ.

ಈ ಗೆಲುವನ್ನು, ಅದು ಅಂತರ್ರಾಷ್ಟ್ರೀಯ ವಿದ್ಯಮಾನಗಳ ಮೇಲೆ ಬೀರಲಿರುವ ಪರಿಣಾಮದಿಂದಾಗಿ ಆತಂಕದಿಂದ ನೋಡಲಾಗುತ್ತಿದೆ. ಟ್ರಾನ್ಸ್-ಪೆಸಿಫಿಕ್ ಪಾಲುದಾರ(ಟಿ.ಪಿ.ಪಿ) ಒಪ್ಪಂದವನ್ನು ಮುಂದುವರಿಸುವುದಿಲ್ಲ ಎಂದು ಟ್ರಂಪ್ ಈಗಾಗಲೇ ಸೂಚನೆ ಕೊಟ್ಟಿದ್ದಾರೆ; ಒಬಾಮಾ ಆಡಳಿತವು ಈ ಒಪ್ಪಂದಕ್ಕಾಗಿ ಮಾತುಕತೆ ಮಾಡಿ, ಇದೊಂದು ಮಾನವ ಜನಾಂಗದ ಅತ್ಯಂತ ದೊಡ್ಡ ವ್ಯಾಪಾರ ಒಪ್ಪಂದ ಎಂದು ಬಣ್ಣಿಸಿತ್ತು. ಮೂರನೇ ಜಗತ್ತಿನ ರಾಷ್ಟ್ರಗಳಿಗೆ ಉತ್ಪಾದನಾ ಘಟಕಗಳನ್ನು ಸ್ಥಲಾಂತರಿಸುವುದರ ವಿರುದ್ಧ ಮತ್ತು ಅಮೆರಿಕದ ಬಿಪಿಓ ಕಂಪನಿಗಳು ಭಾರತದಂತಹ ದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದರ ವಿರುದ್ಧ ಹಾಗೂ ಅದರ ಜತೆಯಲ್ಲೇ ಮುಂಬರುವ ವಲಸೆಗಾರರ ವೀಸಾಗಳ ಸಂಖ್ಯೆಯ ಮೇಲೆ ನಿರ್ಬಂಧ ಹೇರುವ ಯೋಜನೆಗಳಂಥ ಟ್ರಂಪ್‌ನ ಕರ್ಣಕಠೋರ ನಿಲುವು ಅಪಾರ ಸಂಖ್ಯೆಯ ಭಾರತೀಯರ ಮೇಲೆ ದುಷ್ಪರಿಣಾಮ ಬೀರಲಿದೆ. ಅಧಿಕೃತ ದಾಖಲೆಗಳಿಲ್ಲದೆ ಅಮೆರಿಕದಲ್ಲಿ ನೆಲೆಸಿದ್ದಾರೆ ಎಂದು ಹೇಳಲಾಗುವ ಸುಮಾರು 30 ಲಕ್ಷ ವಲಸೆಗಾರರನ್ನು ದೇಶದಿಂದ ಹೊರಗಟ್ಟುವುದಾಗಿ ಅವರು ಈಗಾಗಲೇ ಘೋಷಿಸಿದ್ದಾರೆ. ಈ ಆತಂಕಗಳು ಎಷ್ಟು ನಿಜವಾಗುತ್ತವೆ ಎಂಬುದನ್ನು ಕಾಲ ಮಾತ್ರವೇ ಹೇಳುತ್ತದೆ.

ಒಟ್ಟಿನಲ್ಲಿ, ಟ್ರಂಪ್‌ನ ವೇದಿಕೆ ಬಲಪಂಥೀಯವಾಗಿರುವಾಗಲೇ, ಅವರ ನೀತಿಗಳು ವಿರೋಧಾಭಾಸದ ಪರಿಣಾಮ ಬೀರುವ ಸಾಧ್ಯತೆ ಕೂಡ ಇದೆ. ಉದಾಹರಣೆಗೆ, ಅಧ್ಯಕ್ಷ ಒಬಾಮಾಗೆ ತದ್ವಿರುದ್ಧವಾಗಿ, ಟ್ರಂಪ್ ಅವರು ಪುಟಿನ್ ಮತ್ತು ರಷ್ಯಾ ಜತೆಯಲ್ಲಿ ಸಂಬಂಧಗಳನ್ನು ಉತ್ತಮಪಡಿಸಿಕೊಳ್ಳುವ ಇಂಗಿತ ವ್ಯಕ್ತಪಡಿಸಿದ್ದಾರೆ. ಇದು, ಯುಕ್ರೇನ್ ಬಗೆಗಿನ ಮತ್ತು ನ್ಯಾಟೋದ ಪೂರ್ವದಿಕ್ಕಿನತ್ತ ಮೂಗುತೂರಿಸುವ ಧೋರಣೆಗಳಿಂದ ಉಂಟಾದ ತಿಕ್ಕಾಟದ ಮೇಲೆ ನೇರ ಪರಿಣಾಮ ಬೀರಲಿದೆ. ಅದೇ ಸಮಯದಲ್ಲಿ, ಟ್ರಂಪ್ ಅವರು ಚೀನಾದತ್ತ ವಿಶೇಷವಾಗಿ ವ್ಯಾಪಾರ ಮತ್ತು ಆರ್ಥಿಕ ವಿಷಯಗಳಲ್ಲಿ ಕಠಿಣ ಧೋರಣೆ ತಳೆಯಲ್ಲಿದ್ದಾರೆ, ಮತ್ತೊಂದೆಡೆ, ಟಿ.ಪಿ.ಪಿ ಒಪ್ಪಂದ ರದ್ದುಮಾಡಿರುವುದು, ಅದನ್ನು ಬಳಸಿ ತಮ್ಮ ಅಧಿಪತ್ಯವನ್ನು ವಿಸ್ತರಿಸಿಕೊಳ್ಳುವ ಮತ್ತು ಆ ದೇಶಗಳ ರಾಷ್ಟ್ರೀಯ ಸಾರ್ವಭೌಮತೆಯನ್ನು ಕ್ಷೀಣಿಸಬಹುದೆಂಬ ಅಭಿಲಾಷೆ ಹೊಂದಿದ್ದ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ ಮತ್ತು ದೊಡ್ಡ ಕಾರ್ಪೋರೇಟುಗಳಿಗೆ ಹಿನ್ನಡೆಯಾಗಲಿದೆ. ಆದಕಾರಣ ಟ್ರಂಪ್ ಅಧ್ಯಕ್ಷತೆಯಲ್ಲಿನ ವಿದೇಶಾಂಗ ನೀತಿಯು ಯಾವ ದಿಕ್ಕಿನತ್ತ ಹೋಗಲಿದೆ ಎಂಬುದನ್ನು ಊಹಿಸಲಸಾಧ್ಯ ಮತ್ತು ನಿಶ್ಚಿತವಲ್ಲ.

## ಇಟಲಿಯ ಜನಮತಸಂಗ್ರಹ

ನವ–ಉದಾರೀಕೃತ ಆರ್ಥಿಕ ಸುಧಾರಣೆಗಳಿಂದಾಗಿ ತಮ್ಮ ಮೇಲೆ ಸತತವಾಗಿ ಹೇರುತ್ತಿರುವ ಹೊರೆಗಳ ವಿರುದ್ಧ ದುಡಿಯುವ ಜನರ ಕೋಪವನ್ನು ಸಂವಿಧಾನ ಬದಲಾವಣೆಗಾಗಿ ಇತ್ತೀಚೆಗೆ ಇಟಲಿಯಲ್ಲಿ ನಡೆದ ಜನಮತಸಂಗ್ರಹದ ಸೋಲಿನಲ್ಲಿ ಮತ್ತೆ ಕಾಣಬಹುದು. ಮೇಲ್ಮನೆಯ ಅಧಿಕಾರಗಳನ್ನು ಮೊಟಕುಗೊಳಿಸಲು ಮತ್ತು ಕೆಳಮನೆಗೆ ಅದು ಅಡಿಯಾಳಾಗಿರಬೇಕೆಂದು ಸಂವಿಧಾನ ತಿದ್ದುಪಡಿಯನ್ನು ಸೆನೆಟ್ ಮಂಡಿಸಿತ್ತು(ಭಾರತದಲ್ಲಿ ರಾಜ್ಯಸಭೆಯನ್ನು ನಿರ್ಲಕ್ಷಿಸಿ ತಮಗೆ ಬೇಕಾದ ಬಹು ಮುಖ್ಯ ಮಸೂದೆಗಳನ್ನು 'ಹಣಕಾಸು ಮಸೂದೆ' ಎಂಬ ನೆಪವೊಡ್ಡಿ ಅಂಗೀಕರಿಸಲು ಬಿಜೆಪಿ ಯತ್ನ ನಡೆಸುತ್ತಿರುವಂತೆ, ಲೋಕಸಭೆಗೆ ಮಾತ್ರ ಅಂತಹ ಮಸೂದೆಗಳನ್ನು ಅಂಗೀಕರಿಸಲು ಅಧಿಕಾರ ಇರುವುದು). ಈ ತಿದ್ದುಪಡಿಯನ್ನು ನವ–ಉದಾರೀಕೃತ ಸುಧಾರಣಾವಾದಿಗಳು, ಅಂತರ್‍ರಾಷ್ಟ್ರೀಯ ಹಣಕಾಸು ಬಂಡವಾಳದ ಒತ್ತಡಕ್ಕೆ ಮಣಿದು ತಮ್ಮ ಮಸೂದೆಗಳು ಶೀಘ್ರವಾಗಿ ಅಂಗೀಕಾರವಾಗಲೆಂದು ಮಂಡಿಸಿದ್ದರು. ಬಡವರನ್ನು ಇನ್ನೂ ಬಡವರನ್ನಾಗಿಸುವ ಮತ್ತು ಶ್ರೀಮಂತರನ್ನು ಹೆಚ್ಚು ಶ್ರೀಮಂತರನ್ನಾಗಿಸುವ ಮತ್ತು ಆ ಮೂಲಕ ಆದಾಯ ಅಸಮಾನತೆಯನ್ನು ಹೆಚ್ಚಿಸುವ ನವ–ಉದಾರೀಕೃತ ಸುಧಾರಣೆಗಳನ್ನು ಹಿಂಬಾಗಿಲಿಂದ ತರಲು ಪ್ರಯತ್ನಿಸುವ ಸಂವಿಧಾನ ತಿದ್ದುಪಡಿಯನ್ನು ಸೋಲಿಸುವ ಮೂಲಕ ಇಟಲಿಯ ಜನರು ಸರ್ಕಾರದ ನೀತಿಯನ್ನು ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸಿದರು. ಇಟಲಿಯ ಪ್ರಧಾನ ಮಂತ್ರಿ ರಾಜೀನಾಮೆ ನೀಡಬೇಕಾಯಿತು. ಈ ಸಂವಿಧಾನ ತಿದ್ದುಪಡಿಯ ವಿರುದ್ಧ ಬಲಪಂಥೀಯರೂ ಪ್ರಬಲವಾಗಿ ಪ್ರಚಾರ ಮಾಡಿದ್ದರು ಮತ್ತು ಮುಂಬರಲಿರುವ ಇಟಲಿ ಚುನಾವಣೆಗಳಲ್ಲಿ ಅದರ ಪ್ರಯೋಜನ ಪಡೆಯುವ ಸಾಧ್ಯತೆ ಇದೆ.

## ಬ್ರೆಕ್ಸಿಟ್ ನಂತರದ ಬೆಳವಣಿಗೆಗಳು

ಎರಡು ವರ್ಷಗಳಲ್ಲಿ ಯೂರೋಪಿಯನ್ ಯೂನಿಯನ್ನಿನಿಂದ ನಿರ್ಗಮಿಸುವ ಪ್ರಕ್ರಿಯೆಯ ಮಾತುಕತೆಯನ್ನು ಯುಕೆಯು ಇನ್ನೂ ಪ್ರಾರಂಭಿಸಿಲ್ಲ. ಅದೇಕೆಂದರೆ ಅಲ್ಲಿಯ ಸುಪ್ರೀಂ ಕೋರ್ಟು ಜನಮತಗಣನೆಯ ಫಲಿತಾಂಶವನ್ನು ಪ್ರಶ್ನಿಸಿರುವ ವಿಷಯವನ್ನು ಕೈಗೆತ್ತಿಕೊಂಡಿದೆ. ಹನ್ನೊಂದು ನ್ಯಾಯಾಧೀಶರ ಪೀಠ ಆ ವಿಷಯವನ್ನು ಪರಿಶೀಲಿಸಲಿದೆ ಮತ್ತು ಜನವರಿ 2017ರಲ್ಲಿ ತೀರ್ಪು ಹೊರಬೀಳುವ ಸಂಭವವಿದೆ. ಯುಕೆಯ ಪ್ರಧಾನಿ ಥೆರೇಸ ಮೇಯವರು ಮಾರ್ಚ್ 2017ರಲ್ಲಿ ನಿರ್ಗಮನ ಪ್ರಕ್ರಿಯೆಯ ಮಾತುಕತೆಗೆ ಸಂಬಂಧಿಸಿದ ಪರಿಚ್ಛೇದ 50ನ್ನು ಆಚರಣೆಗೆ ತರುವ ಕಾರ್ಯ ಪ್ರಾರಂಭಿಸಿದ್ದಾರೆ. ಸುಪ್ರೀಂ ಕೋರ್ಟು ತೀರ್ಪು ಬಂದ ಮೇಲೆಯೇ ಯುಕೆಯು ಕಾನೂನಾತ್ಮಕವಾಗಿ ಹೊರಬರುವ ಪ್ರಕ್ರಿಯೆ ಶುರುಮಾಡಬಹುದು. ಜನಮತಗಣನೆಯ ಫಲಿತಾಂಶವನ್ನು ಸಂಸತ್ತಿನ ಮುಂದೆ ಅಂಗೀಕಾರಕ್ಕಾಗಿ ಮಂಡಿಸಬೇಕೆ ಎನ್ನುವ ಮುಖ್ಯ ವಿಷಯವೇ ಕೋರ್ಟು ತೀರ್ಮಾನಿಸಬೇಕಿರುವುದು.

ಬ್ರೆಕ್ಸಿಟ್ ನಂತರ ಯುಕೆಯಲ್ಲಿ ಉತ್ಪಾದನಾ ಚಟುವಟಿಕೆಗಳು ತೀವ್ರತರವಾಗಿ ಕುಸಿದಿವೆ. ಆದರೆ, ಒಂದು ಸಮೀಕ್ಷೆಯ ಪ್ರಕಾರ ಉತ್ತಮ ಉದ್ಯೋಗದ ಸಾಧ್ಯತೆ ಮತ್ತು ಸಂಬಳ ಏರಿಕೆಯ ಬಗ್ಗೆ ಬಹುಪಾಲು ಕಾರ್ಮಿಕರು ಆಶಾಭಾವನೆ ಹೊಂದಿದ್ದಾರೆ. ಬ್ರೆಕ್ಸಿಟ್ ನಂತರ 2016 ಸೆಪ್ಟೆಂಬರ್‌ನ ಮೊದಲ ತ್ರೈಮಾಸಿಕದಲ್ಲಿ ಉದ್ಯೋಗಹೀನತೆ(ಜಾಬ್‌ಲೆಸ್ನೆಸ್) 1.6 ಮಿಲಿಯನ್ ಕಡಿಮೆಯಾಗಿದೆ. ಉದ್ಯೋಗದಲ್ಲಿರುವವರ ಸಂಖ್ಯೆ 4,61,000 ಹೆಚ್ಚಾಗಿದೆ. ಹೆಚ್ಚು ಹಣದುಬ್ಬರದೊಂದಿಗೆ ಸಂಬಳ 2.4% ಹೆಚ್ಚಾಗಿದ್ದರೆ, ಬ್ರಿಟಿಷ್ ಪೌಂಡಿನ ಮೌಲ್ಯ ಇಳಿತ ಕಂಡಿರುವುದರಿಂದ ನೈಜಸಂಬಳ 1.7% ಕುಸಿದಿದೆ.

ಅನಿಶ್ಚಿತತೆಯ ಸನ್ನಿವೇಶ ಅಲ್ಲಿದೆ ಮತ್ತು ನಿರ್ಗಮನ ಸಂಧಾನ ಮುಗಿಯುವ ತನಕ ಮುಂದುವರಿಯಲಿದೆ. 2020ರ ವರೆಗೂ ಬ್ರಿಟಿಷ್ ಆರ್ಥಿಕತೆಯು ಅನಿಶ್ಚಿತತೆ ಮತ್ತು ಪ್ರಕ್ಷೋಭೆಯ ಪರಿಸ್ಥಿತಿಯಲ್ಲೇ ಮುಂದುವರಿಯುವಂತೆ ಕಾಣುತ್ತಿದೆ.

## ವ್ಯತಿರಿಕ್ತ ಬೆಳವಣಿಗೆಗಳು

ಆದರೆ, ಕೆಲವು ದೇಶಗಳಲ್ಲಿ, ಇತ್ತೀಚಿನ ದಿನಗಳಲ್ಲಿ ಬಲಪಂಥೀಯ ಶಕ್ತಿಗಳು ಸೋಲುಂಡಿವೆ. ಸೈಪ್ರಸ್ ನಲ್ಲಿ, ಕಮ್ಯುನಿಸ್ಟ್ ಪಕ್ಷ(ಎಕೆಇಎಲ್) ಪ್ರಾದೇಶಿಕ ಮುನಿಸಿಪಲ್ ಚುನಾವಣೆಗಳಲ್ಲಿ ಗಣನೀಯ ಗೆಲುವನು ಗಳಿಸಿದ್ದಾರೆ; ಕಮ್ಯುನಿಸ್ಟ್ ಪಕ್ಷದ ಪ್ರಭಾವ ಕ್ಷೀಣಿಸುತ್ತಿದ್ದ ಪ್ರಕ್ರಿಯೆ ನಿಂತಿದೆ ಹಾಗೂ ಶೇಕಡಾವಾರು ಮತದಾನದಲ್ಲಿ ಏರಿಕೆಯ ಲಕ್ಷಣಗಳು ಕಾಣುತ್ತಿವೆ. ಹಣಕಾಸು ಬಿಕ್ಕಟ್ಟು(ಕರಗುತ್ತಿದ್ದ) ಪ್ರಾರಂಭವಾದಾಗ ದೇಶದ ಅಧ್ಯಕ್ಷತೆ ಕಮ್ಯುನಿಸ್ಟರ ಕೈಲಿತ್ತು; ಕ್ಷಿಪ್ರದಲ್ಲೇ ಬಲಪಂಥೀಯ ಮೈತ್ರಿಕೂಟ ಅಧಿಕಾರ ಹಿಡಿಯಿತು. ಆಸ್ಟ್ರಿಯಾದ ಅಧ್ಯಕ್ಷೀಯ ಚುನಾವಣೆಯಲ್ಲಿ, ಉಗರ ಬಲಪಂಥೀಯ ಅಧ್ಯಕ್ಷೀಯ ಅಭ್ಯರ್ಥಿಯನ್ನು ಸೋಶಿಯಲ್ ಡೆಮಾಕ್ರಾಟಿಕ್ ಹಸಿರು ಮೈತ್ರಿಕೂಟ ಸೋಲಿಸಿತು. ರೊಮಾನಿಯಾದಲ್ಲಿ ಮಧ್ಯ–ಎಡ ಸೋಶಿಯಲ್ ಡೆಮಾಕ್ರಾಟಿಕ್ ಪಕ್ಷಚುನಾವಣೆಯಲ್ಲಿ ಗೆದ್ದು ಬಲಪಂಥೀಯ ಶಕ್ತಿಗಳ ಬಲ ಕುಗ್ಗಿಸಿತು. ಜರ್ಮನಿಯಲ್ಲಿ, ಇತ್ತೀಚೆಗೆ ಬರ್ಲಿನ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಗಳು ನಿರಾಶ್ರಿತರು ಮತ್ತು ಜರ್ಮನ್ ವಲಸೆ ನೀತಿಗಳನ್ನು ಬೆಂಬಲಿಸಿದವರ ಮೇಲೆ ಮತ್ತೆ ದಾಳಿ ಮಾಡಲು ಬಲಪಂಥೀಯ ಶಕ್ತಿಗಳಿಗೆ ಅವಕಾಶ ಒದಗಿಸಿತು.

ಸ್ಪಷ್ಟವಾಗಿ, ಎಲ್ಲೆಲ್ಲಿ ಎಡಪಂಥೀಯ ಶಕ್ತಿಗಳು ಪ್ರತಿರೋಧ ಒಡ್ಡುತ್ತಿವೆಯೋ, ಕೊನೇಪಕ್ಷ ಅಂಥಲ್ಲಿ ಬಲಪಂಥೀಯರನ್ನು ಹಿಮ್ಮೆಟ್ಟಿಸಲು ಸಾಧ್ಯವಾಗಿದೆ. ಆದಕಾರಣ, ಅಂತಿಮವಾಗಿ, ನಾವು ಈ ಹಿಂದೆ ತೀರ್ಮಾನಿಸಿದಂತೆ, ಮುಂದಿನ ರಾಜಕೀಯ ಬೆಳವಣಿಗೆಗಳ ಹಾದಿಯು, ಅಪಾರ ಸಂಖ್ಯೆಯ ಜನರ ನಡುವೆ ಮಡುಗಟ್ಟುತ್ತಿರುವ ಅತೃಪ್ತಿಯನ್ನು ಯಾರು ಸಾಣೆಹಿಡಿದು ಅಣಿಗೊಳಿಸುತ್ತಾರೆ–ಎಡ ಶಕ್ತಿಗಳೊ ಅಥವಾ ಬಲ ಪ್ರತಿಗಾಮಿ ರಾಜಕೀಯ ಕೂಟವೊ– ಅನ್ನುವುದರ ಮೇಲೆ ಅವಲಂಬಿತವಾಗಿದೆ.

## ಜನ ಚಳುವಳಿಗಳು

ಆದಾಗ್ಯೂ, ನವ ಉದಾರೀಕರಣವು ಉಸಿರುಗಟ್ಟಿಸುವ ಉಗ್ರ ಆರ್ಥಿಕ ನೀತಿಗಳನ್ನು ಅಪಾರ ಜನಸಮುದಾಯದ ಮೇಲೆ ಹೊರಿಸುತ್ತಿರುವುದರ ವಿರುದ್ಧ ಅನೇಕ ದೇಶಗಳಲ್ಲಿ ದೊಡ್ಡ ಪ್ರತಿಭಟನೆಗಳು ನಡೆಯುತ್ತಿವೆ. ಈ ನವ ಉದಾರೀಕರಣ ನೀತಿಗಳ ವಿರುದ್ಧ ಜನರ ಕೋಪವನ್ನು ಪ್ರತಿಬಿಂಬಿಸುವಂತೆ ಗ್ರೀಸ್‌ನಲ್ಲಿ ಒಂದು ಯಶಸ್ವೀ ಸಾರ್ವಜನಿಕ ಮುಷ್ಕರ ನಡೆಯಿತು; ಅದರೊಟ್ಟಿಗೆ ಕಾರ್ಮಿಕರ ಪ್ರತಿಭಟನಾ ಸಭೆಗಳು ಮತ್ತು ಮೆರವಣಿಗೆಗಳು ನಡೆದವು. ಸಂಬಳ ಮತ್ತು ಪೆನ್ಶನ್ ಏರಿಕೆಗೆ ಮತ್ತು ಖಠಿಣ ಆರ್ಥಿಕ ನಿರ್ಬಂಧಗಳನ್ನು ಹಿಂತೆಗೆಯಲು ಒತ್ತಾಯಿಸಿ ಸ್ಪೈನ್‌ನಲ್ಲಿ ದೊಡ್ಡ ಪ್ರತಿಭಟನೆಗಳು ನಡೆದವು. ದೇಶದ ಅತ್ಯಂತ ದೊಡ್ಡ ಕಾರ್ಮಿಕ ಸಂಘಗಳು ಸಂಘಟಿಸಿದ ಮೆರವಣಿಗೆಗಳಲ್ಲಿ 30000ಕ್ಕೂ ಮಿಕ್ಕಿ ಜನರು ಪಾಲ್ಗೊಂಡರು. ಬ್ರಿಟಿಷ್ ರೈಲ್ವೇ ನೌಕರರು, ಪೋಸ್ಟಲ್ ನೌಕರರು ಮತ್ತು ಆರೋಗ್ಯ ಸೇವೆ ನೌಕರರು ತಮ್ಮ ಪ್ರತಿಭಟನಾ ಸಭೆಗಳನ್ನು ಮತ್ತು ಮುಷ್ಕರಗಳನ್ನು ಮುಂದುವರಿಸುತ್ತಲೇ ಇದ್ದಾರೆ. ಝೆಕ್ ಗಣರಾಜ್ಯದಲ್ಲಿ ಮುಷ್ಕರ ಮಾಡಿದ ಪೋಸ್ಟ್ ಮತ್ತು ಸಂಪರ್ಕ ಇಲಾಖೆ ನೌಕರರು ತಮ್ಮ ವೇತನ ಏರಿಕೆಗೆ ಒತ್ತಾಯಿಸುವಾಗಲೇ, ಸೇವಾ ಸೌಲಭ್ಯಗಳ ಮೇಲೆ ಹೆಚ್ಚಿನ ಪ್ರತಿಕೂಲ ಪರಿಣಾಮ ಬೀರುವ ಕ್ರಮಗಳನ್ನು ವಿರೋಧಿಸಿದರು.

ಆದರೆ ಇಂತಹ ಜನ ಚಳುವಳಿಗಳು ಹೆಚ್ಚಾಗುತ್ತಿರುವಾಗ, ಈ ಸಂದರ್ಭಗಳಲ್ಲಿ ಬಲಪಂಥೀಯರು ಜನರ ಅತೃಪ್ತಿಗಳನ್ನು ರಾಜಕೀಯವಾಗಿ ಬಳಸಿಕೊಳ್ಳುವಲ್ಲಿ ಸಮರ್ಥರಾಗಿದ್ದಾರೆ.

## ಲ್ಯಾಟಿನ್ ಅಮೆರಿಕಾ

ಕಾಮ್ರೇಡ್ ಫಿಡೆಲ್ ಕ್ಯಾಸ್ಟ್ರೊರವರ ಸಾವು ಲ್ಯಾಟಿನ್ ಅಮೆರಿಕಾದ ರಾಜಕೀಯಕ್ಕೆ, ಅದರಲ್ಲೂ ಎಡ ಶಕ್ತಿಗಳಿಗೆ ದೊಡ್ಡ ಆಘಾತವೇ ಸರಿ. ಈ ದೇಶಗಳ, ಅದರಲ್ಲೂ ಚುನಾಯಿತ ಎಡ ಸರ್ಕಾರಗಳು ಇರುವಲ್ಲಿ, ಆಂತರಿಕ ವ್ಯವಹಾರಗಳಲ್ಲಿ ಅಮೆರಿಕ ಸಾಮ್ರಾಜ್ಯವಾದವು' ಮೂಗು ತೂರಿಸುವ ಪ್ರಯತ್ನವನ್ನು ಹೆಚ್ಚು ಮಾಡಲಿದೆ. ವೆನಿಜೂಲಾದಲ್ಲಿ ಅಂತಹ ನೀತಿಗೆಟ್ಟ ಹಸ್ತಕ್ಷೇಪವು ಎದ್ದು ಕಾಣುತ್ತಿದೆ; ಅಲ್ಲಿ ಬೊಲಿವೇರಿಯನ್ ಸರ್ಕಾರವನ್ನು ಅಸ್ಥಿರಗೊಳಿಸಲು ಬಲಪಂಥೀಯರು ಯತ್ನಿಸುತ್ತಿದ್ದಾರೆ. ಅಧ್ಯಕ್ಷ ಮುಡೊರೊ ವಿರುದ್ಧ ವಿರೋಧಿಗಳು ಮಂಡಿಸಲು ಬಯಸಿದ್ದ ದೋಷಾರೋಪಣೆ ನಿರ್ಣಯ ತಾಂತ್ರಿಕ ಕಾರಣಗಳಿಂದ ಯಶಸ್ವಿಯಾಗಲಿಲ್ಲ. ಅರ್ಜಟೈನಾ ಮತ್ತು ಬ್ರೆಜಿಲ್‌ನಲ್ಲಿ ಇತ್ತೀಚೆಗೆ ಆಯ್ಕೆಯಾಗಿದ್ದ ಬಲಪಂಥೀಯ ಸರ್ಕಾರಗಳು ಅಲ್ಲಿಯ ಪ್ರಾದೇಶಿಕ ಕೂಟ ಮರ್ಕೊಸುರ್ ನಿಂದ ವೆನಿಜೂಲಾವನ್ನು ಹೊರಹಾಕಲು ಯತ್ನ ನಡೆಸಿದವು. ಆದರೆ ಈ ಯತ್ನವನ್ನು ವೆನಿಜೂಲಾ ಇನ್ನಿತರ ಪ್ರಗತಿಪರ ಸರ್ಕಾರಗಳ ನೆರವಿನಿಂದ ಪ್ರತಿರೋಧಿಸಿತು. ಇತ್ತೀಚೆಗೆ ವೆನಿಜೂಲಾ ಸರ್ಕಾರವು ಹೆಚ್ಚು ಮೌಲ್ಯದ ನೋಟುಗಳನ್ನು

ಅಮಾನ್ಯಗೊಳಿಸಿತು. ಅದರಿಂದ ಜನರಿಗಾದ ತೊಂದರೆಗಳಿಂದಾಗಿ ಮತ್ತು ಹಚ್ಚಿದ ಪ್ರತಿರೋಧಗಳಿಂದಾಗಿ ಸರ್ಕಾರ ತನ್ನ ತೀರ್ಮಾನದಿಂದ ಹಿಂದೆ ಸರಿಯಿತು.

ಅಖಂಡವಾಗಿ ಲ್ಯಾಟಿನ್ ಅಮೆರಿಕಾದಲ್ಲಿ ಇನ್ನೂ ಹಲವಾರು ಪ್ರವೃತ್ತಿಗಳಿ/ ಒಳಗುಂಪುಗಳಿರುವುದನ್ನು ನಾವು ಗಮನಿಸಬೇಕು. ನಿಕರಾಗುವಾದಲ್ಲಿ ಡೇನಿಯಲ್ ಆರ್ಟೆಗಾ ಅವರು ತಮ್ಮ ಜನಪ್ರಿಯ ಬಡತನ ನಿರ್ಮೂಲನಾ ಕ್ರಮಗಳಿಂದಾಗಿ ಮತ್ತೆ ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ; ಅಲ್ಲಿ ಬಡತನ ಸರಿಸುಮಾರು 13% ಕಡಿಮೆಯಾಗಿದೆ. ಬೊಲಿವಿಯಾದಲ್ಲಿ ಮೂರನೇ ಬಾರಿ ಅಧ್ಯಕ್ಷನಾಗಲು ಜನಾದೇಶ ಪಡೆಯಲು ನಡೆದ ಜನಮತಸಂಗ್ರಹದಲ್ಲಿ ಸೋಲಾಗಿದ್ದಾಗ್ಯೂ ಇವೊ ಮೊರಾಲ್ಸ್ ಅವರು ಮುಂದಿನ ವರ್ಷದ ಅಧ್ಯಕ್ಷೀಯ ಚುನಾವಣೆಯಲ್ಲಿ ಸೆಣೆಸಲು ಆಯ್ಕೆಯಾಗಿದ್ದಾರೆ. ಆದರೆ, ಇತ್ತೀಚೆಗೆ ಹವಾನಾದಲ್ಲಿ ಫಿಡೆಲ್ ಕ್ಯಾಸ್ಟ್ರೊಗೆ ಶ್ರದ್ಧಾಂಜಲಿ ಸಲ್ಲಿಸುವ ಸಮಾರಂಭದಲ್ಲಿ ಮಂಚೂಣಿಯಲ್ಲಿದ್ದ ರ್‍ಯಾಫೆಲ್ ಕೊರೆ ಅವರು ಇಕ್ವೆಡಾರ್‌ನ ಮುಂದಿನ ವರ್ಷಗಳ ಚುನಾವಣೆಯಲ್ಲಿ ಮತ್ತೊಂದು ಅವಧಿ ಕಣಕ್ಕಿಳಿಯಲು ಸಮ್ಮತಿಸಲಿಲ್ಲ. ಬೊಲಿವಿಯಾ ಮತ್ತು ಇಕ್ವೆಡಾರ್ ಎರಡರಲ್ಲೂ ಅಮರಿಕಾ ಸಾಮ್ರಾಜ್ಯವಾದದ ಬೆಂಬ'ಲ ಪಡೆದ ಬಲಪಂಥೀಯ ಶಕ್ತಿಗಳು ಸರ್ಕಾರದ ಮೇಲೆ ಮತ್ತೆ ಹಿಡಿತ ಸಾಧಿಸಲು ಯತ್ನಿಸುತ್ತಿವೆ. ಬ್ರೆಜಿಲ್‌ನ ಹಂಗಾಮಿ ಅಧ್ಯಕ್ಷರ ಭ್ರಷ್ಟಾಚಾರ ಹಗರಣಗಳ ವಿರುದ್ಧದ ರೂಪದಲ್ಲಿ ಡಿಲ್ಮಾ ರೌಸೆಫ್‌ನ ವಿರುದ್ಧದ ದೋಷಾರೋಪಣೆಯು ಕ್ರಮಗಳ ವಿರುದ್ಧ ವ್ಯಾಪಕ ಪ್ರತಿಭಟನೆಗಳಲ್ಲಿ ಮುಂದುವರಿಯುತ್ತಲೇ ಇವೆ. ಅರ್ಜಂಟೈನಾದಲ್ಲಿ ಹಿಂದಿನ ಎಡ ನೇತೃತ್ವದ ಸರ್ಕಾರವು ಜಾರಿಗೆ ತಂದಿದ್ದ ಪ್ರಗತಿಪರ ಕ್ರಮಗಳನ್ನು ರದ್ದು ಮಾಡಿದ ಇತ್ತೀಚೆಗೆ ಚುನಾಯಿಸಲ್ಪಟ್ಟ ಬಲಪಂಥೀಯ ಸರ್ಕಾರದ ವಿರುದ್ಧ ಕಾರ್ಮಿಕರ ಪ್ರತಿಭಟನೆಗಳು ವ್ಯಾಪಕವಾಗುತ್ತಿವೆ., ಕೊಲಂಬಿಯಾ ಸರ್ಕಾರ ಮತ್ತು ಎಫ್.ಎ.ಆರ್.ಸಿ(ಕೊಲಂಬಿಯಾದ ಕ್ರಾಂತಿಕಾರಿ ಸಶಸ್ತ್ರ ಪಡೆ) ನಡುವೆ ಆಗಿರುವ ಶಾಂತಿ ಒಪ್ಪಂದ ಅನುಷ್ಠಾನದ ಮೇಲ್ವಿಚಾರಣೆ ನಡೆಸುವ ಸಲುವಾಗಿ, ವಿಶ್ವಸಂಸ್ಥೆಯ ವೀಕ್ಷಕರು ಕೊಲಂಬಿಯಾದಲ್ಲಿದ್ದಾರೆ ಈ ಒಪ್ಪಂದಕ್ಕೆ ಮೊದಲು ವಿರೋಧವಿದ್ದ.ಯ ಒಂದು ವಿಭಾಗ ಈಗಲೂ ತಮ್ಮ ನಿಲುವಿಗೇ ಅಂಟಿಕೊಂಡಿದೆ. ಇದು ಆ ಒಪ್ಪಂದದ ಅನುಷ್ಠಾನಕ್ಕೆ ಯಾವುದೇ ರೀತಿಯ ಅಡಚಣೆಯಾಗದು; ಏಕೆಂದರೆ ಜನಮತಸಂಗ್ರಹದ ಫಲಿತಾಂಶ ಹಾಗೂ ನಂತರದ ರಾಜಕೀಯ ಸಂಧಾನದ ತರುವಾಯ ಸರ್ಕಾರ, ಎಫ್.ಎ.ಆರ್.ಸಿ ಮತ್ತು ಇತರೆ ವಿರೋಧಿ ಗುಂಪುಗಳು ಅದರ ಜಾರಿಗಾಗಿ ಒಪ್ಪಿವೆ.

ನಿಸ್ಸಂಧಿಗ್ಧವಾಗಿ, ಲ್ಯಾಟಿನ್ ಅಮೆರಿಕಾದಲ್ಲಿ, ಎಡ ಶಕ್ತಿಗಳು ಮತ್ತು ಅಮೆರಿಕ ಸಾಮ್ರಾಜ್ಯವಾದ ಬೆಂಬಲಿತ ಬಲಪಂಥೀಯ ಶಕ್ತಿಗಳ ನಡುವಿನ ಕಾಳಗ ಮುಂದುವರಿಯುತ್ತಲೇ ಇದೆ. ಸಾಮ್ರಾಜ್ಯವಾದೀ ಅಮೆರಿಕಾ ಬೆಂಬಲಿತ ಬಲಪಂಥೀಯರ ಒಳಸಂಚನ್ನು ಬಗ್ಗುಬಡಿಯಲು ಜನ ಬೆಂಬಲ ಗಳಿಸುವಲ್ಲಿ

ಎಡ ಶಕ್ತಿಗಳ ಸಾಮರ್ಥ್ಯ ಎಷ್ಟಿದೆ ಎಂಬುದರ ಮೇಲೆ ಈ ಖಂಡದಲ್ಲಿನ ರಾಜಕೀಯ ಭವಿಷ್ಯ ನಿರ್ಧಾರವಾಗುತ್ತದೆ.

## ಚೈನಾ

ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟು ಮುಂದುವರಿಯುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರ ನಿಗದಿಗೊಳಿಸಿದ್ದ 6.5% ನಿಂದ 7% ಬೆಳವಣಿಗೆಯ ಗುರಿಯನ್ನು ಚೈನಾದ ಆರ್ಥಿಕತೆ ಸಾಧಿಸಿದೆ. ಜಾಗತಿಕ ಆರ್ಥಿಕ ಪ್ರಕ್ಷೋಭೆಯ ಹಿನ್ನೆಲೆಯಲ್ಲಿ ವಿಸ್ತಾರಗೊಳ್ಳುತ್ತಿರುವ ಆಂತರಿಕ ಬೇಡಿಕೆಯ ಮೇಲೆ ಭರವಸೆ ಇಟ್ಟು ತನ್ನ ಬೇಡಿಕೆ ಮತ್ತು ಪೂರೈಕೆಯ ಸಂರಚನೆಯ ದೃಷ್ಟಿಕೋನ ಬದಲಾಯಿಸಲು ಮಾಡಿದ ಯತ್ನವು ಅಭಿವೃದ್ಧಿ ಹಾಗೂ ಉದ್ಯೋಗಕ್ಕಾಗಿ ಪ್ರಾಥಮಿಕ ಉತ್ತೇಜನ ನೀಡಬೇಕೆಂಬ ಅವರ ಗುರಿ ಸಾಧನೆಯಾದಂತೆ ಕಾಣುತ್ತಿದೆ. 2016ರ ಅವಧಿಯಲ್ಲಿ ಒಂದು ಕೋಟಿ ಗ್ರಾಮವಾಸಿಗಳನ್ನು ಬಡತನದಿಂದ ಮೇಲೆತ್ತುವ ಗುರಿ ಸಾಧಿಸುವಲ್ಲಿ ಚೈನಾ ಯಶಸ್ವಿಯಾಗಿದೆ. ಚೈನಾದ ಬಡತನ ರೇಖೆಯೆಂದರೆ ನಮ್ಮ ಭಾರತದ ಅರ್ಥ ನಿರೂಪಣೆಗಿಂತ ಬಹಳ ಎತ್ತರದಲ್ಲಿದೆ ಮತ್ತು ಅದು ಜಾಗತಿಕ ಮಾನದಂಡಕ್ಕಿಂತ ಬಹಳ ಮೇಲಿದೆ. ಬಡತನ ಪರಿಹಾರ ಕಾರ್ಯ ಮತ್ತು ಬಡತನ ನಿಧಿಯನ್ನು ಜಾರಿಮಾಡುವ ಮತ್ತು ನಿರ್ವಹಿಸುವ ವಿಷಯದಲ್ಲಿ ಚೈನಾ ಒಂದು ಹೊಸ ಹಂತ ತಲುಪಿದೆ ಎಂಬುದನ್ನು 2016ರ ರಾಷ್ಟ್ರೀಯ ಬಡತನ ನಿವಾರಣೆ ಮತ್ತು ಅಭಿವೃದ್ಧಿ ಕಾರ್ಯ ಸಮ್ಮೇಳನ ಗುರುತುಹಚ್ಚಿದೆ.

## ಹವಾಮಾನ ಬದಲಾವಣೆ ಮಾತುಕತೆಗಳು

ಹವಾಮಾನ ಬದಲಾವಣೆ ಕುರಿತು ಇತ್ತೀಚೆಗಿನ ಮರ್ರಾಕೇಶ್ ಸಮ್ಮೇಳನದಲ್ಲಿ ಅಭಿವೃದ್ಧಿ ಹೊದಿದ ದೇಶಗಳು 2020ಕ್ಕಿಂತ ಹವಾಮಾನ ಬದಲಾವಣೆ ಕುರಿತಂತೆ ಕಾರ್ಯಾಚರಣೆ ಅಧಿಕಗೊಳಿಸುವ ವಿಷಯದಲ್ಲಿ ಚರ್ಚೆ ಮುಂದುವರಿಸಲು ಅಸಾಧಾರಣವಾದ ನಿರ್ಲಕ್ಷ್ಯ ತೋರಿದರು. ಇಲ್ಲಿಯವರೆಗೆ 120 ದೇಶಗಳು ಪ್ಯಾರಿಸ್ ಒಪ್ಪಂದವನ್ನು ಅನುಮೋದಿಸಿವೆ. ಆದರೆ, ಅಮೆರಿಕದ ಅಧ್ಯಕ್ಷರ ಬದಲಾವಣೆ ಮತ್ತು ಡೊನಾಲ್ಡ್ ಟ್ರಂಪ್ ಅವರ ಗೆಲುವಿನೊಂದಿಗೆ ಬಲವಾದ ಸಂಶಯವೊಂದು ಕಾಡುತ್ತಿದೆ – ಒಪ್ಪಂದವನ್ನು ಜಾರಿ ಮಾಡದೆ ಅಥವಾ ಅದರಿಂದ ಹಿಂದೆ ಸರಿಯುವ ಮೂಲಕ ಅಮೆರಿಕವು ಪ್ಯಾರಿಸ್ ಒಪ್ಪಂದವನ್ನು ಹಾಳುಗೆಡಹಬಹುದು; ಅದೇ ಸಮಯದಲ್ಲಿ ಇತರ ದೇಶಗಳು ಒಪ್ಪಂದಕ್ಕೆ ಅಂಟಿಕೊಳ್ಳಬಹುದು. ಇದರಿಂದ ಈ ಹಿಂದೆ ಕ್ಯೋಟೊ ಒಪ್ಪಂದಕ್ಕಾದ ಗತಿಯೇ – ಅನುಮೋದಿಸಲು ನಿರಾಕರಿಸಿದ ಅಮೆರಿಕದ ನಿಲುವಿನಿಂದಾದ ಗತಿ – ಇದಕ್ಕೂ ಆಗಲಿದೆ. ಪ್ಯಾರಿಸ್ ಒಪ್ಪಂದಕ್ಕೆ ಸಹಿ ಬಿತ್ತು ಎಂದಾಕ್ಷಣ ಆ ಒಪ್ಪಂದ ಜಾರಿಯಲ್ಲಿರುವ ಎಲ್ಲಾ ವಾಸ್ತವಿಕ ವಿಷಯಗಳೂ ಇತ್ಯರ್ಥವಾಗಿವೆ ಎಂದರ್ಥವಲ್ಲ. ಅವು ಮುಂಬರುವ ತಿಂಗಳುಗಳಲ್ಲಿ ಇನ್ನೂ ತೀವ್ರವಾಗುವ ಸಾಧ್ಯತೆಗಳಿವೆ ಮತ್ತು ಮುಂದಿನ ಎರಡು ವರ್ಷಗಳ ಕಾಲ ಒಪ್ಪಂದದ ಮೇಲೆ ಪ್ರಭಾವ ಬೀರಲಿದೆ.

## ಹಿಂದೆಂದೂ ಕಂಡು ಕೇಳರಿಯದಇಸ್ರೇಲ್ ವಿರುದ್ಧದ ವಿಶ್ವ ಸಂಸ್ಥೆ ಭದ್ರತಾ ಮಂಡಳಿಯ ನಿರ್ಣಯ

ಪ್ಯಾಲೆಸ್ತೈನಿನ ಪೂರ್ವ ಜರೂಸಲೆಮ್ ಮತ್ತು ಪಶ್ಚಿಮ ದಂಡೆ ಪ್ರದೇಶಗಳಲ್ಲಿ ಇಸ್ರೇಲ್‌ನ ಕಾನೂನುಬಾಹಿರ ವಸಾಹತನ್ನು ಖಂಡಿಸುವ ನಿರ್ಣಯವನ್ನು ವಿಶ್ವ ಸಂಸ್ಥೆ ಭದ್ರತಾ ಮಂಡಳಿಯು ಅಂಗೀಕರಿಸಿದೆ. ಇದರಿಂದಾಗಿ ತಮ್ಮ ತಾಯ್ನಾಡಿನ ಬಹು ವಿಸ್ತಾರವಾದ ಜಮೀನಿನಿಂದ ಪ್ಯಾಲೆಸ್ತೈನಿಯರನ್ನು ಹೊರದಬ್ಬುವ ಕೃತ್ಯ ಮುಂದುವರಿಯಲಿದೆ. ಗಮನಾರ್ಹ ಸಂಗತಿ ಯೆಂದರೆ ಬರಾಕ್ ಒಬಾಮಾ ಅವರ ದುರ್ಬಲ ಅಧ್ಯಕ್ಷತೆಯಲ್ಲಿ, ಹಿಂದೆಲ್ಲಾ ಇಸ್ರೇಲ್ ವಿರೋಧಿ ಯಾವುದೇ ನಿರ್ಣಯ ಮಂಡಿಸಿದಾಗಲೆಲ್ಲಾ ವಿಟೋ ಮಾಡುತ್ತಿದ್ದ ಅಮೆರಿಕವು ಈ ಬಾರಿ ಮತದಾನದ ಸಮಯದಲ್ಲಿ ಗೈರುಹಾಜರಾಯಿತು. ಇದಕ್ಕ ಪ್ರತೀಕಾರ ತೀರಿಸಿಕೊಂಡ ಇಸ್ರೇಲ್ ನಿರ್ಣಯದ ಪರ ಮತಹಾಕಿದ 10 ದೇಶಗಳೊಂದಿಗೆ ತನ್ನ ರಾಜತಾಂತಿಕ್ರ ಸಂಬಂಧಗಳನ್ನು ಕಡಿದುಕೊಂಡಿತು. ಬ್ರಿಟನ್, ಫ್ರಾನ್ಸ್, ರಷ್ಯಾ, ಚೈನಾ, ಜಪಾನ್, ಯುಕ್ರೇನ್, ಅಂಗೋಲಾ, ಈಜಿಪ್ಟ್, ಉರುಗ್ವೇ ಮತ್ತು ಸ್ಪೇನ್ ಇವೇ ಆ ಹತ್ತು ದೇಶಗಳು. ಇದರಿಂದ ವಿಚಲಿತವಾಗದ ಇಸ್ರೇಲ್ ಎಂದಿನ ನಡವಳಿಕೆಯಂತೆ, ಪೂರ್ವ ಜೆರೂಸಲೆಮ್‌ನಲ್ಲಿ ಜ್ಯೂಗಳಿಗಾಗಿ ಕಾನೂನುಬಾಹಿರವಾಗಿ ಸಾವಿರಾರು ಹೊಸ ಮನೆಗಳನ್ನು ಕಟ್ಟುವ ಯೋಜನೆಯನ್ನು ಭಂಡತನದಿಂದ ಈಗಲೇ ಜಾರಿ ಮಾಡಲು ಸಿದ್ಧತೆ ಮಾಡುತ್ತಿದೆ ಎಂದು ವರದಿಯಾಗಿದೆ.

ಭಾರತ ತದ್ವಿರುದ್ಧವಾಗಿ, ಬಿಜೆಪಿ ಸರ್ಕಾರದಡಿಯಲ್ಲಿ, ಭಯೋತ್ಪಾದನೆ ವಿರುದ್ಧ ಸೆಣೆಸಲು ಮತ್ತು ಭದ್ರತಾ ಸಹಕಾರಕ್ಕಾಗಿ ಇಸ್ರೇಲನ್ನು ತಮ್ಮ ಮಿತ್ರ ಎಂದೆಣಿಸುವ ಬಿಜೆಪಿ–ಆರ್.ಎಸ್.ಎಸ್. ಅಷ್ಟೇ ನಿಷ್ಠೆಯಿಂದ ಇಸ್ರೇಲಿನೊಂದಿಗೆ ಸಂಬಂಧ ಉತ್ತಮಪಡಿಸಿಕೊಳ್ಳಲು ಮುಂದಾಗಿದೆ. ತಮ್ಮ ತಾಯ್ನಾಡಿಗಾಗಿ ಹೋರಾಡುತ್ತಿರುವ ಪ್ಯಾಲೆಸ್ಥೇನಿಯರಿಗೆ ಸದಾ ಬೆಂಬಲ ನೀಡುತ್ತಿದ್ದ ಭಾರತದ ಬಹುಕಾಲದ ನಿಲುವನ್ನು ಬಿಜೆಪಿ ಸರ್ಕಾರ ತಳ್ಳಿಹಾಕುತ್ತಿದೆ. ವಿಶ್ವ ಸಂಸ್ಥೆ ಮಾನವ ಹಕ್ಕುಗಳ ಮಂಡಳಿ ಮತ್ತು ಯುನೆಸ್ಕೋದಲ್ಲಿ ಇಸ್ರೇಲನ್ನು ಖಂಡಿಸುವ ನಿರ್ಣಯದ ಮತದಾನ ಸಮಯದಲ್ಲಿ ಭಾರತವು ತಾನು ಗೈರುಹಾಜರಾಗುವ ನಿರ್ಧಾರ ಮಾಡುವ ಮೂಲಕ ಭಾರತದ ವಿದೇಶಾಂಗ ನೀತಿಯಲ್ಲಿ ಬದಲಾವಣೆ ತಂದಿದ್ದಕ್ಕಾಗಿ ಇತ್ತೀಚೆಗೆ ಭಾರತದಲ್ಲಿನ ಇಸ್ರೇಲಿ ರಾಯಭಾರಿ ಕೃತಜ್ಞತೆ ಸಲ್ಲಿಸಿದ್ದಾರೆ.

## ಸಿರಿಯಾ ಮತ್ತು ಪಶ್ಚಿಮ ಏಷ್ಯಾ

ನಾಲ್ಕೂವರೆ ವರ್ಷಕ್ಕೂ ಮೀರಿದ ಸಶಸ್ತ್ರ ಹೋರಾಟದ ನಂತರ ವಿಮೋಚನೆಗೊಂಡ ಪೂರ್ವ ಅಲೆಪ್ಪೊ, ಸಿರಿಯಾದಲ್ಲಿ ಆಢಳಿತ ಬದಲಾವಣೆ ಬಯಸಿದ್ದ ಗುಂಪುಗಳಿಗೆ ಮತ್ತೊಂದು ದೊಡ್ಡ ಪೆಟ್ಟನ್ನು ನೀಡಿದೆ. ಅಧ್ಯಕ್ಷ ಬಷರ್ ಅಲ್ ಅಸ್ಸಾದ್ ಅವರ ಸಿರಿಯನ್ ಸರ್ಕಾರ ಈಗ ದೇಶದ ಎಲ್ಲಾ ಪ್ರಮುಖ

ನಗರಗಳನ್ನು ಸಂಪೂರ್ಣ ವಶಕ್ಕೆ ಪಡೆದಿದೆ. ಅಲೆಪ್ಪೊ ವಿಮೋಚನೆಯನ್ನು ಹಾಡಿ ಹೊಗಳಿದ ಅಧ್ಯಕ್ಷ ಅಸ್ಸಾದ್ ಅಮೆರಿಕನ್ ಸಾಮ್ರಾಜ್ಯವಾದಿ ಮಸಲತ್ತುಗಳ ವಿರುದ್ಧದ ಸಿರಿಯನ್ ಜನಗಳ ಹೋರಾಟದಲ್ಲಿ ಅದೊಂದು ಐತಿಹಾಸಿಕ ತಿರುವು ಎಂದರು. ಸಿರಿಯನ್ ಸೇನೆಯ ಮೇಲೆ ದಾಳಿ ಮಾಡುವುದರ ಮೂಲಕ ಅಮೆರಿಕವು ಅಮೆರಿಕ–ರಷ್ಯಾ ನಡುವಿನ ಒಪ್ಪಂದವನ್ನು ಹಾಳುಗೆಡವಿದ್ದರಿಂದಾಗಿ ಒಪ್ಪಂದ ಮುರಿದು ಬಿತ್ತು. ಇತ್ತೀಚೆಗೆ, ಡಿಸೆಂಬರ್ ಮೂರನೇ ವಾರದಲ್ಲಿ, ಟರ್ಕಿ, ರಷ್ಯಾ ಮತ್ತು ಇರಾನ್ ವಿದೇಶಾಂಗ ಸಚಿವರು ಬೇಟಿಯಾಗಿ ಸಿರಿಯಾದಲ್ಲಿ ಶಾಶ್ವತ ಶಾಂತಿ ನೆಲೆಸಲು ಒಂದು ಯೋಜನೆ ರೂಪಿಸಿದರು. ತನ್ನನ್ನು ಮಾತುಕತೆಯಿಂದ ಹೊರಗಿಟ್ಟಿದ್ದಕ್ಕಾಗಿ ಮುನಿಸಿಕೊಂಡ ಅಮೆರಿಕ, ತನ್ನನ್ನು ಒಳಗೊಳ್ಳದೇ ಈ ಪ್ರದೇಶದಲ್ಲಿ ಯಾವುದೇ ಸಾಮಾನ್ಯ ಸ್ಥಿತಿ ಹಿಂತಿರುಗುವುದು ಸಾಧ್ಯವೇ ಇಲ್ಲ ಎಂದು ಬೆದರಿಕೆ ಹಾಕಿದೆ. ಟರ್ಕಿಯಲ್ಲಿ ರಷ್ಯಾದ ರಾಯಭಾರಿಯ ಹತ್ಯೆಯಾಗಿದ್ದಾಗ್ಯೂ ಈ ಮಾತುಕತೆಗಳು ನಡೆದಿದ್ದವು. ಈ ಮಾತುಕತೆಗಳಿಗೆ ಭಂಗತರುವುದು ಮತ್ತು ರಷ್ಯಾ ಹಾಗೂ ಟರ್ಕಿ ನಡುವೆ ಬಿರುಕು ಉಂಟುಮಾಡುವುದು ಈ ಹತ್ಯೆಯ ಸ್ಪಷ್ಟ ಉದ್ದೇಶವಾಗಿತ್ತು. ವಿಶ್ವ ಸಂಸ್ಥೆ ಭದ್ರತಾ ಮಂಡಳಿಯು ಇತ್ತೀಚೆಗೆ ಫ್ರೆಂಚ್–ರಷ್ಯ ರಾಜಿ ಒಪ್ಪಂದದ – ಅಲೆಪ್ಪೊದಲ್ಲಿ ಒಕ್ಕಲೆಬ್ಬಿಸುವುದನ್ನು ಮತ್ತು ಅಲ್ಲಿ ಉಳಿದುಕೊಳ್ಳುವ ನಾಗರಿಕರ ಯೋಗಕ್ಷೇಮವನ್ನು ಗಮನಿಸಲು ತಕ್ಷಣವೇ ವಿಶ್ವ ಸಂಸ್ಥೆ ಮಾನಿಟರುಗಳನ್ನು ನೇಮಿಸಬೇಕೆಂಬ – ನಿರ್ಣಯಕ್ಕೆ ಒಪ್ಪಿಗೆ ನೀಡಿದೆ. ಈ ಬೆಳವಣಿಗೆಗಳು ಸ್ಪಷ್ಟವಾಗಿ ಪಶ್ಚಿಮ ಏಷ್ಯಾದಲ್ಲಿನ ಸಾಮ್ರಾಜ್ಯವಾದಿ ಅಮೆರಿಕದ ಸಿರಿಯಾ ವಿರೋಧಿ, ಇರಾನ್ ವಿರೋದಿ ಕಾರ್ಯಸೂಚಿಗೆ ಹಿನ್ನಡೆ ಉಂಟುಮಾಡಿದೆ. ಅದು ಈಗಾಗಲೇ ಹದಗೆಡುತ್ತಿರುವ ಅಮೆರಿಕ–ರಷ್ಯಾ ಸಂಬಂಧಗಳನ್ನು ಮತ್ತೂ ಹಾಳುಗೆಡಹುತ್ತದೆ. ಅದಕ್ಕೂ ಮುಂಚೆ ಅಮೆರಿಕವು ರಷ್ಯಾದ 35 ರಾಜತಾಂತ್ರಿಕರನ್ನು ಅಧ್ಯಕ್ಷೀಯ ಚುನಾವಣೆಗಳಲ್ಲಿ ಪ್ರಭಾವ ಬೀರಲು ಯತ್ನಿಸಿದರೆಂಬ ಆರೋಪ ಹೊರಿಸಿ ಉಚ್ಚಾಟಿಸಿತ್ತು., ಅಮೆರಿಕವು ರಷ್ಯಾದ ಮೇಲೆ ಮತ್ತೊಂದು ರೀತಿಯ ನಿರ್ಬಂಧ ಹೇರಿತ್ತು. ರಷ್ಯಾವು ಆ ಆರೋಪವನ್ನೆಲ್ಲಾ ಅಲ್ಲಗಳೆಯಿತು, ಜನವರಿಯಲ್ಲಿ ಹೊಸ ಆಢಳಿತ ಬಂದ ಮೇಲೆ ಸಂಬಂಧ ಸುಧಾರಿಸಬಹುದೆಂಬ ನಿರೀಕ್ಷೆಯಲ್ಲಿ ಅದಕ್ಕೆ ಪ್ರತೀಕಾರ ಎಸಗಲು ಮುಂದಾಗಲಿಲ್ಲ. ಈ ಹಿಂದಿನ ನಮ್ಮ ಸಿ.ಸಿ.ಸಭೆಯಲ್ಲಿ ಟಿಪ್ಪಣಿ ಮಾಡಿದಂತೆ, ರಷ್ಯಾದ ಗಡಿಯವರೆಗೆ ನ್ಯಾಟೊವನ್ನು ವಿಸ್ತರಿಸಬೇಕೆಂಬ ಅಮೆರಿಕದ ಯತ್ನ ಮತ್ತು ಯುಕ್ರೇನಿನ ಕ್ಷಿಪ್ರಕ್ರಾಂತಿಯಲ್ಲಿ ಅಮೆರಿಕದ ಕೈವಾಡ, ಆ ಎರಡು ದೇಶಗಳ ನಡುವಿನ ಸಂಬಂಧ ಹಳಸಲು ಕಾರಣವಾದವು. ತೀರ ಇತ್ತೀಚಿನ ಸಿರಿಯನ್ ಬೆಳವಣಿಗೆಗಳು ರಷ್ಯಾ ಮತ್ತು ಅಮೆರಿಕ ನಡುವಿನ ಹಳಸಿದ ಸಂಬಂಧವನ್ನು ಇನ್ನೂ ಹಾಳುಗೆಡವಲಿವೆ.

ಇದು ಮತ್ತದರ ಜತೆಯಲ್ಲೇ ರಷ್ಯಾ ಮತ್ತು ಚೈನಾ ನಡುವೆ ಬೆಳೆಯುತ್ತಿರುವ ಸಹಕಾರ ಮುಂದಿನ ದಿನಗಳಲ್ಲಿ ಅಂತರ್‍ರಾಷ್ಟ್ರೀಯ ಸಂಬಂಧಗಳ ಮೇಲೆ ಗಾಢ ಪರಿಣಾಮ ಬೀರಲಿವೆ.

# ರಾಷ್ಟ್ರೀಯ

## ಅನಾಣ್ಯೀಕರಣ

ನವೆಂಬರ್ 8 ರಂದು ಪ್ರಧಾನ ಮಂತ್ರಿಗಳು 1000 ಮತ್ತು 500 ರೂಪಾಯಿ ನೋಟುಗಳ ಅನಾಣ್ಯೀಕರಣವನ್ನು ಘೋಷಿಸಿರುವುದು, ನಮ್ಮ ಆರ್ಥಿಕತೆಯ ಬಹುದೊಡ್ಡ ಭಾಗಕ್ಕೆ ಅಪಾರವಾದ ನಷ್ಟವನ್ನು ಉಂಟುಮಾಡಿದೆ. ಕೋಟ್ಯಾಂತರ ಜನರನ್ನು ಸಂಕಟಕ್ಕೆ ದೂಡಿ ಅವರ ಜೀವನಾಧಾರಗಳನ್ನು ಕಳಕೊಳ್ಳುವಂತಾಗಿದೆ. ಪ್ರಧಾನ ಮಂತ್ರಿಗಳು 50 ದಿನಗಳ ಕಾಲಮಿತಿಗೆ ಮನವಿ ಮಾಡಿ, ಆ ನಂತರ ಎಲ್ಲವೂ ಸಾಮಾನ್ಯಸ್ಥಿತಿಗೆ ಹಿಂದಿರುಗುತ್ತದೆ ಎಂದು ಭರವಸೆ ನೀಡಿದ್ದರು. ಈ ಕಾಲ ಮಿತಿಯು ಈಗ ಮುಗಿದು ಹೋಗಿದೆ, ಆದರೆ ಸಾಮಾನ್ಯ ಸ್ಥಿತಿ ಇನ್ನೂ ಬಹಳ ದೂರವೇ ಇದೆ. ತದ್ವಿರುದ್ಧವಾಗಿ ಜನರ ನೋವು–ಸಂಕಟಗಳು ಹೆಚ್ಚುತ್ತಲೇ ಇವೆ. ಜನರು ಬ್ಯಾಂಕುಗಳಲ್ಲಿ ಠೇವಣಿಮಾಡಿದ್ದ ತಮ್ಮ ಸ್ವಂತದ ಹಣವನ್ನು ಹಿಂಪಡೆಯುವುದರ ಮೇಲಿನ ನಿರ್ಬಂಧಗಳು ಮುಂದುವರಿದಿವೆ. ಈ ಎಲ್ಲಾ ಸಂಗತಿಗಳು ಸರಿಯಾಗಿ ವರದಿಯಾಗಿವೆಯಾದರೂ, ಕುರುಡಾಗಿ, ಸರಕಾರ ತನ್ನ ಅನಾಣ್ಯೀಕರಣವು ಕಪ್ಪುಹಣ ಮತ್ತು ಭ್ರಷ್ಟಾಚಾರದ ವಿರುದ್ಧದ ತೀವ್ರದಾಳಿ ಎಂಬುದಾಗಿ ಹೇಳಿಕೊಳ್ಳುತ್ತಿದೆ.

ನವೆಂಬರ್‌ನಲ್ಲಿ ನಡೆದ ಪಾಲಿಟ್‌ಬ್ಯೂರೋ ಸಭೆಯ ಹೇಳಿಕೆ ಅನಾಣ್ಯೀಕರಣಕ್ಕೆ ನಾಲ್ಕು ಉದ್ದೇಶಗಳೆಂದು ಕಾರಣಗಳೆಂದು ಪ್ರಧಾನಮಂತ್ರಿಗಳು ಪಟ್ಟಿಮಾಡಿರುವ ಕಪ್ಪುಹಣ, ಭ್ರಷ್ಟಾಚಾರ, ನಕಲಿ ನೋಟುಗಳು ಹಾಗೂ ಭಯೋತ್ಪಾದಕರಿಗೆ ನಿಧಿ ನೀಡಿಕೆಯ ವಿರುದ್ಧ ಸೆಣಸುವುದು ಇವುಗಳಲ್ಲಿ ಯಾವುದೊಂದನ್ನು ಕೂಡಾ ಈ ಅನಾಣ್ಯೀಕರಣ ಪ್ರಕ್ರಿಯೆಯಿಂದ ಸಾಧಿಸಲು ಸಾಧ್ಯವಿಲ್ಲ ಎಂಬ ಸಂಗತಿಯನ್ನು ಬಯಲಿಗೆಳೆದಿದೆ. ಶೇ. 90ಕ್ಕಿಂತ ಹೆಚ್ಚು ಪ್ರಮಾಣದ ಕಪ್ಪು ಹಣವನ್ನು ವಿದೇಶಿ ತೆರಿಗೆಧಾಮಗಳಲ್ಲಿ ಇಡಲಾಗಿದೆ ಎಂದು ಪ್ರಧಾನ ಮಂತ್ರಿಗಳು ತಾವೇ ಸಾರ್ವಜನಿಕವಾಗಿ ಹೇಳಿದ್ದರು. ಇದರಲ್ಲಿ ಒಂದೇ ಒಂದು ರೂಪಾಯಿಯನ್ನು ಮುಟ್ಟಿಲ್ಲ ಅಥವಾ ಅದನ್ನು ವಸೂಲಿ ಮಾಡುವ ಯಾವುದೇ ಪ್ರಯತ್ನವೂ ಇಲ್ಲ. ಅನಾಣ್ಯೀಕರಣಗೊಂಡ ಬಹುತೇಕ ಕರೆನ್ಸಿಯೆಲ್ಲವೂ ಈಗ ಬ್ಯಾಂಕುಗಳಿಗೆ ಹಿಂದಿರುಗಿದ್ದು, ನಗದು ರೂಪದಲ್ಲಿ ಕೂಡಿಟ್ಟಿದ್ದ ಯಾವುದೇ ಬಗೆಯ ಕಪ್ಪು ಹಣವು ಈಗ ಬಿಳಿಹಣವಾಗಿ ಪರಿವರ್ತಿಸಲ್ಪಟ್ಟು ಬ್ಯಾಂಕುಗಳಲ್ಲಿ ಠೇವಣಿಯಾಗಿ ಇದೆ ಎಂಬುದು ಸ್ಪಷ್ಟವಾಗಿದೆ. ಬ್ಯಾಂಕುಗಳಲ್ಲಿ ಠೇವಣಿಯಾಗಿರುವ ಹಣವೆಷ್ಟು ಎಂಬ ಅಂತಿಮವಾದ ಅಂಕಿ ಅಂಶಗಳನ್ನು ಇನ್ನೂ ಸಾರ್ವಜನಿಕಗೊಳಿಸಿಲ್ಲ. ಈ ಮೊತ್ತವು ಹಿಂಪಡೆದ ನೋಟುಗಳ ಮೌಲ್ಯಕ್ಕಿಂತಲೂ ಹೆಚ್ಚಾದಲ್ಲಿ ಆಗ ಇದರಿಂದ ಚಲಾವಣೆಯಲ್ಲಿ ಇದ್ದ ನಕಲಿ ನೋಟುಗಳು ಕೂಡಾ ಕಾನೂನು ಬದ್ಧವಾದವುಗಳೆಂದು ಪರಿಗಣಿಸಲ್ಪಟ್ಟಿವೆ ಎಂದು ಅರ್ಥವಾಗುತ್ತದೆ. ಬೃಹತ್ ಪ್ರಮಾಣದಲ್ಲಿ ಹೊಸ

ನೋಟುಗಳನ್ನು ಮುಟ್ಟುಗೋಲು ಹಾಕಿರುವುದು, ಉನ್ನತ ಮಟ್ಟದಲ್ಲಿ ಭ್ರಷ್ಟಾಚಾರವು ಅಸ್ತಿತ್ವದಲ್ಲಿದೆ ಎಂಬ ಸಂಗತಿಯನ್ನು ತೋರಿಸುತ್ತದೆ. ಈ ಅನಾಣ್ಯೀಕರಣದ ನಡೆಯು ಭ್ರಷ್ಟಾಚಾರ ನಿರ್ಮೂಲನೆ ಮಾಡುವುದು ಅಂತಿರಲಿ, ಬದಲಿಗೆ ಇದು ಕೇವಲ ಹೊಸ ರೀತಿಯ ಮತ್ತು ಉನ್ನತ ಸ್ವರೂಪದ ಭ್ರಷ್ಟಾಚಾರವನ್ನು ಸೃಷ್ಟಿಸಿದೆ.

ಭಯೋತ್ಪಾದಕರಿಗೆ ನಿಧಿ ಸಂಗ್ರಹವನ್ನು ತಡೆಯುವ ಬಗ್ಗೆ ಹೇಳುವುದಾದರೆ, ಈ ನಿಟ್ಟಿನಲ್ಲಿ ಈ 'ಅನಾಣ್ಯೀಕರಣವು ಯಾವುದೇ ರೀತಿಯ ಪರಿಣಾಮವನ್ನೂ ಬೀರಿಲ್ಲವೆಂಬುದು ಸೆಪ್ಟಂಬರ್ 30ರ 'ಮಿಂಚಿನ ಪ್ರಹಾರ'(ಸರ್ಜಿಕಲ್ ಸ್ಟ್ರೈಕ್) ನಡೆಸಿದ ನಂತರದಲ್ಲಿ 33 ಜನ ಭದ್ರತಾ ಸಿಬ್ಬಂದಿಯು ಭಯೋತ್ಪಾದಕರ ದಾಳಿಗಳಲ್ಲಿ ತಮ್ಮ ಪ್ರಾಣವನ್ನು ಕಳೆದುಕೊಂಡಿರುವ ಸಂಗತಿಯಿಂದ ಎದ್ದು ಕಾಣುತ್ತದೆ. 2016 ರಲ್ಲಿ ದಾಖಲಾಗಿರುವ ಭದ್ರತಾ ಸಿಬ್ಬಂದಿಗಳ ಸಾವಿನ ಸಂಖ್ಯೆಯು 2015ರಸಂಖ್ಯೆಯ ಎರಡು ಪಟ್ಟು .

## ಆರ್ಥಿಕತೆಯ ಮೇಲೆ ಪರಿಣಾಮ

ಭಾರತದ ಅರ್ಥವ್ಯವಸ್ಥೆಯು, ಅದರಲ್ಲೂ ವಿಶೇಷವಾಗಿ ಗ್ರಾಮೀಣ ಆರ್ಥಿಕತೆ ಮತ್ತು ಆರ್ಥಿಕ ವ್ಯವಸ್ಥೆಯ 90 ಶೇಕಡಾ ನಗದು ವ್ಯವಹಾರಗಳ ಮೇಲೆ ನಿಂತಿದ್ದು, ಈ ಅನಾಣ್ಯೀಕರಣದ ನಡೆಯಿಂದ ತೀವ್ರವಾದ ಹೊಡೆತ ತಿಂದಿವೆ, ಕೆಲವು ವಲಯಗಳು ಹಾಳಾಗಿ ಹೋಗಿವೆ. ಅಂತರ ರಾಷ್ಟ್ರೀಯ ಸಂಸ್ಥೆಗಳು ಮತ್ತು ಆರ್‌ಬಿಐ ಸೇರಿದಂತೆ ಎಲ್ಲಾ ದೇಶಿಯ ಸಂಸ್ಥೆಗಳೂ ಅನಾಣ್ಯೀಕರಣದ ಫಲಿತಾಂಶವಾಗಿ ಜಿ.ಡಿ.ಪಿ. ಬೆಳವಣಿಗೆಯ ಮೇಲೆ ಗಣನೀಯ ಪ್ರಮಾಣದ ಹೊಡೆತ ಬೀಳುತ್ತದೆ ಎಂಬುದಾಗಿ ಅಂದಾಜಿಸಿವೆ. ಎಲ್ಲಾ ಆರ್ಥಿಕ ಸೂಚ್ಯಂಕಗಳೂ ತೀವ್ರವಾದ ಇಳಿಕೆಯನ್ನು ತೋರಿಸಿವೆ. ಕೈಗಾರಿಕಾ ಉತ್ಪಾದನೆಯ ಸೂಚ್ಯಂಕವು ಸುಮಾರು ಶೇ. 2 ರಷ್ಟು ಕುಸಿದಿದೆ. ತಯಾರಿಕಾ ವಿಭಾಗ ಶೇ. 2.5 ರಷ್ಟು, ಬಂಡವಾಳ ಸರಕು ಉತ್ಪಾದನೆಯು ಭಾರೀ ಪ್ರಮಾಣದಲ್ಲಿ ಅಂದರೆ ಶೇ. 30 ರಷ್ಟು ಕುಸಿತ ಕಂಡಿದೆಯಲ್ಲದೇ, ಸೇವಾ ವಲಯದಲ್ಲೂ ಕುಸಿತ ದಾಖಲಾಗಿದೆ. ಪ್ರಮುಖವಾಗಿ ರಫ್ತು-ಆಧಾರಿತ ಕೈಗಾರಿಕೆಗಳಾದ ಜವಳಿ, ಚರ್ಮ ಹಾಗೂ ಆಭರಣ ಕೈಗಾರಿಕೆಗಳಿಂದ ವರದಿಯಾಗಿರುವಂತೆ ಅನಾಣ್ಯೀಕರಣ ಪ್ರಕ್ರಿಯೆ ನಡೆದ ಮೊದಲ ವಾರದಲ್ಲಿಯೇ ನಾಲ್ಕು ಲಕ್ಷಕ್ಕಿಂತಲೂ ಅಧಿಕ ಉದ್ಯೋಗಿಗಳು ತಮ್ಮ ಉದ್ಯೋಗ ಕಳೆದುಕೊಂಡಿದ್ದಾರೆ. ಈ ಮೂರು ವಲಯಗಳಲ್ಲಿ 3.19 ಕೋಟಿ ಜನರು ದಿನಗೂಲಿ ಅಥವ ವಾರದ ಕೂಲಿಯ ಮೇಲೆ ಕೆಲಸ ಮಾಡುತ್ತಿದ್ದಾರೆ. ಈ ಅನಾಣ್ಯೀಕರಣದ ನಂತರದ ದಿನಗಳಲ್ಲಿ ಅವರಲ್ಲಿ ಬಹಳಷ್ಟು ಮಂದಿ ನಿರುದ್ಯೋಗಿಗಳಾಗಿದ್ದಾರೆ. ಚಿಲ್ಲರೆ ವ್ಯಾಪಾರವು ದೊಡ್ಡಪ್ರಮಾಣದಲ್ಲಿ ಅಂದರೆ ಶೇ. 75 ರಷ್ಟು ಕುಸಿದಿದೆ ಎಂದು ಅಂದಾಜಿಸಲಾಗಿದೆ. ಬೇಗನೆ ಕೆಟ್ಟು ಹೋಗುವಂತಹ ಉತ್ಪನ್ನಗಳಾದ ಮೀನು ಮತ್ತು ತರಕಾರಿಗಳಂತಹ ಸರಕುಗಳ ವ್ಯಾಪಾರ ಎಷ್ಟೊಂದು ತೀವ್ರವಾಗಿ ಕುಸಿಯಿತೆಂದರೆ ಹೆಚ್ಚಿನ ಕಡೆಗಳಲ್ಲಿ ಇವು ಕೊಳೆತು ಹೋಗುವಂತಾಗಿದೆ. ಏಕೆಂದರೆ ಜನರಲ್ಲಿ ಕೊಳ್ಳಲು ಸಾಕಷ್ಟು ನಗದು ಹಣವಿಲ್ಲ

ಡಿಜಿಟಲ್ ಪಾವತಿಗಳ ಕಡೆಗೆ ಪಲ್ಲಟದ ಮಾತು ಹಾಸ್ಯಾಸ್ಪದವಾಗಿದೆ. ಏಕೆಂದರೆ ಗ್ರಾಮೀಣ ಭಾರತದಲ್ಲಿ ಕೇವಲ ಶೇ. 13 ರಷ್ಟು ಅಂದರೆ 83.4 ಕೋಟಿ ಜನರಲ್ಲಿ 10.8 ಕೋಟಿ ಜನರು ಮಾತ್ರ ಇಂಟರ್‌ನೆಟ್ (ಅಂತರ್‌ಜಾಲ) ಸಂಪರ್ಕವನ್ನು ಹೊಂದಿದ್ದಾರೆ. ಆದ್ದರಿಂದ . ಕೇವಲ ಶೇ. 26 ರಷ್ಟು ಜನರು ಸ್ಮಾರ್ಟ್ ಫೋನ್ ಬಳಕೆ ಲಭ್ಯವಿದೆ. ಈ ರೀತಿ ನಗದು ವ್ಯವಹಾರಗಳ ಮೇಲೆಯೆ ಹೆಚ್ಚಾಗಿ ಅವಲಂಬಿಸಿರುವುದರಿಂದ  ಅನೇಕ ಕ್ಷೇತ್ರಗಳ ವಿಧ್ವಂಸದ ಪ್ರಮಾಣ ಅಪಾರ.

## ಜನರ ಜೀವನಾಧಾರದ ಮೇಲಿನ ಪರಿಣಾಮ

ಇವೆಲ್ಲದರ ಪರಿಣಾಮವಾಗಿ ದೊಡ್ಡಪ್ರಮಾಣದಲ್ಲಿ ನಿರುದ್ಯೋಗದಲ್ಲಿ ಹೆಚ್ಚಳ ಕಂಡು ಬಂದಿದೆ. ಕೃಷಿ ಕಾರ್ಮಿಕರ ವಲಸೆ ಪ್ರಕ್ರಿಯೆಯ ಮೇಲೆ ಇದರಿಂದ ವ್ಯತಿರಿಕ್ತ ಪರಿಣಾಮ ಕಂಡು ಬಂದಿದ್ದು, ಬಿಹಾರ್ ಮತ್ತು ಉತ್ತರ ಪ್ರದೇಶದಿಂದ ವ್ಯವಸಾಯದ ಸೀಜನ್‌ನಲ್ಲಿ ಪಂಜಾಬ್ ಮತ್ತು ಹರಿಯಾಣಗಳಿಗೆ ಕೆಲಸಕ್ಕಾಗಿ ತೆರಳುತ್ತಿದ್ದ ಕಾರ್ಮಿಕರೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ತಮ್ಮ ರಾಜ್ಯಗಳಿಗೆ ಹಿಂದಿರುಗಿದ್ದಾರೆ. ತರಕಾರಿ ಬೆಳೆಯುವ ರೈತರು ತಮ್ಮ ಉತ್ಪನ್ನಗಳನ್ನು ಅವುಗಳ ಬೆಲೆಯ 5ನೇ ಒಂದು ಭಾಗಕ್ಕೆ ಮಾರುತ್ತಿದ್ದಾರೆಎಂದು ವರದಿಯಾಗಿದೆ. ಕರೆನ್ಸಿ ನೋಟುಗಳ ಕೊರತೆಯಿಂದಾಗಿ ಸರಕಾರೀ ಖರೀದಿ ನಿಂತು ಹೋಗಿದ್ದರಿಂದ ಧಾನ್ಯಗಳನ್ನು ಕಟಾವು ಮಾಡಿರುವ ಪ್ರದೇಶಗಳ ರೈತರು ತಮ್ಮ ಉತ್ಪನ್ನಗಳನ್ನು ಕನಿಷ್ಟ ಬೆಂಬಲ ಬೆಲೆಯ ಅರ್ಧಕ್ಕಿಂತಲೂ ಕಡಿಮೆಗೆ ಮಾರಾಟ ಮಾಡಲೇಬೇಕಾಗಿ ಬಂದಿದೆ. ರಬ್ಬರ್, ಹತ್ತಿ, ಸಾಂಬಾರು ಬೆಳೆ ಇತ್ಯಾದಿ ಎಲ್ಲಾ ಸಾಂಪ್ರದಾಯಿಕ ವಾಣಿಜ್ಯ ಬೆಳೆಗಳ ವ್ಯಾಪಾರದಲ್ಲಿ ತೀವ್ರ ಕುಸಿತವು ವರದಿಯಾಗಿದೆ. ಕೃಷಿ ಸಂಕಟ ಆಳಗೊಂಡು ರೈತರ ಹತಾಶ ಆತ್ಮಹತ್ಯೆಗಳಲ್ಲಿ ತೀವ್ರವಾದ ಏರಿಕೆ ಕಂಡು ಬಂದಿದೆ. ವರದಿಗಳ ಪ್ರಕಾರ ಈ ಎರಡು ವರ್ಷಗಳಲ್ಲಿ ರೈತರ ಆತ್ಮಹತ್ಯೆಯ ಪ್ರಮಾಣದಲ್ಲಿ ಸುಮಾರು ಶೇ. 32 ರಷ್ಟು ಏರಿಕೆಯಾಗಿದೆ. ಈ ಅನಾಣ್ಯೀಕರಣವು ಗ್ರಾಮೀಣ ಜನರ ಸಂಕಷ್ಟವನ್ನು ಮತ್ತಷ್ಟು ಉಲ್ಬಣಗೊಳಿಸಲಿದೆ. ಮಕ್ಕಳಿಗೆ ಪೂರಕ ಪೌಷ್ಟಿಕಾಂಶದಲ್ಲೂ ಕುಸಿತವು ನಗದು ಹಣವು ದೊರೆಯದಿರುವ ಕಾರಣಕ್ಕಾಗಿಯೇ ಉಂಟಾಗಿದ್ದು, ಇದು ಅನಾಣ್ಯೀಕರಣಕ್ಕಿಂತ ಮೊದಲಿನ ಎಂಟು ತಿಂಗಳ ಸರಾಸರಿಗಿಂತ್ಲ ಶೇ. 16 ರಷ್ಟು ಭಾರೀ ಪ್ರಮಾಣದಲ್ಲಿ ಇಳಿದಿದೆ ಎಂದು ವರದಿಗಳು ತಿಳಿಸಿವೆ.

ಇದೆಲ್ಲವನ್ನೂ ಒಟ್ಟಾರೆಯಾಗಿ ನೋಡಿದಲ್ಲಿ ಕೋಟಿಗಟ್ಟಲೆ ಭಾರತೀಯರ ಜೀವನವನ್ನು ಈ ಅನಾಣ್ಯೀಕರಣವು ಹಾಳುಗೆಡವಿದೆ ಎಂಬುದು ಅರ್ಥವಾಗುತ್ತದೆ. ಇದು ದೇಶದ ಆರ್ಥಿಕ ಅಸಮಾನತೆಯ ಮೇಲೆ ಖಂಡಿತವಾಗಿಯೂ ಮತ್ತಷ್ಟು ದುಷ್ಪರಿಣಾಮ ಬೀರುತ್ತದೆ. ಈಗಾಗಲೇ ಬಿಜೆಪಿ ಸರಕಾರ ಅಧಿಕಾರ ವಹಿಸಿಕೊಂಡ ಎರಡು ವರ್ಷಗಳಲ್ಲಿ ಅಸಮಾನತೆಯು ತೀವ್ರಗತಿಯಲ್ಲಿ ಏರಿದೆ. 2014ರಲ್ಲಿ ನಮ್ಮ ಜಿಡಿಪಿಯ ಶೇ.49 ರಷ್ಟು ಮೌಲ್ಯದ ಆಸ್ತಿಗಳನ್ನು ಭಾರತದ ಜನ ಸಂಖ್ಯೆಯ ಶೇ

1 ಭಾರೀ ಶ್ರೀಮಂತರು ಹೊಂದಿದ್ದರು. ಪ್ರಧಾನ ಮಂತ್ರಿ ಮೋದಿಯವರ ನವ ಉದಾರವಾದಿ ನೀತಿಗಳ ಪರಿಣಾಮವಾಗಿ 2016ರಲ್ಲಿ ಇದು ಶೇ 58.4 ಕ್ಕೆ ಏರಿದೆ. ಅನಾಣ್ಯೀಕರಣದ ಈ ಎಲ್ಲಾ ಪರಿಣಾಮಗಳಿಂದಾಗಿ ಶ್ರೀಮಂತರು ಇನ್ನಷ್ಟು ಶ್ರೀಮಂತರಾಗುವ ಮತ್ತು ಬಡವರ ದಾರಿದ್ರ್ಯ ಮತ್ತಷ್ಟು ಹೆಚ್ಚುವ ಈ ಪ್ರಕ್ರಿಯೆ ಇನ್ನಷ್ಟು ತೀವ್ರಗೊಳ್ಳುವುದು ಖಂಡಿತ.

## ಡಿಜಿಟಲ್ ಆರ್ಥಿಕತೆಯತ್ತ ಸ್ಥಿತ್ಯಂತರ

ಅನಾಣ್ಯೀಕರಣದ ಎಲ್ಲಾ ಘೋಷಿತ ಉದ್ದೇಶಗಳು ಈಡೇರದಿರುವಾಗ, ಅದರ ನಿಜವಾದ ಉದ್ದೇಶವು ಏನು ಎಂಬುದನ್ನು ನಗದು ಆರ್ಥಿಕತೆಯಿಂದ ಡಿಜಿಟಲ್ ಆರ್ಥಿಕತೆಯ ಕಡೆಗೆ ಪಲ್ಲಟಕ್ಕೆ ಒತ್ತು ಹಾಗೂ ನಗದುರಹಿತ ಆರ್ಥಿಕತೆಯ ಕೂಗು ಮುಂಚೂಣಿಗೆ ಬಂದಿರುವುದು ಸ್ಪಷ್ಟವಾಗಿ ತೋರಿಸುತ್ತಿವೆ. ಇಂತಹ ಸ್ಥಿತ್ಯಂತರಕ್ಕೆ, ಮೊದಲಿಗೆಚಲಾವಣೆಯಲ್ಲಿರುವ ನಗದನ್ನು ಸೀಮಿತಗೊಳಿಸಬೇಕು. ಹಿಂತೆಗೆದುಕೊಂಡ ರೂ. 1000 ಮತ್ತು ರೂ. 500 ರ ನೋಟುಗಳ ಒಟ್ಟು ಮೌಲ್ಯ ರೂ. 15,45,816 ಇದರಲ್ಲಿ ಶೇ. 97 ರಷ್ಟು, ಡಿಸೆಂಬರ್ ಅಂತ್ಯದೊಳಗೆ ಬ್ಯಾಂಕುಗಳಿಗೆ ಹಿಂದಿರುಗಿದೆಎಂದು ವರದಿಗಳು ಹೇಳುತ್ತಿವೆ.. ಡಿಸೆಂಬರ್ 19 ರ ವರೆಗೆ 'ಚಲಾವಣೆಗೆ ಬಂದಿರುವ ಹೊಸ ನೋಟುಗಳ ಮೊತ್ತ ರೂ. 5,92,613, ಬ್ಯಾಂಕ್ ಖಾತೆಗಳಿಂದ ವಾರಕ್ಕೆ ರೂ. 24,000 ಹಿಂತೆಗೆಯುವ ನಿರ್ಬಂಧವನ್ನು ಮುಂದುವರಿಸಿರುವುದರ ಜೊತೆಗೆ ಎಟಿಎಂ ಗಳಿಂದ ಹಣ ಹಿಂತೆಗೆಯುವ ಮಿತಿಯನ್ನು ದಿನಕ್ಕೆ ರೂ. 2,000 ದಿಂದ ರೂ. 4,500 ಕ್ಕೆ ಹೆಚ್ಚಿಸಿರುವುದರಿಂದ, ಇದರಲ್ಲಿ ಬಹಳಷ್ಟು ನಗದು ಚಲಾವಣೆಗೆ ಬರುವುದರ ಬದಲಾಗಿ, ಬ್ಯಾಂಕುಗಳಲ್ಲಿ ಠೇವಣಿಯಾಗಿಯೇ ಉಳಿದಿರುತ್ತದೆ ಎಂಬುದು ಸ್ಪಷ್ಟವಾಗುತ್ತಿದೆ. 2016 ರ ನವೆಂಬರ್ 1 ರಿಂದ 8 ರವರೆಗೆ ರೂ. 1582.8 ಕೋಟಿಯನ್ನು ಎಟಿಎಂ ಗಳಿಗೆ ತುಂಬಲಾಗಿತ್ತು. ನವೆಂಬರ್ 8ರ ಪ್ರಧಾನ ಮಂತ್ರಿಗಳ ಭಾಷಣದ ದಿನದಿಂದ ಡಿಸೆಂಬರ್ 30 ರವರೆಗೆ ಎಟಿಎಂ ಗಳಿಗೆ ತುಂಬಿಸಿದ ಹಣ ಕೇವಲ ರೂ. 455 ಕೋಟಿ ಎಂದು ವರದಿಯಾಗಿದೆ. ಡಿಜಿಟಲ್‌ವಿಧಾನದಲ್ಲಿ ಹಣಪಾವತಿಯತ್ತದ ಸ್ಥಿತ್ಯಂತರಕ್ಕೆ ಒತ್ತುಕೊಡಲಾಗುತ್ತಿದೆ. ಆದರೆ ಇದರಲ್ಲಿ ವ್ಯವಹಾರದ ವೆಚ್ಚವು ಸೇರುವುದರಿಂದ, ಒಂದುವೇಳೆ ಈ ಪ್ರಕ್ರಿಯೆಯಲ್ಲಿ ಯಶಸ್ಸು ದೊರಕಿದರೂ, ಅದು ಜನರ ಹೊರೆಯನ್ನು ಹೆಚ್ಚಿಸುತ್ತದೆ. ಇಂಟರ್‌ನೆಟ್ ಮತ್ತು ಬ್ಯಾಂಕಿಂಗ್ ಸೌಲಭ್ಯವು ಲಭ್ಯವಿಲ್ಲದ ಗ್ರಾಮೀಣ ಭಾರತದ ಬಹಳಷ್ಟು ಪ್ರದೇಶಗಳಲ್ಲಿ ಡಿಜಿಟಲ್ ವ್ಯವಸ್ಥೆಯ ಮೂಲಕ ವ್ಯವಹಾರಗಳನ್ನು ಸನಡೆಸುವುದು ನಿಕಟ ಭವಿಷ್ಯದಲ್ಲಿ ಸಾಧ್ಯವಿಲ್ಲ.

ಅನಾಣ್ಯೀಕರಣದ ನಿಜವಾದ ಉದ್ದೇಶವು ನವ ಉದಾರವಾದೀ ಸುಧಾರಣೆಗಳ ಪ್ರಕ್ರಿಯೆಯನ್ನು ಮತ್ತಷ್ಟು ಪ್ರೋತ್ಸಾಹಿಸುವುದೇ ಆಗಿದೆ. ನಾವು ನಮ್ಮ ಕೋಹಿಕ್ಕೋಡ್ ಮಹಾಧಿವೇಶನದ ಸೈದ್ಧಾಂತಿಕ ಗೊತ್ತುವಳಿಯಲ್ಲಿ ಅಂತರರಾಷ್ಟ್ರೀಯ ಹಣಕಾಸು ಬಂಡವಾಳದ ನೇತೃತ್ವದ ಅಂತರ್‌ರಾಷ್ಟ್ರೀಯ ಹಣಕಾಸು ಬಂಡವಾಳದ ನೇತೃತ್ವದ

ಸಾಮ್ರಾಜ್ಯಶಾಹಿ ಜಾಗತೀಕರಣದ ಪ್ರಸಕ್ತ ಘಟ್ಟದಲ್ಲಿ ಲಾಭವನ್ನು ಗರಿಷ್ಟಗೊಳಿಸುವುದಕ್ಕೆ ಹೊಸ ಹೊಸ ದಾರಿಗಳನ್ನು ನಿರಂತರವಾಗಿ ಹುಡುಕುವುದನ್ನು ಮುಂದುವರಿಸುತ್ತದೆ ಎಂದು ವಿಶ್ಲೇಷಿಸಿದ್ದೆವು. ಇದನ್ನು ವಿಶಾಲ ಜನವಿಭಾಗಗಳ ಜೀವನಾಧಾರವನ್ನು ಹಿಂಡುವುದರ ಮೂಲಕ ಮಾತ್ರ ಸಾಧಿಸಬಹುದಾಗಿದೆ. ಅಂದರೆ ಆರ್ಥಿಕ ಶೋಷಣೆಯನ್ನು ತೀವ್ರಗೊಳಿಸುವುದೇ ಆಗಿದೆ. ಹೇಗೆ ಈ ಪ್ರಕ್ರಿಯೆ ಜಗತ್ತಿನ ಬಹುಪಾಲು ಜನಗಳ ಕೊಳ್ಳುವ ಶಕ್ತಿಯಲ್ಲಿ ತೀವ್ರ ಇಳಿಕೆಗೆ ಕಾರಣವಾಗಿದ್ದು, ಅದರಿಂದಾಗಿ ಬಂಡವಾಳಶಾಹಿ ಬೆಳವಣಿಗೆಯಲ್ಲಿ ಒಂದು ಬಿಕ್ಕಟ್ಟನ್ನು ಸೃಷ್ಟಿಸಿದೆ ಮತ್ತು ಜಾಗತಿಕ ಬಂಡವಾಳಶಾಹಿ ಅಗ್ಗದ ಸಾಲಗಳ ಮೂಲಕ ಈ ಮಿತಿಗಳನ್ನು ಮೀರಲು ಪ್ರಯತ್ನಗಳನ್ನು ನಡೆಸಿದೆ ಎಂದು ನಾವು ವಿಶ್ಲೇಷಿಸಿದ್ದೆವು. ಈ ಪ್ರಯತ್ನಗಳು 2008ರ ಹಣಕಾಸು ಕುಸಿತದತ್ತ ಒಯ್ದ ಒಂದು ಪ್ರಕ್ರಿಯೆಗೆ ಮತ್ತು ಪ್ರಸಕ್ತ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ನಂತರದ ಘಟ್ಟಗಳಿಗೆ ದಾರಿ ಮಾಡಿ ಕೊಟ್ಟಿದೆ.

## ಹಣಕಾಸು ಸ್ಥಿರತೆ

ಅಂತರ ರಾಷ್ಟ್ರೀಯ ಹಣಕಾಸು ಬಂಡವಾಳವು 2008ರ ಹಣಕಾಸು ಕುಸಿತ ನಡೆದ ಕೂಡಲೇ ಹಣಕಾಸು ಭದ್ರತೆಯನ್ನು ಅಂದರೆ ಬ್ಯಾಂಕುಗಳು ಎಂದೂ ಕುಸಿಯದಂತೆ ಖಾತರಿ ಪಡಿಸುವ ಅಗತ್ಯವಿದೆಯೆಂದು ಅದರ ಮೇಲೆ ಗಮನ ಕೇಂದ್ರೀಕರಿಸಿದೆ. ಹೀಗೆ ಬ್ಯಾಂಕುಗಳು ಎಂದೂ ಕುಸಿಯದಂತೆ ಖಾತರಿ ಪಡಿಸುವುದಕ್ಕಾಗಿ 'ಹಣಕಾಸು ಸ್ಥಿರತಾ ಮಂಡಳಿ' (FSB-ಎಫ್‌ಎಸ್‌ಬಿ) ಯನ್ನು 2009 ರಲ್ಲಿ ಸ್ಥಾಪಿಸಲಾಯಿತು. 'ಜಿ20'ರ ಭಾಗವಾಗಿ ಭಾರತವು ಈ FSB ಪ್ರಸ್ತಾವಗಳನ್ನು 2016ರ ಬ್ರಿಸ್ಬೇನ್ ಸೃಂಗಸಭೆಯಲ್ಲಿ ಅನುಮೋದಿಸಿತು. ಬ್ಯಾಂಕುಗಳು ವಿಫಲವಾಗದಂತೆ ದೃಢಪಡಿಸಲು ಮತ್ತು ಆ ಮೂಲಕ ಹಣಕಾಸು ಅಸ್ಥಿರತೆ ಉಂಟಾಗಿ ಇನ್ನೊಂದು ಸುತ್ತಿನ ಬಿಕ್ಕಟ್ಟಿನತ್ತ ಒಯ್ಯದಂತೆ ಮಾಡಲು ಪ್ರತಿಯೊಂದು ದೇಶದಲ್ಲಿ ಇಂತಹ ಹಣಕಾಸು ಸಂಸ್ಥೆಗಳನ್ನು ರಚಿಸಬೇಕು ಎಂದು ಈ ಗೊತ್ತುವಳಿಯು ನಿರ್ದಿಷ್ಟ ಪಡಿಸುತ್ತದೆ.

ಹಣಕಾಸು ಸಂಸ್ಥೆಗಳ 2008ರ ಕುಸಿತವನ್ನು ಬೃಹತ್ ಪ್ರಮಾಣದ ಪಾರು(ಬೇಲ್–ಔಟ್) ಪ್ಯಾಕೇಜುಗಳ ಮೂಲಕ ತಡೆದುದನ್ನು ಈ ಹಿಂದೆ ನಾವು ಗಮನಿಸಿದ್ದೇವೆ. ಅವುಗಳನ್ನು ಪಾರು ಮಾಡಿದ ಈ ಪ್ಯಾಕೇಜುಗಳು ಕಾರ್ಪೊರೇಟ್ ದಿವಾಳಿಗಳನ್ನು ಸಾರ್ವಭೌಮ ದಿವಾಳಿಗಳಾಗಿ ಪರಿವರ್ತಿಸಿದವು ಮತ್ತು ನಂತರದ ಬಿಕ್ಕಟ್ಟುಗಳು ಜಾಗತಿಕ ಆರ್ಥಿಕ ವ್ಯವಸ್ಥೆಯನ್ನು ಪೀಡಿಸುತ್ತಲೇ ಇವೆ. ಎಫ್‌ಎಸ್‌ಬಿ ಸೂಚಿಸಿದ ಪ್ರಮುಖ ಪರಿಣಾಮಕಾರಿ ಪರಿಹಾರ ವ್ಯವಸ್ಥೆ 'ಪಾರು ಮಾಡುವ' (ಬೇಲ್–ಔಟ್) ಬದಲಿಗೆ 'ಪಾರಾಗುವ'(ಬೇಲ್–ಇನ್) ಒಂದು ಪ್ರಕ್ರಿಯೆಯನ್ನು ಸೂಚಿಸುತ್ತದೆ. 'ಪಾರಾಗುವುದು' ಅಂದರೆ ಬ್ಯಾಂಕುಗಳಿಂದ ದೊಡ್ಡ ಪ್ರಮಾಣದ ಸಾಲಗಳನ್ನು ತಗೊಂಡ ಕಾರ್ಪೊರೇಟ್‌ಗಳು ಅವನ್ನು ಬ್ಯಾಂಕುಗಳಿಗೆ ತೀರಿಸದಿದ್ದರೆ

ಅಂತಹ ಕಾರ್ಪೋರೇಟ್‌ಗಳನ್ನು 'ಪಾರುಮಾಡಲು' ತಮ್ಮ ಠೇವಣಿದಾರರ ಹಣದ ಮೇಲೆ ಲಗಾಮು ಹಾಕಿ ಬ್ಯಾಂಕುಗಳು ತಮ್ಮನ್ನು ರಕ್ಷಿಸಿಕೊಳ್ಳುವುದು ಎಂದರ್ಥ. ಬೇರೆ ಮಾತುಗಳಲ್ಲಿ ಹೇಳುವುದಾದರೆ, 'ಪಾರಾಗುವ' (ಬೇಲ್–ಇನ್) ಪ್ಯಾಕೇಜ್ ಎಂದರೆ ಅಗಾಧ ಕಾರ್ಪೋರೇಟ್ ಸಾಲಗಳ ಸುಸ್ತಿಗಳ ದುಂದುಗಾರಿಕೆಯಿಂದ ಬ್ಯಾಂಕುಗಳು ಅನುಭವಿಸುವ ನಷ್ಟಗಳನ್ನು ಮುಗ್ಧ ಬ್ಯಾಂಕ್ ಖಾತೆದಾರರು ಹೊರುವಂತೆ ಮಾಡುವುದು. ಈ ಖಾತೆದಾರರಲ್ಲಿ ಬಹುಪಾಲು ದುಡಿಯುವ ಜನಗಳೇ ಆಗಿದ್ದಾರೆ. ವ್ಯಕ್ತಿಗಳು ತಮ್ಮದೇ ಸ್ವಂತ ಖಾತೆಗಳಿಂದ ನಗದು ಪಡೆಯಲು ತೀವ್ರ ನಿರ್ಬಂಧಗಳನ್ನು ಹಾಕಿ, ಆ ಮೂಲಕ ಬ್ಯಾಂಕುಗಳ ನಗದು–ಸಾಲ ಅನುಪಾತವನ್ನು ಉತ್ತಮಪಡಿಸಿ, ಅವುಗಳಿಗೆ ನಷ್ಟಗಳಾಗದಂತೆ ನೋಡಿಕೊಂಡು ಇದನ್ನು ನೆರವೇರಿಸಲಾಗುತ್ತದೆ. ಈ 'ಪಾರಾಗುವ' ಕಾರ್ಯತಂತ್ರದ ಮೊದಲ ಪರೀಕ್ಷಣೆಯನ್ನು 2013ರಲ್ಲಿ ಸೈಪ್ರಸ್‌ನಲ್ಲಿ ದಿವಾಳಿಯೆದ್ದ ಬ್ಯಾಂಕುಗಳನ್ನು ಪಾರು ಮಾಡುವಲ್ಲಿ ನಡೆಸಲಾಯಿತು. ಗ್ರೀಸ್‌ನಲ್ಲಿಯೂ ಇಂತಹುದೇ ಕಸರತ್ತನ್ನು ಜಾರಿಗೊಳಿಸಲಾಯಿತು.

## ಬಿಜೆಪಿ ಸರಕಾರದ ಕಾತುರತೆ

ಭಾರತ, ಈ ಬಿಜೆಪಿ ಸರಕಾರದ ಅಡಿಯಲ್ಲಿ ನವ–ಉದಾರವಾದಿ ಸುಧಾರಣೆಗಳನ್ನು ಜಾರಿಗೊಳಿಸುವ ಅತೀವ ಹುರುಪಿನಲ್ಲಿ, ಜಿ–20ರ ಎಫ್‌ಎಸ್‌ಬಿ ಶಿಫಾರಸುಗಳನ್ನು ಪಾಲಿಸಲು ಹಣಕಾಸು ಮಂತ್ರಾಲಯದ ಮೂಲಕ 'ಹಣಕಾಸು ಗೊತ್ತುವಳಿ ಮತ್ತು ಠೇವಣಿ ವಿಮಾ ನಿಗಮ ಮಸೂದೆ 2016'(ಎಫ್‌ಆರ್‌ಡಿಐಸಿ)ರ ಕರಡು ತಯಾರಿಸಲು ಒಂದು ಸಮಿತಿಯನ್ನು ರಚಿಸಿತು. ಈ ಸಮಿತಿ ಸಪ್ಟಂಬರ್ 2016ರಲ್ಲಿ ಹಣಕಾಸು ಸ್ಥಿರತೆಗೆ ಕೊಡುಗೆ ನೀಡುವ ಗುರಿಯ ತನ್ನ ವರದಿಯನ್ನು ಸಲ್ಲಿಸಿತು. ಬಳಕೆದಾರರ ಅಥವ ಎಲ್ಲ ಸಾರ್ವಜನಿಕ ನಿಧಿಗಳ ರಕ್ಷಣೆ ಅದರ ಆದ್ಯತೆಯಲ್ಲ. ಒಂದು ಬ್ಯಾಂಕ್ ಕುಸಿತದ ಸ್ಥಿತಿಯನ್ನೇನಾದರೂ ತಲುಪಿದರೆ ಈ ಎಫ್‌ಆರ್‌ಡಿಐಸಿಗೆ ಮೂರರಲ್ಲಿ ಯಾವುದಾದರೂ ಒಂದು ಕ್ರಮವನ್ನು ಚಲಾಯಿಸುವ ಅಧಿಕಾರ ಇರುತ್ತದೆ. ಈ ಕ್ರಮಗಳೆಂದರೆ– ಬೇರೆ ಯಾವುದೇ ಹಣಕಾಸು ಕಂಪನಿಗೆ, (ಅದು ವಿದೇಶಿ ಕಾರ್ಪೋರೇಟ್ ಕೂಡ ಆಗಿರಬಹುದು) ಮಾರುವುದು; ಒಂದು ಸೇತುವೆಯಾಗುವ ಸಂಸ್ಥೆಯನ್ನು ಸ್ಥಾಪಿಸುವುದು(ಅಂದರೆ ಬ್ಯಾಂಕುಗಳ ವಿಲೀನ, ಈಗ ಭಾರತದಲ್ಲಿ ಪ್ರಸ್ತಾವಿಸಿರುವಂತೆ) ಅಥವ ಒಂದು 'ಪಾರಾಗುವ' ಪ್ರಕ್ರಿಯೆಯನ್ನು ಆರಂಭಿಸುವುದು.

ಇದು ಕಾನೂನಾಗಿ ಜಾರಿಗೆ ಬಂದರೆ, ಆಗ ಭಾರತೀಯ ರಿಝರ್ವ್ ಬ್ಯಾಂಕ್(ಆರ್‌ಬಿಐ)ನ ಉಸ್ತುವಾರಿ, ನಿಯಂತ್ರಣ ಮತ್ತು ಹಣ ಕುರಿತ ಧೋರಣೆಯ ಅಧಿಕಾರ ವ್ಯಾಪ್ತಿ ಪಲ್ಲಟಗೊಂಡು ದೇಶದಲ್ಲಿ ಹಣಕಾಸು ಸ್ಥಿರತೆಯನ್ನು ಖಾತರಿಪಡಿಸುವುದು ಅದರ ಕೆಲಸವಾಗುತ್ತದೆ. ಇದರ ಅರ್ಥ, ವಾಸ್ತವಿಕವಾಗಿ,

ಕುಸಿತವನ್ನು ಎದುರಿಸುವ ಬ್ಯಾಂಕುಗಳು ಮತ್ತು ಆ ಬ್ಯಾಂಕುಗಳಿಂದ ಭಾರೀ ಪ್ರಮಾಣದ ಸಾಲಗಳನ್ನು ಪಡೆದಿರುವ ಕಾರ್ಪೊರೇಟ್‌ಗಳನ್ನು ರಕ್ಷಿಸಲಿಕ್ಕಾಗಿ ಬ್ಯಾಂಕುಗಳ ಸಾಮಾನ್ಯ ಠೇವಣಿದಾರರ ಹಿತಗಳನ್ನು ಬಲಿಕೊಡಲಾಗುವುದು.

ಎಫ್‌ಎಸ್‌ಬಿಯ ಪ್ರಸ್ತಾವದಲ್ಲಿ ಈ ಪರಿಹಾರ ಪ್ರಾಧಿಕಾರಕ್ಕೆ ಒಂದು ಕುಸಿಯುತ್ತಿರುವ ಬ್ಯಾಂಕಿಗೆ ಠೇವಣಿದಾರರ ಹಣ ಮತ್ತು ಸಾಮಗ್ರಿಗಳಿಂದ ಅವರ ಸಮ್ಮತಿಯಿಲ್ಲದೆಯೇ ಮರುಬಂಡವಾಳ ಒದಗಿಸುವ ಅಧಿಕಾರ ಇರುತ್ತದೆ.

ಈ ವ್ಯವಸ್ಥೆಯ ಅಡಿಯಲ್ಲಿ, ಭಾರತದಲ್ಲಿ 'ಠೇವಣಿ ವಿಮೆ ಮತ್ತು ಸಾಲ ಖಾತರಿ ನಿಗಮ'(ಡಿಪಾಸಿಟ್ ಇನ್ಶೂರೆನ್ಸ್ ಅಂಡ್ ಕ್ರೆಡಿಟ್ ಗ್ಯಾರಂಟಿ ಕಾರ್ಪೊರೇಷನ್) ಒಂದು ಬ್ಯಾಂಕ್ ಕುಸಿದಾಗ ಅದರ ಪ್ರತಿ ಠೇಣಿದಾರರಿಗೆ ಗರಿಷ್ಟ 1ಲಕ್ಷ ರೂ. ವರೆಗೆ ವಿಮಾರಕ್ಷಣೆ ಕೊಡುತ್ತದೆ. ಯಾವುದೇ ಠೇವಣಿದಾರ 1ಲಕ್ಷ ರೂ.ಗಿಂತ ಹೆಚ್ಚು ಠೇವಣಿ ಹೊಂದಿರಬಹುದು, ಆದರೆ ಬ್ಯಾಂಕ್ ಕುಸಿದಾಗ ಆ ಠೇವಣಿದಾರ 1ಲಕ್ಷ ರೂ. ಪಡೆಯಬಹುದು, ಉಳಿದ ಹಣವನ್ನು ಪಡೆಯಲು ಯಾವುದೇ ಕಾನೂನು ಪರಿಹಾರ ಇರುವುದಿಲ್ಲ.

## ಚಮಚಾ ಬಂಡವಾಳಶಾಹಿ

ಈ ಬಿಜೆಪಿ ಸರಕಾರ ಪ್ರಧಾನ ಮಂತ್ರಿ ಮೋದಿಯ ಅಡಿಯಲ್ಲಿ ಪ್ರೋತ್ಸಾಹಿಸುತ್ತಿರುವ ಉನ್ನತ ಮಟ್ಟದ ಚಮಚಾ ಬಂಡವಾಳಶಾಹಿಯ ಕೃಪೆಯಿಂದ ಹೆಚ್ಚಿನ ಸರಕಾರೀ ಒಡೆತನದ ಬ್ಯಾಂಕುಗಳ ಕೆಟ್ಟ ಸಾಲಗಳ ಮೊತ್ತ ಇಮ್ಮಡಿಗೊಂಡಿತು, 2015–16ರಲ್ಲಿ ಕೆಲವು ಸಂದರ್ಭಗಳಲ್ಲಿ ಮೂರು ಪಟ್ಟು ಕೂಡ ಆಗಿದೆ. ಮಾರ್ಚ್ 2016ರ ವೇಳೆಗೆ 'ಆರ್‌ಬಿಐ ಆಸ್ತಿ ಗುಣಮಟ್ಟ ಪರಾಮರ್ಶೆ'ಯ ಅಂದಾಜಿನ ಪ್ರಕಾರ ನಮ್ಮ ಬ್ಯಾಂಕುಗಳು ನೀಡಿದ ಸಾಲಗಳಲ್ಲಿ 8.5ಲಕ್ಷ ಕೋಟಿ ರೂ.ಗಳಿಗಿಂತಲೂ ಹೆಚ್ಚು ಮೊತವನ್ನು ಆ ಸಾಲಗಳನ್ನು ಪಡೆದವರು ಹಿಂದಿರುಗಿಸಿಲ್ಲ. ಹೀಗೆ ಹಿಂದಿರುಗಿಸದಿರುವವರು ಪ್ರಮುಖವಾಗಿ ದೊಡ್ಡ ಕಾರ್ಪೊರೇಟ್‌ಗಳು. ಮೇಲಿನ 10 ಕಾರ್ಪೊರೇಟ್ ಮನೆತನಗಳು ಸಾರ್ವಜನಿಕ ವಲಯದ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳಿಗೆ 7ಲಕ್ಷ ಕೋಟಿ ರೂ.ಗಳಷ್ಟು ಅಗಾಧ ಸಾಲಗಳನ್ನು ಬಾಕಿಯಿಟ್ಟುಕೊಂಡಿವೆ. ಈ ಬಾಕಿಗಳಲ್ಲಿ ಬಹುದೊಡ್ಡ ಭಾಗ ವಿದೇಶಗಳಿಗೆ ವರ್ಗಾಯಿಸಲ್ಪಟ್ಟಿದೆ, ಅದು ಎಂದೂ ವಸೂಲಿಯಾಗುವುದಿಲ್ಲ ಎಂದು ಜುಲೈ 2016ರಲ್ಲಿ ಸಿಎಜಿ(ಮಹಾ ಲೆಕ್ಕ ಪರಿಶೋಧಕರ ಕಚೇರಿ) ಹೇಳಿರುವುದಾಗಿ ಮಾಧ್ಯಮಗಳಲ್ಲಿ ವರದಿಯಾಗಿದೆ. ಈ ಬಾಕಿದಾರರ ವಿರುದ್ದ ಕ್ರಮ ಕೈಗೊಂಡು, ಕೋಟ್ಯಂತರ ಭಾರತೀಯ ಜನರು ನಮ್ಮ ಬ್ಯಾಂಕುಗಳಲ್ಲಿ ವಿಶ್ವಾಸವಿಟ್ಟು ಠೇವಣಿಯಿಟ್ಟ ತಮ್ಮ ಜೀವನಪರ್ಯಂತದ ಉಳಿತಾಯಗಳ ಈ ಮೊತ್ತಗಳನ್ನು ಆ ಕಾರ್ಪೊರೇಟ್‌ಗಳ ಆಸ್ತಿಗಳನ್ನು ಮುಟ್ಟುಗೋಲು ಹಾಕಿ ವಸೂಲಿ ಮಾಡುವ ಬದಲು ಈ ಸರಕಾರ 2014 ಮತ್ತು 2015ರಲ್ಲಿ ಒಟ್ಟು ರೂ.1,12,078 ಕೋಟಿ

ಕಾರ್ಪೊರೇಟ್ ಸಾಲಗಳನ್ನು ಮನ್ನಾ ಮಾಡಿದೆ. ಇದು ನಡೆದಿರುವುದು, ಇದೇ ಸರಕಾರ ಸಂಕಟಗಳಿಗೀಡಾಗಿ ಆತ್ಮಹತ್ಯೆಗಳನ್ನು ಮಾಡಿಕೊಳ್ಳುತ್ತಿರುವ ನಮ್ಮ ರೈತರ ಸಾಲಗಳನ್ನು ಮನ್ನಾ ಮಾಡಲು ನಿರಾಕರಿಸುತ್ತಿರುವಾಗ.

ಈ ಅನಾಣ್ಯೀಕರಣ ಈ ಹಿನ್ನೆಲೆಯಲ್ಲಿ ಬಂದಿದೆ. ಡಿಸೆಂಬರ್ 30, 2016ರ ನಂತರವೂ ಬ್ಯಾಂಕುಗಳಿಂದ ನಗದು ಹಿಂದಕ್ಕೆ ಪಡೆಯುವುದರ ಮೇಲೆ ನಿರ್ಬಂಧಗಳು ಮುಂದುವರೆದಿದೆ ಎಂದರೆ, ಈ ಮೋದಿ ಸರಕಾರ ಒಂದು 'ಪಾರಾಗುವ' ಪ್ರಕ್ರಿಯೆಯನ್ನು ಜಾರಿಗೆ ತಂದಿದೆ ಎಂಬುದು ಅದರ ಅರ್ಥ. ತಮ್ಮ ಜೀವನಪರ್ಯಂತದ ಉಳಿತಾಯಗಳನ್ನು ಬ್ಯಾಂಕುಗಳಲ್ಲಿ ಇಟ್ಟಿರುವ ಕೋಟ್ಯಂತರ ಭಾರತೀಯ ಠೇವಣಿದಾರರಿಗೆ ದಂಡ ವಿಧಿಸಲಾಗುತ್ತಿದೆ, ಇವರು ಈ ಬ್ಯಾಂಕುಗಳನ್ನು ಮತ್ತು ಅವರಿಂದ ಬೃಹತ್ ಪ್ರಮಾಣದಲ್ಲಿ ಸಾಲ ಪಡೆದ ಕಾರ್ಪೊರೇಟ್‌ಗಳನ್ನು ಪಾರು ಮಾಡಲು ಸಂಕಟ ಅನುಭವಿಸುವಂತೆ ಮಾಡಲಾಗುತ್ತಿದೆ. ಇದು ಜನಗಳ ಹಣದ ಲೂಟಿಯೇ ಆಗಿದೆ.

ಇದು ಆದಿಕಾಲದ ಬಂಡವಾಳ ಶೇಖರಣೆಯ ಪ್ರಕ್ರಿಯೆಯನ್ನು ತೀವ್ರಗೊಳಿಸಿರುವುದಲ್ಲದೆ ಬೇರೇನೂ ಅಲ್ಲ. ಇದು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ನೇತೃತ್ವದಲ್ಲಿ ನಡೆಯುತ್ತಿರುವ ಸಾಮ್ರಾಜ್ಯಶಾಹಿ ಜಾಗತೀಕರಣದ ಪ್ರಸಕ್ತ ಘಟ್ಟದ ವಿಶೇಷ ಗುಣಲಕ್ಷಣ ಎಂಬುದನ್ನು ನಾವೀಗಾಗಲೇ ಗಮನಿಸಿದ್ದೇವೆ.

ಇದರೊಂದಿಗೇ, ಡಿಜಿಟಲ್ ವ್ಯವಹಾರಗಳತ್ತ ಚಲಿಸಲು ನೀಡಿರುವ ಒತ್ತು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ ಮತ್ತು ಕಾರ್ಪೊರೇಟ್‌ಗಳಿಗೆ ಗರಿಷ್ಟ ಲಾಭ ಗಳಿಕೆಗೆ ಒಂದು ಭಾರೀ ಬಕ್ಷೀಸು. ಪ್ರತಿಯೊಂದು ಡಿಜಿಟಲ್ ವ್ಯವಹಾರದಲ್ಲಿ ಒಂದು ವ್ಯವಹಾರ ನಡೆಸುವ ವೆಚ್ಚ ಇರುತ್ತದೆ, ಅದು ಬಳಕೆದಾರರ ಮೇಲೆ ಹೆಚ್ಚಿನ ಹೊರೆಯಾದರೆ, ಕಾರ್ಪೊರೇಟ್‌ಗಳಿಗೆ ಲಾಭದ ಒಂದು ಮೂಲ. ಈ ಅನಾಣ್ಯೀಕರಣ ಕಸರತ್ತನ್ನು ಈ ಸರಕಾರ ನವ–ಉದಾರವಾದಿ ಸುಧಾರಣೆಯ ದಿಕ್ಪಥಕ್ಕೆ ಭಾರತದ ಅಡಿಯಾಳುತನದ ಭಾಗವಾಗಿ ಮತ್ತು ಒಟ್ಟಾರೆಯಾಗಿ ಸಾಮ್ರಾಜ್ಯಶಾಹಿಗೆ ಅಡಿಯಾಳುತನದ ಒಂದು ಭಾಗವಾಗಿ ಕೈಗೆತ್ತಿಕೊಂಡಿದೆ ಎಂಬುದು ಸ್ಪಷ್ಟ.

ಭಾರತ, ಇತ್ತೀಚಿನ ರಕ್ಷಣಾ ಒಪ್ಪಂದಗಳಲ್ಲಿ ಕಂಡು ಬಂದಿರುವಂತೆ ಅಮೆರಿಕನ್ ಸಾಮ್ರಾಜ್ಯಶಾಹಿಯ ಒಂದು ಕಿರಿಯ ಅಡಿಯಾಳು ಮಿತ್ರನಾಗಿ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳ ಒಂದು ಪ್ರಮುಖ ರಕ್ಷಣಾ ಭಾಗೀದಾರನಾಗಿ ಮೂಡಿ ಬಂದಿದೆಯಷ್ಟೇ ಅಲ್ಲ, ಈಗ ಗರಿಷ್ಟ ಲಾಭವನ್ನು ದೋಚುವ ಬಂಡವಾಳಶಾಹಿಯ ಕೊಳ್ಳೆ ಹೊಡೆಯುವ ಚಾರಿತ್ರ್ಯವನ್ನು ಅತ್ಯಂತ ಆಕ್ರಾಮಕವಾಗಿ ಅನುಸರಿಸುವ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಒಂದು ಅಡಿಯಾಳು ಭಾಗೀದಾರನೂ ಆಗಿದೆ.

## ಜಿಎಸ್‌ಟಿ

ಕಳೆದ ಕೇಂದ್ರ ಸಮಿತಿ ಸಭೆಯಲ್ಲಿ ನಾವು ಗಮನಿಸಿದಂತೆ, ಮತ್ತು ನಿರೀಕ್ಷೆಯಂತೆ, ತೆರಿಗೆಯ ಜಿಎಸ್‌ಟಿ ದರಗಳು ಮತ್ತು ಕೇಂದ್ರೀಯ ಜಿಎಸ್‌ಟಿ, ರಾಜ್ಯ ಜಿಎಸ್‌ಟಿ ಮತ್ತು ರಾಜ್ಯಗಳ ನಡುವಿನ ಜಿಎಸ್‌ಟಿ ನಡುವಿನ ತೆರಿಗೆ ಆದಾಯವನ್ನು ಸಂಗ್ರಹಿಸಲು ಪ್ರಾಧಿಕಾರದ ರೂಪೀಕರಣ ಕುರಿತ ಒಂದು ಒಪ್ಪಂದದ ಪ್ರಯತ್ನಗಳು ಎತ್ತಿರುವ ಪ್ರಶ್ನೆಗಳನ್ನು ಕೇಂದ್ರ ಮತ್ತು ರಾಜ್ಯ ಹಣಕಾಸು ಮಂತ್ರಿಗಳು ಇರುವ ಜಿಎಸ್‌ಟಿ ಮಂಡಳಿ ಇನ್ನೂ ಪರಿಹರಿಸಿಲ್ಲ. ಮುಖ್ಯ ವಿವಾದ ಇರುವುದು 1.5ಕೋಟಿ ರೂ.ಗಳು ಅಥವ ಅದಕ್ಕಿಂತ ಕಡಿಮೆ ವಹಿವಾಟಿನ ಕಂಪನಿಗಳಿಂದ ತೆರಿಗೆ ಆದಾಯಗಳನ್ನು ಸಂಗ್ರಹಿಸುವ ರಾಜ್ಯಗಳ ಹಕ್ಕಿನ ಕುರಿತಾಗಿ. ಕೇಂದ್ರ ಇದನ್ನು ಕೂಡ ತಾನೇ ವಹಿಸಿಕೊಳ್ಳಬಯಸುತ್ತಿದೆ.

ಅನಾಣ್ಯೀಕರಣದ ನಂತರ ಹಲವು ರಾಜ್ಯಗಳು ಪ್ರಸಕ್ತ ಹಣಕಾಸು ವರ್ಷದಲ್ಲಿ ಆದಾಯ ನಷ್ಟವಾಗಬಹುದು ಎಂದು ವರದಿ ಮಾಡಿವೆ. ಕೇರಳ ತನ್ನ ನಷ್ಟ ತನ್ನ ಸರಾಸರಿ ವಾರ್ಷಿಕ ಆದಾಯದ 25ಶೇ,ದಷ್ಟಾಗಬಹುದು ಎಂದು ಅಂದಾಜು ಮಾಡಿದೆ. ಹೀಗಿರುವಾಗ, ಜಿಎಸ್‌ಟಿ ಅಡಿಯಲ್ಲಿ ಯಾವುದೇ ಮೂರ್ತ ತೆರಿಗೆ ದರಗಳು ಈ ಆದಾಯ ನಷ್ಟವನ್ನು ಲೆಕ್ಕಕ್ಕೆ ತಗೊಳ್ಳಬೇಕಾಗುತ್ತದೆ. ರಾಜ್ಯಗಳ ಹಕ್ಕುಗಳ ರಕ್ಷಣೆಯ ಈ ನಿರ್ಣಾಯಕ ಸಮರ ಈಗ ಜಿಎಸ್‌ಟಿ ಮಂಡಳಿಯಲ್ಲಿ ಈ ಪ್ರಶ್ನೆಗಳ ಮೇಲೆ ನಡೆಯುತ್ತಿದೆ. ಫಲಿತಾಂಶ ಏನು ಎಂದು ನಾವು ಕಾಯಬೇಕಾಗಿದೆ.

## ಇತ್ತೀಚಿನ ಸುಪ್ರಿಂ ಕೋರ್ಟ್ ತೀರ್ಪು

ಸುಪ್ರಿಂ ಕೋರ್ಟಿನ ಏಳು ನ್ಯಾಯಾಧೀಶರಿದ್ದ ಸಂವಿಧಾನ ಪೀಠದ ತೀರ್ಪು ಚುನಾವಣಾ ಪ್ರಕ್ರಿಯೆ ಒಂದು ಜಾತ್ಯತೀತ ಚಟುವಟಿಕೆ, ಇಂತಹ ಚಟುವಟಿಕೆಯಲ್ಲಿ ಧರ್ಮಕ್ಕೆ ಸ್ಥಾನವಿರಲು ಸಾಧ್ಯವಿಲ್ಲ ಎಂದು ಹೇಳಿದೆ. ಅದು 4–3 ಬಹುಮತದಿಂದ ಈ ತೀರ್ಪು ನೀಡಿದೆ.

ಮುಖ್ಯ ನ್ಯಾಯಮೂರ್ತಿ ಠಾಕುರ್ ಅವರು ಇದರೊಡನೆ ಸಹಮತವಿರುವ ಒಂದು ಪ್ರತ್ಯೇಕ ತೀರ್ಪು ನೀಡಿದ್ದಾರೆ. ಅದು ಹೀಗದಿಂದೆ: "...ಪ್ರಭುತ್ವದ ಅಥವ ಅದರ ಚಟುವಟಿಕೆಯ ಜಾತ್ಯತೀತ ಚಾರಿತ್ರ್ಯದಿಂದ ಧರ್ಮದ ಅಥವ ಧಾರ್ಮಿಕ ಪರಿಗಣನೆಯನ್ನು ತೆಗೆಯುವಂತಹ ಒಂದು ವ್ಯಾಖ್ಯೆ ಇಂತಹ ಪರಿಗಣನೆಗಳು ಪ್ರವೇಶಿಸಲು, ತಟ್ಟಲು ಅಥವ ಪರಿಣಾಮ ಬೀರಲು ಅವಕಾಶ ನೀಡುವ ವ್ಯಾಖ್ಯೆಗಿಂತ ಅಪೇಕ್ಷಣೀಯವಾಗಬೇಕು."

ಸರ್ವೋಚ್ಚ ನ್ಯಾಯಾಲಯ  ಜನತಾ ಪ್ರಾತಿನಿಧ್ಯ ಕಾಯ್ದೆ, 1951ರ ಸೆಕ್ಷನ್ 123(3)ರ ವ್ಯಾಖ್ಯಾನವನ್ನು ಪರಿಶೀಲಿಸುತ್ತಿತ್ತು. ಮುಖ್ಯ ನ್ಯಾಯಾಧೀಶ ಠಾಕುರ್ ಅವರು "ಸೆಕ್ಷನ್123(3)ಗೆ (1961ರ) ತಿದ್ದುಪಡಿಯ ನಂತರವೂ ಅದರ

ಒಟ್ಟಂಶವೆಂದರೆ ಧರ್ಮ, ಜನಾಂಗ, ಜಾತಿ, ಸಮುದಾಯ ಅಥವ ಭಾಷೆಯ ಹೆಸರಿನಲ್ಲಿ ಮನವಿ, ಅದು ಅಭ್ಯರ್ಥಿಯ ಧರ್ಮ, ಜನಾಂಗ, ಜಾತಿ, ಸುಮುದಾಯ ಅಥವ ಭಾಷೆಯು ಹೆಸರಿನಲ್ಲಿ ಇಲ್ಲದಿದ್ದಾಗಲೂ ನಿಷಿದ್ಧವಾಗಿದೆ. ಹೀಗೆ ವಾಖ್ಯಾನಿಸಿದಾಗ ಧರ್ಮ, ಜನಾಂಗ, ಜಾತಿ, ಸಮುದಾಯ ಅಥವ ಭಾಷೆ ಚುನಾವಣಾ ಪ್ರಕ್ರಿಯೆಯಲ್ಲಿ ಯಾವುದೇ ಪಾತ್ರ ವಹಿಸಲು ಬಿಡಲಾಗದು ಮತ್ತು ಈ ಯಾವುದೇ ಪರಿಗಣನೆಯಿಂದ ಮನವಿ ಮಾಡಿದರೆ, ಅದು ಒಂದು ಭ್ರಷ್ಟ ಆಚರಣೆಯಾಗುತ್ತದೆ" ಎಂದು ಹೇಳಿದ್ದಾರೆ.

ಚುನಾವಣೆಗಳು ಒಂದು ಜಾತ್ಯತೀತ ಚಟುವಟಿಕೆ ಎಂದು ಎತ್ತಿ ಹಿಡಿದಿರುವುದು ಸ್ವಾಗತಾರ್ಹವೇ ಆದರೂ ಒಬ್ಬ ಅಭ್ಯರ್ಥಿಯ ಪರವಾಗಿ ಯಾರಾದರೂ ಈಪರಿಗಣೆಗಳ ಮೇಲೆ ಮತದಾರರಿಗೆ ಮನವಿ ಮಾಡುವುದಕ್ಕೂ ಮತ್ತು ಒಂದು ಚುನಾವಣಾ ಪ್ರಕ್ರಿಯೆಯ ಚರ್ಚೆಯಲ್ಲಿ ಧರ್ಮ, ಜಾತಿ ಅಥವ ಭಾಷೆಯ ಅಂಶಗಳ ಮೇಲೆ ಅನ್ಯಾಯಗಳ ಮತ್ತು ಪಕ್ಷಪಾತಗಳ ಪ್ರಶ್ನೆ ಎತ್ತುವುದಕ್ಕೂ ನಡುವೆ ವ್ಯತ್ಯಾಸದ ಒಂದು ಬಹಳ ತೆಳ್ಳಗಿನ ಗೆರೆ ಇದೆ.

ಭಿನ್ನ ಮತದ ತೀರ್ಪು ನೀಡಿದ ನ್ಯಾಯಾಧೀಶರುಗಳು ಭಾರತೀಯ ಪ್ರಭುತ್ವದ ಸ್ವರೂಪ ಜಾತ್ಯತೀತವಾಗಿದ್ದರೂ, ಸಂವಿಧಾನ ಧರ್ಮ, ಜಾತಿ ಅಥವ ಭಾಷೆಗಳ ಪ್ರಶ್ನೆಗಳ ಬಗ್ಗೆ ಉಪೇಕ್ಷೆಯನ್ನೇನೂ ಹೊಂದಿಲ್ಲ ಎಂದು ಹೇಳುತ್ತಾರೆ. "ಸಂವಿಧಾನಕ್ಕೆ ಬಹಳಷ್ಟು ಜನವಿಭಾಗಗಳ ಮೇಲೆ ಧರ್ಮ,ಜಾತಿ ಮತ್ತು ಭಾಷೆಯ ಆಧಾರದಲ್ಲಿ ಮಾಡಿರುವ ಪಕ್ಷಪಾತ ಮತ್ತು ಹೇರಿರುವ ವಂಚನೆಯ ಇತಿಹಾಸದ ಪರಿವೆಯಿಲ್ಲವೆಂದಲ್ಲ. ಧರ್ಮ, ಜಾತಿ ಮತ್ತು ಭಾಷೆ ಪರಿವರ್ತಿಸಲಾಗದ ಲಕ್ಷಣಗಳ ಆಧಾರದಲ್ಲಿ ನಮ್ಮ ಸಮಾಜದ ಬಹಳಷ್ಟು ವಿಭಾಗಗಳ ಮೇಲೆ ಹೇರಿರುವ ಪಕ್ಷಪಾತದ ಸಂಕೇತವಾಗಿರುವಂತೆ, ಶತಮಾನಗಳ ಅನ್ಯಾಯಗಳಿಗೆ ಉತ್ತರಿಸುವ ಒಂದು ಸಾಮಾಜಿಕ ಅಣಿನೆರಿಕೆಯ ಸಂಕೇತವೂ ಆಗಿದೆ. ಅವು ಒಂದು ನ್ಯಾಯಯುತ ಸಾಮಾಜಿಕ ವ್ಯವಸ್ಥೆಯನ್ನು ಉತ್ಪತ್ತಿಸುವ ಸಂವಿಧಾನದ ಕೇಂದ್ರ ವಿಷಯದ ಭಾಗಗಳಾಗಿವೆ" ಎಂದು ಅವರು ಹೇಳುತ್ತಾರೆ.

ಚುನಾವಣಾ ಪ್ರಯೋಜನಕ್ಕಾಗಿ ಅಥವ ವಿರೋಧಿ ಅಭ್ಯರ್ಥಿಯ ಸೋಲಿಗಾಗಿ ಈ ಯಾವುದೇ ಅಂಶಗಳನ್ನು ಬಳಸಿಕೊಳ್ಳುವುದು ಮತ್ತು ಸಾಮಾಜಿಕ ಪಕ್ಷಪಾತ ಮತ್ತು ಸಾಮಾಜಿಕ ಅನ್ಯಾಯಗಳ ಪ್ರಶ್ನೆಗಳನ್ನು ಎತ್ತುವುದಕ್ಕೂ ನಡುವೆ ಇರುವ ವ್ಯತ್ಯಾಸವನ್ನು ಸ್ಪಷ್ಟಪಡಿಸಬೇಕಾದ ಅಗತ್ಯವಿದೆ. ಇದು ಸಾಮಾಜಿಲ ನ್ಯಾಯವನ್ನು ಪಡೆಯುವ ಯಾವುದೇ ಚುನಾವಣಾ ಸಂವಾದದ ಅನಿವಾರ್ಯ ಅಂಶವಾಗಿರಬೇಕಾಗುತ್ತದೆ, ಅದನ್ನು ನಿಷೇಧಿಸಲು ಸಾಧ್ಯವಿಲ್ಲ. "ಜಾತಿ,ಮತ ಅಥವ ಲಿಂಗದ ಭೇದವಿಲ್ಲದೆ" ಎಲ್ಲ ನಾಗರಿಕರಿಗೆ ಸಂವಿಧಾನಿಕ ಸಮಾನತೆಯ ಭರವಸೆಯನ್ನು ನಿರಾಕರಿಸುವ ಇಂತಹ ಪ್ರಶ್ನೆಗಳು ಅಗತ್ಯವಾಗಿಯೂ ಚುನಾವಣಾ ಪ್ರಚಾರಗಳ ವೇಳೆಯಲ್ಲಿ ರಾಜಕೀಯ ಸಂವಾದದ ಭಾಗವಾಗಿರುತ್ತವೆ.

## ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆಗಳು

ಪ್ರಧಾನ ಮಂತ್ರಿಗಳು ಇತ್ತೀಚೆಗೆ ಲೋಕಸಭೆ ಮತ್ತು ವಿಧಾನ ಸಭೆಗೆ ಏಕಕಾಲದಲ್ಲಿ ಚುನಾವಣೆಗಳು ಬಗ್ಗೆ ತಮ್ಮ ಪ್ರಚಾರವನ್ನು ತೀವ್ರಗೊಳಿಸಿದ್ದಾರೆ, ಅದನ್ನು ಚುನಾವಣೆಗಳಿಗೆ ತಗಲುವ 'ಖರ್ಚು ಮತ್ತು ಸಮಯದ ಆಧಾರದಲ್ಲಿ ಸಮರ್ಥಿಸಿಕೊಳ್ಳುತ್ತಿದ್ದಾರೆ. ಇದು ಸಂಪೂರ್ಣವಾಗಿ ಪ್ರಜಾಪ್ರಭುತ್ವ-ವಿರೋದಿ, ನರೇಂದ್ರ ಮೋದಿಯವರು ನಡೆಸುತ್ತಿರುವ ಅಧ್ಯಕ್ಷೀಯ ಸ್ವರೂಪದ ಚುನಾವಣಾ ಪ್ರಚಾರದಿಂದ ಚುನಾವಣಾ ಲಾಭ ಪಡೆಯುವುದರ ಮೇಲೆ ಕಣ್ಣಿಟ್ಟಿರುವ ಪ್ರಸ್ತಾವನೆ.

ಸ್ವತಂತ್ರ ಭಾರತದಲ್ಲಿ ಆರಮಬದಲ್ಲಿ ಈ ಚುನಾವಣೆಗಳು ಆರಂಭದಲ್ಲಿ ಏಕಕಾಲದಲ್ಲೇ ಇದ್ದವು. ಕೇಂದ್ರ ಸರಕಾರ ಆಳುವ ವರ್ಗಗಳ ಸ್ವಾರ್ಥ ಹಿತಾಸಕ್ತಿಗಳನ್ನು ಈಡೇರಿಸಲು ಪ್ರಜಾಸತ್ತಾತ್ಮಕವಾಗಿ ಚುನಾತಿತವಾದ ರಾಜ್ಯಸರಕಾರಗಳನ್ನು ವಜಾ ಮಾಡಿ ಸಂವಿಧಾನದ 356ನೇ ವಿಧಿಯನ್ನು ಸಂಪೂರ್ಣ ದುರುಪಯೋಗ ಪಡಿಸಿಕೊಳ್ಳಲು ಆರಂಭಿಸಿದಾಗ ಈ ಏಕಕಾಲದ ಚುನಾವಣೆಗಳಿಗೆ ಕುತ್ತು ಬಂದಿತು. ಕೇಂದ್ರ ಸರಕಾರ ಈ ಅಧಿಕಾರವನ್ನು ಉಳಿಸಿಕೊಮಡಿರುವ ವರೆಗೆ ಯಾವುದೇ ಏಕಕಾಲದ ವೇಳಾಪಟ್ಟಿಗೆ ಅಂಟಿಕೊಳ್ಳುವ ಭರವಸೆ ಇರುವುದಿಲ್ಲ.

ಅಲ್ಲದೆ ಒಂದು ಸಂಸದೀಯ ಪ್ರಜಾಪ್ರಭುತ್ವದಲ್ಲಿ ಅನೇಕ ಸಂದರ್ಭದಲ್ಲಿ ಒಂದು ಸಮ್ಮಿಶ್ರ ಸರಕಾರ ರಚನೆಯಾಗುತ್ತದೆ. ಇಂತಹ ಸರಕಾರಗಳು ಒಂದಿಲ್ಲೊಂದು ಭಾಗೀದಾರರು/ಬೆಂಬಲಿಗರು ರಾಜಕೀಯ ಬಿನ್ನಾಭಿಪಾಯದ ಮೇಲೆ ಬೆಂಬಲವನ್ನು ಹಿಂತೆಗೆದುಕೊಂಡಾಗ ಅಸ್ತಿರವಾಗಿ ಬಡಬಹುದು. ಇಂತಹ ಸಂದರ್ಭದಲ್ಲಿ ಮತ್ತೆ ಜನರ ಬಳಿ ಹೋಗಿ ಅವರ ತೀರ್ಪನ್ನು ಕೇಳುವುದಲ್ಲದೆ ಬೇರೆ ಪರ್ಯಾಯವಿರುವುದಿಲ್ಲ. ಏಕಕಾಲದಲ್ಲಿ ಚುನಾವಣೆ ನಡೆಯಬೇಕೆಂದು ಹೇರಿದರೆ ಅದು ಜನಗಳ ಪ್ರಜಾಪ್ರಭುತ್ವ ಹಕ್ಕನ್ನು ನಿರಾಕರಿಸಿದಂತಾಗುತ್ತದೆ, ಆಮೂಲಕ ಇಂತಹ ನಡೆ ಪ್ರಜಾಪ್ರಭುತ್ವ-ವಿರೋಧಿಯಾಗುತ್ತದೆ.

ಒಕ್ಕೂಟ ತತ್ವ ನಮ್ಮ ಸಂವಿಧಾನದ ಒಮದು ಮೂಲಭೂತ ರಚನೆ. ರಾಜ್ಯಗಳ ಹಕ್ಕುಗಳನ್ನು ಮತ್ತು ತಮ್ಮ ಪ್ರತಿನಿಧಿಗಳನ್ನು ಪ್ರಜಾಸತ್ತಾತ್ಮಕವಾಗಿ ಚುನಾಯಿಸುವ ರಾಜ್ಯಗಳ ಜನಗಳ ಹಕ್ಕನ್ನು ಬುಡಮೇಲು ಮಾಡಲು ಸಾಧ್ಯವಿಲ್ಲ.

## ಭಾರತವನ್ನು ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಒಬ್ಬ ಅಡಿಯಾಳು ಮಿತ್ರನಾಗಿ ಗಟ್ಟಿಯಾಗಿಸುವತ್ತ ಇನ್ನೊಂದು ಹೆಜ್ಜೆ

ಮೋದಿ ಸರಕಾರ ಭಾರತ'ವನ್ನು ಅಮೆರಿಕಾ ಸಂಯುಕ್ತ ಸಂಸ್ಥಾನಗಳೊಂದಿಗೆ ಒಂದು ಮಿಲಿಟರಿ ಮೈತ್ರಿಯಲ್ಲಿ ಸಿಲುಕಿಸುವತ್ತ ಮತ್ತೊಂದು ಹೆಜ್ಜೆ ಇಟ್ಟಿದೆ. ಭಾರತಕ್ಕೆ ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಒಂದು 'ಪ್ರಮುಖ ರಕ್ಷಣಾ ಭಾಗೀದಾರ'

ಎಂಬ ಸ್ಥಾನಮಾನವನ್ನು ಕೊಡುವ ಶರತ್ತುಗಳನ್ನು ಅಮೆರಿಕನ್ ರಕ್ಷಣಾ ಕಾರ್ಯದರ್ಶಿ ಅಸ್ಥೊನ್ ಕಾರ್ಟರ್ ಭೇಟಿ ಕಾಲದಲ್ಲಿ ಅಂತಿಮಗೊಳಿಸಲಾಗಿದೆ.

ಇದು ಈ ವರ್ಷದ ಆರಂಭದಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳು ಮತ್ತು ಭಾರತದ ಮಂತ್ರಿಗಳು 'ಸಮರ ಸಾಗಾಣಿಕೆ ವಿನಿಮಯ ಒಪ್ಪಂದದ ಮನವಿ ಪತ್ರ'ಕ್ಕೆ ಸಹಿ ಹಾಕಿದ್ದನ್ನು ಅನುಸರಿಸಿ ಬಂದಿದೆ.

'ಪ್ರಮುಖ ರಕ್ಷಣಾ ಭಾಗೀದಾರ' ಎನ್ನುವುದು ಹೇಳಿಕೆಯಲ್ಲಿ ತಿಳಿಸಿರುವಂತೆ "ಭಾರತಕ್ಕೆ ವಿಶಿಷ್ಟವಾದ ಒಂದು ಸ್ಥಾನಮಾನ" ಭಾರತವನ್ನು ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಅತಿ ನಿಕಟ ಮಿತ್ರರು ಮತ್ತು ಭಾಗೀದಾರರುಗಳಿಗೆ ಸಮನಾದ ಮಟ್ಟಕ್ಕೆ ತರುತ್ತದೆ." ಈ ಮೂಲಕ ರಕ್ಷಣಾ ಸಂಬಂಧಗಳನ್ನು ಕುರಿತಂತೆ ಭಾರತದ ದೀರ್ಘಕಾಲದ ಧೋರಣೆಯಿಂದ ಗಮನಾರ್ಹ ರೀತಿಯಲ್ಲಿ ದೂರ ಸರಿಯಲಾಗಿದೆ, ಮತ್ತು ಇದನ್ನು ಸಂಸತ್ತನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಮಾಡಲಾಗಿದೆ.

ಅಮೆರಿಕನ್ ಸರಕಾರ ಈ 'ಪ್ರಮುಖ ರಕ್ಷಣಾ ಭಾಗೀದಾರ' ಎಂಬ ಹುದ್ದೆಯ ವಿವರಗಳನ್ನು ಅಮೆರಿಕನ್ ಸೆನೆಟ್‌ಗೆ ಮಂಜೂರಾತಿಗೆ 'ಎಫ್‌ವೈ 2017 ಎನ್‌ಡಿಎಎ'– ರಾಷ್ಟ್ರೀಯ ರಕ್ಷಣಾ ಅಧಿಕಾರ ನೀಡಿಕೆ ಕಾಯ್ದೆಯ ಭಾಗವಾಗಿ ಸಲ್ಲಿಸಿದೆ. ಆದರೆ ಈ ಬಿಜೆಪಿ ಸರಕಾರ ಇಂತಹ ಒಂದು ಮಹತ್ವದ ವ್ಯವಹಾರದ ಬಗ್ಗೆ ಸಂಸತ್ತಿನಲ್ಲಿ ಒಂದು ಹೇಳಿಕೆಯನ್ನೂ ಕೂಡ ಕೊಟ್ಟಿಲ್ಲ. ದೇಶ ಈ '2017 ಎನ್‌ಡಿಎಎ' ಓದಿಕೊಂಡು ಈ ವ್ಯವಹಾರದ ಅಮೆರಿಕನ್ ಭಾಗವನ್ನು ನೋಡಬಹುದಾಗಿದೆ, ಆದರೆ ಅಮೆರಿಕಾದ ಒಂದು 'ಪ್ರಮುಖ ರಕ್ಷಣಾ ಭಾಗೀದಾರ'ನಾಗಲು ಭಾರತ ಯಾವ ಶರತ್ತುಗಳಿಗೆ ಬದ್ಧವಾಗಿದೆ ಎಂಬುದು ಅಜ್ಞಾತವಾಗಿಯೇ ಉಳಿದಿದೆ.

'2017 ಎನ್‌ಡಿಎಎ'ಯ ಸೆಕ್ಷನ್ 1292ರ 'ಇ' ಪರಿಚ್ಛೇದ ಭಾರತಕ್ಕೆ ಮಾರಿರುವ ಸಾಮಗ್ರಿಗಳು ಮತ್ತು ತಂತ್ರಜ್ಞಾನಗಳಿಗೆ **"ರಕ್ಷಣಾ ಸಾಮಗ್ರಿಗಳು, ರಕ್ಷಣಾ ಸೇವೆಗಳು, ಮತ್ತು ಸಂಬಂಧಪಟ್ಟ ತಂತ್ರಜ್ಞಾನ, ಸೂಕ್ತ ಸೈಬರ್‌ಭದ್ರತೆ ಮತ್ತು ಅಂತಿಮವಾಗಿ ಬಳಕೆಯ ಮೇಲುಸ್ತುವಾರಿಯ ಒಪ್ಪಂದಗಳನ್ನು ತಪಾಸಣೆ ಮಾಡುವ ವ್ಯವಸ್ಥೆಗಳ"** ಬಗ್ಗೆ ಹೇಳುತ್ತದೆ. ನಂತರ ಪರಿಚ್ಛೇದ (ಎಫ್) ಭಾರತ ತನ್ನ **"ರಫ್ತು ನಿಯಂತ್ರಣ ಮತ್ತು ಖರೀದಿ ವ್ಯವಸ್ಥೆಗಳನ್ನು ಅಮೆರಿಕ ಸಂಯುಕ್ತ ಸಂಸ್ಥಾನಗಳ ವ್ಯವಸ್ಥೆಗಳೊಂದಿಗೆ" ಹೊಂದಿಸಿಕೊಳ್ಳುತ್ತದೆ** ಎನ್ನುತ್ತದೆ. ಇವು ಬಿಜೆಪಿ ಸರಕಾರ ಕೊಟ್ಟಿರುವ ಮಹತ್ವದ ರಿಯಾಯ್ತಿಗಳು, ಇವು ಭಾರತೀಯ ರಕ್ಷಣಾ ಪಡೆಗಳನ್ನು ಅಮೆರಿಕನ್ ತಪಾಸಣೆಗೆ ಮತ್ತು ಭಾರತೀಯ ರಕ್ಷಣಾ ಉತ್ಪಾದನೆಯನ್ನು ಅಮೆರಿಕನ್ ಹತೋಟಿಗೆ ಒಳಪಡಿಸುತ್ತವೆ.

ಈ ಬಿಜೆಪಿ ಸರಕಾರ ಭಾರತದ ಸಾರ್ವಭೌಮತೆ ಮತ್ತು ಸಾಮರಿಕ ಸ್ವಾಯತ್ತತೆಗೆ ಧಕ್ಕೆ ತರುತ್ತಿದೆ ಎಂಬ ಗಂಭೀರ ಆಶಂಕೆಗಳು ಏಳುತ್ತವೆ. 2017 ಎನ್‌ಡಿಎಎ'ಯ ಸೆಕ್ಷನ್ 1292ರ ಪರಿಚ್ಛೇದ (ಐ) ಈ ಸಂಗತಿಗಳನ್ನು ಸಾಕಷ್ಟು ಸ್ಪಷ್ಟಗೊಳಿಸುತ್ತದೆ.

**“ದಕ್ಷಿಣ ಏಶ್ಯದಲ್ಲಿ ಮತ್ತು ಇನ್ನೂ ದೊಡ್ಡ ಇಂಡೋ–ಏಶ್ಯ–ಫ್ಯಾಸಿಫಿಕ್ ಪ್ರದೇಶಗಳಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳ ಹಿತಗಳನ್ನು ಈಡೇರಿಸಲು ಭಾರತದೊಂದಿಗೆ ರಕ್ಷಣಾ ಮತ್ತು ಭದ್ರತಾ ಸಹಕಾರವನ್ನು”** ಹೆಚ್ಚಿಸಲಾಗಿದೆ ಎಂದು ಅದು ವಿಶದವಾಗಿ ಎತ್ತಿ ತೋರಿದೆ. ಇದು ಭಾರತವನ್ನು ನಮ್ಮದೇ ನೆರೆಕರೆಯಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳ ಕಿರಿಯ ಮಿತ್ರನಾಗಿ ಗಟ್ಟಿಯಾಗಿ ಬಂಧಿಸುತ್ತದೆ. ಇದು ಭಾರತದ ಸ್ವತಂತ್ರ ವಿದೇಶಾಂಗ ಧೋರಣೆಯ ಹೆಣಪೆಟ್ಟಿಗೆಯ ಮೇಲೆ ಹೊಡೆದಿರುವ ಅಂತಿಮ ಮೊಳೆಯನ್ನು ಪ್ರತಿನಿಧಿಸುತ್ತದೆ.

ಮೋದಿ ಸರಕಾರ ಈ ಒಪ್ಪಂದದ ಪೂರ್ಣಪಾಟವನ್ನು ಸಾರ್ವಜನಿಕಗೊಳಿಸಿಲ್ಲ. ಭಾರತ ಸಾರ್ವಭೌಮತೆ ಮತ್ತು ರಾಷ್ಟ್ರೀಯ ಹಿತಾಸಕ್ತಿಗಳ ಮೇಲೆ ಜೀವನ್ಮರಣ ಪರಿಣಾಮ ಬೀರುವ ಈ ಒಪ್ಪಂದಗಳು ಸಾರ್ವಜನಿಕವಾಗಿ ಲಭ್ಯವಾಗುವಂತೆ ಮಾಡುವುದು ಅಗತ್ಯವಾಗಿದೆ.

## ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಐಕ್ಯತೆ ಬೆಸೆಯುವ ಪ್ರಯತ್ನಗಳು

ನಮ್ಮ 21ನೇ ಮಹಾಧಿವೇಶನದ ನಿರ್ಣಯಕ್ಕೆ ಅನುಗುಣವಾಗಿ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಐಕ್ಯತೆ ಬೆಸೆಯುವುದಕ್ಕೆ ಸಂಬಂಧಪಟ್ಟಂತೆ ಐದು ನಿರ್ದಿಷ್ಟ ಉಪಕ್ರಮಗಳನ್ನು ಕೈಗೊಳ್ಳಲಾಗಿದೆ.

**1. ದಲಿತ ಆಂದೋಲನಗಳು:** ದಲಿತ ಆಂದೋಲನಗಳೊಂದಿಗೆ ಸಂಪರ್ಕಗಳನ್ನು ಬೆಸೆಯುವ ಕ್ರಮಗಳನ್ನು ಕೈಗೊಂಡ ಫಲವಾಗಿ ರಿಪಬ್ಲಿಕನ್ ಪಕ್ಷ(ಪ್ರಕಾಶ ಅಂಬೇಡ್ಕರ್), ನಮ್ಮ ಕೃಷಿ ಕಾರ್ಮಿಕ ರಂಗ ಮತ್ತು ದಲಿತ ವೇದಿಕೆ ಹಾಗೂ ಸಿಪಿಐನ ಕೃಷಿ ಕಾರ್ಮಿಕ ಸಂಘಟನೆ ಮತ್ತ ದಲಿತ ವೇದಿಕೆಗಳಿರುವ ‘ದಲಿತ ಸ್ವಾಭಿಮಾನ ರಂಗ’ ರಚನೆಗೊಂಡಿದೆ. ಈ ರಂಗದಿಂದ ದಿಲ್ಲಿ ಮತ್ತು ಬೆಂಗಳೂರಿನಲ್ಲಿ ಜಂಟಿ ರ್‍ಯಾಲಿಗಳು ನಡೆದಿವೆ. ಇಂತಹ ಜಂಟಿ ರ್‍ಯಾಲಿಗಳನ್ನು ಈಗ ದೇಶದ ಇತರ ಮುಖ್ಯ ನಗರಗಳಲ್ಲಿ ಯೋಜಿಸುವ ಅಗತ್ಯವಿದೆ.

**2. ಕೋಮುವಾದ–ವಿರೋಧಿ ಅಣಿನೆರಿಕೆ:** ಪಶ್ಚಿಮ ಬಂಗಾಲದಲ್ಲಿ ಕೋಮು ಕ್ಷೋಭೆ ಮತ್ತು ಹಿಂಸಾಚಾರ ನಾಲ್ಕು ದಶಕಗಳ ನಂತರ ಮೊದಲ ಬಾರಿಗೆ ಅಭೂತಪೂರ್ವ ರೀತಿಯಲ್ಲಿ ಬೆಳೆದಿರುವುದು ಕಾಣ ಬರುತ್ತಿದೆ. ಬಿಜೆಪಿ ಮತ್ತು ತೃಣಮೂಲ ಕಾಂಗ್ರೆಸ್ ಒಂದೆಡೆ ಹಿಂದೂ ಕೋಮುವಾದಿ ಭಾವನೆಗಳು ಮತ್ತು ಮತ್ತೊಂದೆಡೆಯಲ್ಲಿ ಮುಸ್ಲಿಂ ಮೂಲಭೂತವಾದಿ ಭಾವನೆಗಳಿಗೆ ಉಣಿಸುತ್ತಿರುವುದು ಒಂದು ಅಪಾಯಕಾರಿ ಸನ್ನಿವೇಶವನ್ನು ನಿರ್ಮಿಸುತ್ತಿದೆ. ಈ ಹಿನ್ನೆಲೆಯಲ್ಲಿ ಧಾರ್ಮಿಕ ಅಲ್ಪಸಂಖ್ಯಾತರ, ನಿರ್ದಿಷ್ಟವಾಗಿ ಮುಸ್ಲಿಮರ ಸುರಕ್ಷಿತತೆ ಮತ್ತು ಭದ್ರತೆಯ ಪ್ರಶ್ನೆಯನ್ನು ರಾಷ್ಟ್ರೀಯ ಮಟ್ಟದಲ್ಲಿ ತುರ್ತಾಗಿ ಎತ್ತಿಕೊಳ್ಳಬೇಕಾಗಿದೆ.

ಕಳೆದ ಕೇಂದ್ರ ಸಮಿತಿಯ ಸಭೆಯಲ್ಲಿ ರಾಜ್ಯಮಟ್ಟದಲ್ಲಿ ಕೋಮುವಾದ–ವಿರೋಧಿ ಸಮಾವೇಶಗಳನ್ನು ನಡೆಸಬೇಕು ಮತ್ತು ಅದನ್ನನುಸರಿಸಿ ಒಂದು ರಾಷ್ಟ್ರಮಟ್ಟದ ಉಪಕ್ರಮದತ್ತ ಸಾಗಬೇಕು ಎಂದು ಕರೆಯನ್ನು ನೀಡಿದ್ದೆವು. ರಾಜ್ಯಮಟ್ಟದಲ್ಲಿ ಕೆಲವೇ ಸಮಾವೇಶಗಳು ನಡೆದಿವೆ. ಇದು ಮುಂಬರುವ ಕೆಲಸಗಳಲ್ಲಿ ನಾವು ಮಾಡಬೇಕಾದ ಕೆಲಸವಾಗಿದೆ. ಸರಿಯಾದ ಸಿದ್ಧತೆಗಳೊಂದಿಗೆ, ನಾವು ಒಂದು ಅಖಿಲ ಭಾರತ ಕೋಮುವಾದ–ವಿರೋಧಿ ಸಮಾವೇಶವನ್ನು ನಡೆಸುವ ಪ್ರಕ್ರಿಯೆಯನ್ನು ಪ್ರಸಕ್ತ ಸುತ್ತಿನ ವಿಧಾನಸಭಾ ಚುನಾವಣೆಗಳು ಪೂರ್ಣಗೊಂಡ ಮೇಲೆ ಎಪ್ರಿಲ್ ಅಥವ ಮೇ ಆರಂಭದಲ್ಲಿ ಆರಂಭಿಸಬೇಕು.

3. **ಬುದ್ಧಿಜೀವಿಗಳೊಂದಿಗೆ ಸಂಪರ್ಕಗಳನ್ನು ಬೆಸೆಯುವುದು:** ಹೆಚ್ಚುತ್ತಿರುವ ಅಸಹಿಷ್ಣುತೆಯ ವಿರುದ್ಧ ಮತ್ತು ಹಲವು ಕಲಾವಿದರು ತಮಗೆ ಕೊಡಮಾಡಿದ ಪ್ರಶಸ್ತಿಗಳನ್ನು ಹಿಂದಿರುಗಿಸುವ ಆಂದೋಲನಕ್ಕೆ ನಾವು ನಮ್ಮ ಪೂರ್ಣ ಸೌಹಾರ್ದವನ್ನು ವ್ಯಕ್ತಪಡಿಸಿದೆವು ಮತ್ತು ಅಸಹಿಷ್ಣುತೆಯ ವಿರುದ್ಧ ಎರಡು ಸಮಾವೇಶಗಳನ್ನು ಮತ್ತು ವಿವಿಧ ಬ್ಯಾನರುಗಳ ಅಡಿಯಲ್ಲಿ ಇಂತಹ ಚಟುವಟಿಕೆಗಳನ್ನು ನಡೆಸಿದೆವು. ಈ ಪ್ರಕ್ರಿಯೆಯನ್ನು ಮುಂದೊಯ್ಯಬೇಕು.

ಈ ಬಿಜೆಪಿ ಸರಕಾರ ದೇಶದ ಮೇಲೆ ಹೇರಬೇಕೆಂದಿರುವ ಹೊಸ ಶಿಕ್ಷಣ ಧೋರಣೆಯ ವಿರುದ್ಧ ಒಂದು ವಿಶಾಲ ರಾಷ್ಟ್ರಮಟ್ಟದ ವೇದಿಕೆಯನ್ನು ರಚಿಸಲು ಮುತುವರ್ಜಿ ವಹಿಸಬೇಕಾಗಿದೆ. ಇಂತಹ ಒಂದು ಬುದ್ಧಿಜೀವಿಗಳ, ಶಿಕ್ಷಣ ತಜ್ಞರ, ವಿದ್ಯಾರ್ಥಿ–ಯುವಜನರ ಮತ್ತು ಅಧ್ಯಾಪಕರ ಆಂದೋಲನಗಳ ಒಂದು ಸಮಿತಿಯನ್ನು ರಚಿಸಲು ನಾವು ನೇತೃತ್ವ ವಹಿಸಬೇಕು.

4. **ಸಾಮೂಹಿಕ ಸಂಘಟನೆಗಳ ವೇದಿಕೆ:** ಜನಗಳ ವಿವಿಧ ಸ್ತರಗಳ ಜನಗಳಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ಎತ್ತಿಕೊಳ್ಳಲು ಮತ್ತು ಅವುಗಳ ಆಧಾರದಲ್ಲಿ ಐಕ್ಯಹೋರಾಟಗಳನ್ನು ಹರಿಯಬಿಡಲು ಸಾಮೂಹಿಕ ಸಂಘಟನೆಗಳ ರಚನೆಯತ್ತ ಸಾಗುವ ಪ್ರಕ್ರಿಯೆಯನ್ನು ನಾವು ಸಿಪಿಐನೊಂದಿಗೆ ಆರಂಭಿಸಿದೆವು. ನಾವೀಗ ಭವಿಷ್ಯದಲ್ಲಿ ಇತರ ಎಡಪಕ್ಷಗಳನ್ನು ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನು ತೊಡಗಿಸಿಕೊಂಡು ಇದನ್ನು ಮುಂದೊಯ್ಯಬೇಕಾಗಿದೆ. ಆದಷ್ಟು ಬೇಗನೇ ನಮ್ಮ ಸಾಮೂಹಿಕ ಸಂಘಟನೆಗಳ ಒಂದು ಸಭೆ ನಡೆಸಬೇಕಾಗಿದೆ. ಅದನ್ನನುಸರಿಸಿ ಸಿಪಿಐ(ಎಂ) ಮತ್ತು ಸಿಪಿಐ ನೇತೃತ್ವದ ಸಾಮೂಹಿಕ ಸಂಘಟನೆಗಳ ಸಭೆ ನಡೆಸಬೇಕು. ಈ ವೇದಿಕೆಯ ಉದ್ದೇಶ ಎಡಪಕ್ಷಗಳ ನೇತೃತ್ವದ ಸಾಮೂಹಿಕ ಸಂಘಟನೆಗಳ ವ್ಯಾಪ್ತಿಯ ಆಚೆಯದನ್ನು ವಿಸ್ತರಿಸಿ ವಿಶಾಲಗೊಳಿಸಿ ವಿವಿಧ ಸಾಮಾಜಿಕ ಶಕ್ತಿಗಳು ಮತ್ತು ಆಂದೋಲನಗಳನ್ನು ಒಳಗೊಳ್ಳುವುದು. ನಾವು ಕೋಮುವಾದಿ ದಾಳಿಯ ವಿರುದ್ಧ ಮತ್ತು ನವ–ಉದಾರವಾದಿ ಆರ್ಥಿಕ ಸುಧಾರಣೆಗಳ ವಿರುದ್ಧ ಹೋರಾಟಗಳನ್ನು ಬಲಪಡಿಸಲು ಸಾಧ್ಯವಾದಷ್ಟು ವಿಶಾಲವಾದ ಐಕ್ಯತೆಯನ್ನು ಕಟ್ಟಲು ಪ್ರಯತ್ನಿಸಬೇಕು.

**5. ಮುಸ್ಲಿಮರು ಮತ್ತು ಇತರ ಅಲ್ಪಸಂಖ್ಯಾತರ ಆಂದೋಲನಗಳೊಂದಿಗೆ ಸಂಪರ್ಕಗಳನ್ನು ಬೆಸೆಯುವುದು:** ಮುಸ್ಲಿಂ ಅಲ್ಪಸಂಖ್ಯಾತರು ಎದುರಿಸುತ್ತಿರುವ ಸಮಸ್ಯೆಗಳ ಮೇಲೆ ರಾಜ್ಯ ಮಟ್ಟದ ಸಮಾವೇಶಗಳನ್ನು ನಡೆಸಬೇಕು ಮತ್ತು ಅದರ ಆಧಾರದಲ್ಲಿ ಒಂದು ರಾಷ್ಟ್ರಮಟ್ಟದ ಸಮಾವೇಶದ ಬಗ್ಗೆ ಪರಿಶೀಲಿಸಲಾಗುವುದು ಎಂದು ನಾವು ನಿರ್ಧರಿಸಿದ್ದೆವು. ಆದರೆ ಇದು ಯಾವುದೇ ಪರಿಣಾಮಕಾರಿ ರೀತಿಯಲ್ಲಿ ಆಗಿಲ್ಲ. ಈ ವರ್ಷ ಸಾಚಾರ್ ಸಮಿತಿ ವರದಿ ಮತ್ತು ಅದರ ಶಿಫಾರಸುಗಳನ್ನು ಪ್ರಕಟಿಸಿ ಮೊದಲ ದಶಕ ಮುಗಿಯುತ್ತದೆ. ಅದನ್ನು ಅನುಸರಿಸಿ ಬಂದ ನ್ಯಾಯಮೂರ್ತಿ ರಂಗನಾಥ ಮಿಶ್ರ ಆಯೋಗದ ವರದಿಯ ಮೂರ್ತ ಶಿಫಾರಸುಗಳನ್ನು ಒಂದು ಅರ್ಥಪೂರ್ಣ ರೀತಿಯಲ್ಲಿ ಜಾರಿಗೊಳಿಸಿಲ್ಲ. ಪಶ್ಚಿಮ ಬಂಗಾಲದಲ್ಲಿ ಮಾತ್ರ ಎಡರಂಗ ಸರಕಾರದ ಅಡಿಯಲ್ಲಿ ಮುಸ್ಲಿಮರ ಗುರುತಿಸಿದ ವಿಭಾಗಗಳಿಗೆ ಒಬಿಸಿಯಾಗಿ ಮೀಸಲಾತಿಗಳನ್ನು ಜಾರಿ ಮಾಡಲಾಯಿತು. ಹತ್ತುವರ್ಷಗಳಾದ ಮೇಲೂ ಹೆಚ್ಚಿನ ಅಂಶಗಳು ಸಾಕಷ್ಟು ಪ್ರಮಾಣದಲ್ಲಿ ಉತ್ತಮಗೊಂಡಿಲ್ಲ. ನಾವು ರಂಗನಾಥ ಮಿಶ್ರ ಆಯೋಗದ ಶಿಫಾರಸುಗಳ ಜಾರಿ ಮತ್ತು ದೇಶದಲ್ಲಿ ಉಂಟಾಗುತ್ತಿರುವ ಕೋಮು ಧ್ರುವೀಕರಣದಿಂದ ಎದ್ದು ಬರುತ್ತಿರುವ ಇತರ ಮಹತ್ವದ ಪ್ರಶ್ನೆಗಳ ಮೇಲೆ ಒಂದು ಅಖಿಲ ಭಾರತ ಸಮಾವೇಶವನ್ನು ನಡೆಸುವ ಸಾಧ್ಯತೆಯನ್ನು ಪರಿಶೀಲಿಸಬೇಕು. ನಾವು ವಿಧಾನಸಭಾ ಚುನಾವಣೆಗಳ ಪ್ರಸಕ್ತ ಸುತ್ತಿನ ನಂತರ ಇಂತಹ ಒಂದು ಸಮಾವೇಶವನ್ನು ಅಲ್ಪಸಂಖ್ಯಾತರ ಸಾಧ್ಯವಾದಷ್ಟು ಹೆಚ್ಚು ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯತೀತ ಸಂಘಟನೆಗಳನ್ನು ಒಂದುಗೂಡಿಸಿ ಆಧಾರವನ್ನು ಸಿದ್ಧಪಡಿಸಿಕೊಂಡು ನಡೆಸುವ ಗುರಿ ಇಟ್ಟುಕೊಳ್ಳಬೇಕು.

## ಕೇಂದ್ರ ಸಮಿತಿಯ ಕರೆ

ಮೇಲೆ ನಿರೂಪಿಸಿದ ತಕ್ಷಣದ ಕ್ರಮಗಳ ಜತೆಗೆ, ಜನವರಿ ತಿಂಗಳಲ್ಲಿ ಇತರ ಎಡಪಕ್ಷಗಳೊಂದಿಗೆ ಅನಾಣ್ಯೀಕರಣ ನಮ್ಮ ಜನಗಳ ವಿವಿಧ ವಿಭಾಗಗಳ ಮೇಲೆ ಉಂಟುಮಾಡಿರುವ ಪ್ರಭಾವಗಳ ವಿರುದ್ಧ ಜನಗಳ ಪ್ರತಿಭಟನೆಗಳನ್ನು ರಾಜ್ಯಮಟ್ಟದಲ್ಲಿ ಆರಂಭಿಸಬೇಕು. ಕಾರ್ಯಾಚರಣೆಯ ಸ್ವರೂಪವನ್ನು ಪ್ರತಿ ರಾಜ್ಯದಲ್ಲಿ ತಂತಮ್ಮ ಮೂರ್ತ ಪರಿಸ್ಥಿತಿಗಳಲ್ಲಿ ಎಡಪಕ್ಷಗಳು ನಿರ್ಧರಿಸುತ್ತವೆ.

ಸಿಪಿಐ(ಎಂ) ಈ ಕೆಳಗಿನ ಬೇಡಿಕೆಗಳ ಸುತ್ತ ಜನಗಳನ್ನು ಅಣಿನೆರೆಸಬೇಕು:

1. ಡಿಸೆಂಬರ್ 30ರ ಗಡುವು' ಮುಗಿದಿದೆಯಾದ್ದರಿಂದ ಜನಗಳು ತಾವು ಕಷ್ಟಪಟ್ಟು ಸಂಪಾದಿಸಿ ಬ್ಯಾಂಕುಗಳಲ್ಲಿಟ್ಟಿರುವ ಹಣವನ್ನು ಬೇಕಾದಾಗ ಪಡೆಯಲು ಇರುವುದರ ಮೇಲೆ ಹಾಕಿರುವ ಎಲ್ಲ ಮಿತಿಗಳನ್ನೂ ತಕ್ಷಣವೇ ತೆಗೆಯಬೇಕು.

2. ಎಂದಿನ ಕೃಷಿ ಚಟುವಟಿಕೆಗಳು ಅಸ್ತವ್ಯಸ್ತ ಗೊಂಡಿದ್ದರಿಂದಾಗಿ ಸಂಕಟಗಳಿಗೆ ಒಳಗಾಗಿರುವ ರೈತರಿಗೆ ತಕ್ಷಣವೇ ಸಾಲ ಮನ್ನಾ.

3. ಗ್ರಾಮೀಣ ಉದ್ಯೋಗವನ್ನು ಹೆಚ್ಚಿಸಲು ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಅರ್ಜಿ ಹಾಕಿಕೊಂಡವರಿಗೆಲ್ಲ ಉದ್ಯೋಗ ಒದಗಿಸಲು ಈ ಯೋಜನೆಗೆ ಹಣನೀಡಿಕೆಯನ್ನು ದ್ವಿಗುಣಗೊಳಿಸಬೇಕು

4. ಹಿಂಗೆದುಕೊಂಡ ನೋಟುಗಳ ವಿನಿಮಯಕ್ಕಾಗಿ ಅಥವ ತಮ್ಮದೇ ಹಣವನ್ನು ಪಡೆಯಲು ಸಾಲಿನಲ್ಲಿ ನಿಂತಿದ್ದಾಗ ಪ್ರಾಣ ಕಳಕೊಂಡವರ ಕುಟುಂಬಗಳಿಗೆ ತಕ್ಷಣವೇ ಪರಿಹಾರ ಒದಗಿಸಬೇಕು.

5. ತಮ್ಮ ಉದ್ಯೋಗಗಳನ್ನು, ಜೀವನಾಧಾರವನ್ನು ಕಳಕೊಂಡವರಿಗೆಲ್ಲರಿಗೂ, ನಿರ್ದಿಷ್ಟವಾಗಿ, ಕೃಷಿ ಕೂಲಿಕಾರರು ಮತ್ತು ದಿನಗೂಲಿ ಮಾಡುವವರಿಗೆ ಪರಿಹಾರ ನೀಡಬೇಕು.

6. ತಮ್ಮ ಆರ್ಥಿಕ ಚಟುವಟಿಕೆಗಳನ್ನು ಮುಖ್ಯವಾಗಿ ನಗದು ವ್ಯವಹಾರಗಳಲ್ಲೇ ನಡೆಸುವ ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳಿಗೆ ತೆರಿಗೆ ರಿಯಾಯ್ತಿ ಒದಗಿಸಬೇಕು.

7. ಸಹಕಾರಿ ಬ್ಯಾಂಕುಗಳಲ್ಲಿ ಠೇವಣಿಗಳು ಮತ್ತು ನಿಕಾಲೆಗಳ ಮೇಲೆ ಹಾಕಿರುವ ಮಿತಿಗಳನ್ನೆಲ್ಲ ತೆಗೆಯಬೇಕು.

8. ರಾಜ್ಯಗಳಿಗೆ ಆಗುತ್ತಿರುವ ರೆವಿನ್ಯೂ ನಷ್ಟವನ್ನು ಕೇಂದ್ರ ಸರಕಾರ ಭರ್ತಿ ಮಾಡಬೇಕು.

9. ಜನಗಳಿಗೆ ಡಿಜಿಟಲ್ ವ್ಯವಹಾರಗಳನ್ನು ನಡೆಸಬೇಕು ಎಂದು ಬಲವಂತ, ಜುಲುಮೆ ಮಾಡಬಾರದು.

10. ಎಲ್ಲ ರೇಶನ್ ಕಾರ್ಡ್‌ದಾರರಿಗೆ ಪೂರೈಕೆಗಳು ಲಭ್ಯವಾಗಬೇಕು. ಆಧಾರ್ ಕಾರ್ಡನ್ನು ಕಡ್ಡಾಯ ಮಾಡುವ ಶರತ್ತಿನಿಂದಾಗಿ ಬಹಳಷ್ಟು ಜನಗಳಿಗೆ ರೇಶನ್‌ಗಳನ್ನು ನಿರಾಕರಿಸಲಾಗುತ್ತಿದೆ. ಇದನ್ನು ಹಿಂತೆಗೆದುಕೊಳ್ಳಬೇಕು.

ಅ) ನವ–ಉದಾರವಾದಿ ಆರ್ಥಿಕ ಸುಧಾರಣೆಗಳಿಗೆ ಬದ್ಧವಾಗಿರುವ ಈ ಬಿಜೆಪಿ ಸರಕಾರ ಅದರ ಭಾಗವಾಗಿ ನಡೆಸಿರುವ ಅನಾಣ್ಯೀಕರಣದ ನಿಜ ಉದ್ದೇಶಗಳನ್ನು ಬಯಲಿಗೆಳೆಯಲು ಜನವರಿ ತಿಂಗಳ ಕೊನೆಯ ಎರಡು ವಾರಗಳ'ಲ್ಲಿ ಒಂದು ಸ್ವತಂತ್ರ ಪ್ರಚಾರಾಂದೋಲನವನ್ನು ಸಿಪಿಐ(ಎಂ) ನಡೆಸುತ್ತದೆ.

ಸಿಪಿಐ(ಎಂ)ನೊಂದಿಗೆ ಕೈಜೋಡಿಸುವ ಎಲ್ಲ ಸಾಮೂಹಿಕ ಸಂಘಟನೆಗಳು ನಿರ್ದಿಷ್ಟ ಜನಸಮೂಹಗಳ, ಅಂದರೆ ಅಸಂಘಟಿತರು, ದಿನಗೂಲಿ ಕಾರ್ಮಿಕರು, ಕೃಷಿ ಕೂಲಿಕಾರರು, ರೈತರು, ಮಹಿಳೆಯರು, ಯುವಜನರು ಮುಂತಾದವರ ಮೇಲೆ ಇದರಿಂದಾಗಿರುವ ದುಷ್ಪರಿಣಾಮಗಳು, ಸಂಕಟಗಳ ವಿರುದ್ಧ ಪ್ರತಿಭಟನಾ ಕಾರ್ಯಾಚರಣೆಗಳನ್ನು ನಡೆಸುತ್ತವೆ.

ಆ) ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳು ಈ ಮೇಲಿನ ಬೇಡಿಕೆಗಳ ಮೇಲೆ ಪ್ರತಿಭಟನಾ ಕಾರ್ಯಾಚರಣೆಗಳನ್ನು ನಡೆಸುತ್ತವೆ.

ಇ) (1)ಬ್ಯಾಂಕುಗಳಿಂದ/ಎಟಿಎಂ ಮೂಲಕ ತಮ್ಮ ಹಣವನ್ನು ತೆಗೆಯಲು ಜನಗಳ ಮೇಲೆ ಹಾಕಿರುವ ಮಿತಿಗಳನ್ನೆಲ್ಲ ತಕ್ಷಣ ತೆಗೆಯಬೇಕು ಮತ್ತು (2) ಡಿಜಿಟಲ್ ವ್ಯವಹಾರಗಳನ್ನೇ ನಡೆಸುವಂತೆ ಜನಗಳಿಗೆ ಜುಲುಮೆ ಮಾಡಬಾರದು ಎಂಬ ಬೇಡಿಕೆಗಳ ಮೇಲೆ ಜಂಟಿ ಪ್ರತಿಭಟನೆಗಳಿಗೆ ಸಿಪಿಐ(ಎಂ) ಎಲ್ಲ ಪಕ್ಷಗಳೊಂದಿಗೆ ಆಂದೋಲನಗಳೊಂದಿಗೆ ಸಹಕರಿಸುತ್ತದೆ.

**

**ಕೇಂದ್ರ ಸಮಿತಿ ಕೆಳಕಂಡ ನಿರ್ಣಯಗಳನ್ನು ಅಂಗೀಕರಿಸಿದೆ.**

1) ದಕ್ಷಿಣ ಭಾರತದ ರಾಜ್ಯಗಳು ಎದುರಿಸುತ್ತಿರುವ ಬರ ಪರಿಸ್ಥಿತಿ

2) ಭೂಮಿಯ ಪ್ರಶ್ನೆಗಳು

3) ಕೇರಳದಲ್ಲಿ ರಾಷ್ಟ್ರೀಯ ಆಹಾರಭದ್ರತಾ ಕಾಯ್ದೆ(ಎನ್‌ಎಫ್‌ಎಸ್‌ಎ) ಜಾರಿಯ ಪರಿಣಾಮಗಳು

4) "ರೋಹಿತ್ ಕಾಯ್ದೆ'

## ದಕ್ಷಿಣ ಭಾರತದ ರಾಜ್ಯಗಳು ಎದುರಿಸುತ್ತಿರುವ ಬರ ಪರಿಸ್ಥಿತಿ

ದಕ್ಷಿಣ ಭಾರತದ ರಾಜ್ಯಗಳಾದ ತಮಿಳುನಾಡು, ಕೇರಳ, ಕರ್ನಾಟಕ, ತೆಲಂಗಾಣಾದ ಕೆಲಭಾಗಗಳು, ಆಂಧ್ರ ಪ್ರದೇಶ ಮತ್ತು ಪುದುಚೆರಿ ಕೇಂದ್ರಾಡಳಿತ ಪ್ರದೇಶಗಳು ಭೀಕರ ಬರಗಾಲ ಎದುರಿಸುತ್ತಿವೆ.

ತಮಿಳುನಾಡು ರಾಜ್ಯದ ಇತಿಹಾಸದಲ್ಲೆಂದೂ ಕಂಡುಕೇಳದ ಗಂಭೀರ ಬರಗಾಲವನ್ನು ಎದುರಿಸುತ್ತದೆ. ಚೆನ್ನೈಯನ್ನು ಹೊರತುಪಡಿಸಿ, ಸಂಪೂರ್ಣ ತಮಿಳುನಾಡು ಅತ್ಯಂತ ಕೆಟ್ಟ ಬರಗಾಲದ ಕಪಿಮುಷ್ಟಿಯಲ್ಲಿದೆ. ಈಶಾನ್ಯ ಮತ್ತು ನೈರುತ್ಯ ಮಾರುತಗಳೆರೆಡೂ ವಿಫಲವಾದ್ದರಿಂದ ಮಳೆಯ ಪ್ರಮಾಣದಲ್ಲಿ 62%ಕ್ಕಿಂತಲೂ ಕೊರತೆಯಾಗಿದೆ. ನೀರಿನ ಕೊರತೆಯಿಂದಾಗಿ ಲಕ್ಷಾನುಲಕ್ಷ ಎಕರೆ ಸಾಗುವಳಿ ಯೋಗ್ಯ ಭೂಮಿ ಬಂಜರು ಬಿದ್ದಿದೆ. ಕಡಿಮೆ ನೀರಿನಲ್ಲಿ ಬೆಳೆದ ಬೆಳೆಗಳು ಸುರುಟಿ ಹೋಗಿವೆ. ಭತ್ತ, ನೆಲಕಡಲೆ, ಹತ್ತಿ, ಕಾಳು, ಕಬ್ಬು, ಬಾಳೆ ಮುಂತಾದುವು ಕೆಲವು ಲಕ್ಷ ಎಕರೆಗಳಲ್ಲಿ ಒಣಗಿ ಹೋಗಿವೆ.

ರಾಜ್ಯಕ್ಕೆ ಒಂದನೇ ಮೂರು ಭಾಗದಷ್ಟು ಅಕ್ಕಿ ಪೋರೈಸುತ್ತಿದ್ದ, ಭತ್ತದ ಕಣಜ ಎನಿಸಿಕೊಂಡಿದ್ದ ಕಾವೇರಿ ಮುಖಜ ಭೂಮಿ ಬೆಳೆ ಬೆಳೆಯಲು ಸಂಪೂರ್ಣ ವಿಫಲವಾಗಿದೆ. ಉಳುಮೆಗೆ ಯೋಗ್ಯವಾದ, ಅದರಲ್ಲೂ ವರ್ಷಕ್ಕೆ 2 ಬೆಳೆ ಬೆಳೆಯಬಹುದಾದ 12 ಲಕ್ಷ ಎಕರೆ ಭೂಮಿ ಇಂದು ಬಿತ್ತನೆ ಮಾಡಲಾಗದೇ ಬಂಜರು ಬಿದ್ದಿದೆ. ಕಡಿಮೆ ನಿರಿನ ಬಳಕೆಯಿಂದಾಗಿ ಇನ್ನೂ ಕೆಲವು ಲಕ್ಷ ಎಕರೇ ಭೂಮಿಯಲ್ಲಿ ಬೆಳೆಗಳು ಒಣಗಿಹೋಗಿದೆ.

ಮೆಟ್ಟೂರು ಮತ್ತು ವೈಗಾಯ್ ಜಲಾಶಯಗಳು, ಎಲ್ಲಾ ಕೆರೆ–ಕುಂಟೆಗಳು ಬರಿದಾಗಿವೆ. ರಾಜ್ಯದ ಬಹುಭಾಗದಲ್ಲಿ ಕುಡಿಯುವ ನೀರಿನ ಗಂಭೀರ ಸಮಸ್ಯೆ ಇದೆ. ಚೆನ್ನೈಯಲ್ಲೂ ಸಹ ಕುಡಿಯುವ ನೀರಿನ ಕೊರತೆ ಇದೆ. ಅಂತರ್ಜಲದ ಮಟ್ಟ ರಾಜ್ಯದೆಲ್ಲಡೆ ಕುಸಿದಿದೆ. ಅಸಂಖ್ಯ ಕಷ್ಟ–ಕಾರ್ಪಣ್ಯಗಳಿಂದಾಗಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಈ ಸಂಖ್ಯೆ ಗಂಟೆಯಿಂದೆ ಗಂಟೆಗೆ ಏರುತ್ತಲೇ 'ಇದೆ. ಇಲ್ಲಿಯವರೆಗೆ 120ಕ್ಕೂ ಹೆಚ್ಚು ರೈತರು ಸಾವನ್ನಪ್ಪಿದ್ದಾರೆ. ಕೃಷಿ ಕಾರ್ಮಿಕರ ಜೀವನೋಪಾಯ ದುಸ್ತರವಾಗಿದೆ. ದಿನಕ್ಕೆ ಒಂದು ಹೊತ್ತು ಆಹಾರ ಸೇವನೆ ಸಹ ದಿನಗೂಲಿಗಳಿಗೆ ಸಾಧ್ಯವಾಗುತ್ತಿಲ್ಲ ಹಾಗಾಗಿ ಹಸಿವಿನಿಂದ ಸಾಯುವವರ ಸಂಖ್ಯೆಯೂ ಹೆಚ್ಚಾಗಿದೆ. ರೈತರು ತಮ್ಮ ದನಕರುಗಳನ್ನು ಸಿಕ್ಕ ಬೆಲೆಗೆ ಮಾರಾಟಮಾಡುತ್ತಿದ್ದಾರೆ ಕಾರಣ ಅವುಗಳಿಗೆ ಮೇವು ನೀರು ಒದಗಿಸಲು ಸಾಧ್ಯವಾಗದ ಪರಿಸ್ಥಿತಿ ಇದೆ.

ರೈತ ಸಂಘಟನೆಗಳು ಮತ್ತು ರಾಜಕೀಯ ಪಕ್ಷಗಳು ಅನೇಕ ಬಾರಿ ಮನವಿ ಮತ್ತು ಪ್ರತಿಭಟನೆಗಳನ್ನು ನಡೆಸಿದರೂ ತಮಿಳುನಾಡು ಸರಕಾರ ಜನರ ಸಂಕಷ್ಟ ಪರಿಹರಿಸಲು ಯಾವುದೇ ಫಲಪ್ರದವಾದ ಕ್ರಮವನ್ನು ಕೈಗೊಂಡಿಲ್ಲ. ಈಗ ರಾಜ್ಯ ಸರಕಾರ ಬರ ಪರಿಸ್ಥಿತಿಯನ್ನು ಅಧ್ಯಯನ ಮಾಡಲು ಸಮಿತಿಯೊಂದನ್ನು ರಚಿಸಿದೆ. ಕಾವೇರಿ ನದಿ ಮುಖಜಭೂಮಿಯೊಳಗೆ ಬರುವ ಕೆಂದ್ರಾಡಳಿತ ಪ್ರದೇಶವಾದ ಪುದುಚೆರಿಯನ್ನು ಸಹ ಬರಗಾಲ ಗಂಭೀರವಾಗಿ ತಟ್ಟಿದೆ.

ಕೇರಳದಲ್ಲಿ ನೈರುತ್ಯ ಮಾರುತ(ಜೂನ್ ನಿಂದ ಸೆಪ್ಟೆಂಬರ್ 2016)ದಲ್ಲಿ ಮಳೆ ಸಾಮಾನ್ಯ ಪ್ರಮಾಣಕ್ಕಿಂತ 34% ಕಡಿಮೆ ಮತ್ತು ಈಶಾನ್ಯ ಮಾರುತದಲ್ಲಿ (ಅಕ್ಟೋಬರ್ ನಿಂದ ಡಿಸೆಂಬರ್ 2016) 61% ಕಡಿಮೆ ಆಗಿರುವದು ವರದಿಯಾಗಿದೆ. ಇದು ಕೇರಳದ ಇತಿಹಾಸದಲ್ಲೇ ಅತಿ ಕಡಿಮೆ ಮಳೆಯ ಪ್ರಮಾಣ. ಕೇರಳದ ರಾಜ್ಯ ಸರಕಾರ ಅಕ್ಟೋಬರ್‌ನಲ್ಲಿ ಇಡೀ ರಾಜ್ಯವನ್ನು ಬರಪೀಡಿತ ಎಂದು ಘೋಷಿಸಿತು. ಈ ತಿಂಗಳುಗಳಲ್ಲಿ ಒಟ್ಟಾರೆ ನಿರೀಕ್ಷಿತ 90% ಸಂಗ್ರಹದ ಬದಲು ಅದು 47%ಕ್ಕೆ ಇಳಿದಿದೆ. ನೀರು ಹೇರಳವಾಗಿರುವ ಭಾಗಗಳಲ್ಲೂ ಸಹ ಅಂತರ್ಜಲ ಕುಸಿತದ ವರದಿ ಬಂದಿದೆ.

ಕೃಷಿ, ಹೈನುಗಾರಿಕೆ ಮತ್ತು ಕೋಳಿ ಸಾಕಾಣಿಕೆ ವಲಯಗಳು ನೀರಿನ ಕೊರತೆಯಿಂದಾಗಿ ಉತ್ಪಾದನೆಯಲ್ಲಿ ಹಿನ್ನಡೆಯನ್ನು ಕಾಣಲಾರಂಭಿಸಿವೆ. ರಾಜ್ಯದ ಹಲವಾರು ಭಾಗಗಳಿಂದ ಬೆಳೆಗಳ ಮೇಲೆ ಕೀಟದ ಹಾವಳಿ ಬಗ್ಗೆ ವರದಿಗಳು ಬರುತ್ತಿವೆ. ಭತ್ತ, ಕಬ್ಬು, ಬಾಳೆ, ಹತ್ತಿ, ಕಾಳು, ಶಾಶ್ವತ' ಬೆಳೆಗಳಾದ ರಬ್ಬರ್, ತೆಂಗು, ಕಾಫಿ, ಮುಂತಾದ ಬೆಳೆ ಬೆಳೆಯುವುದರಲ್ಲಿ ತೊಡಗಿರುವ ರೈತರನ್ನೆಲ್ಲ ಈ ಪರಿಸ್ಥಿತಿ ತಟ್ಟಿದೆ. ಜಾನುವಾರುಗಳನ್ನು ಸಿಕ್ಕಷ್ಟೇ ಬೆಲೆಗೆ ಮಾರಾಟ ಮಾಡಲಾಗುತ್ತಿರುವದರ ಬಗ್ಗೆ ವರದಿಗಳು ಬರುತ್ತದೆ. ಏಕೆಂದರೆ ಮೇವು ಮತ್ತು

ಕುಡುಯುವ ನೀರಿನ ಕೊರತೆಯಿಂದಾಗಿ ಅವುಗಳ ಸಾಕಾಣಿಕೆ ಸಣ್ಣ ಮತ್ತು ಅಂಚಿನಲ್ಲಿರುವ ರೈತರಿಗೆ ತೀರ ಅಸಾಧ್ಯವಾಗುತ್ತಿದೆ.

ಕರ್ನಾಟಕವು ಸಾಧಾರಣ ಮಳೆಗಿಂತ 20% ನೈರುತ್ಯ ಮಾರುತವನ್ನೂ ಹಾಗೂ 62% ಕಡಿಮೆ ಈಶಾನ್ಯ ಮಾರುತವನ್ನೂ ಪಡೆದಿದೆ. 175 ತಾಲೂಕುಗಳಲ್ಲಿ 139 ತಾಲೂಕುಗಳು ಬರಗಾಲ ಪೀಡಿತ ಎಂದು ಘೋಷಿಸಲಾಗಿದೆ. ಜಲಾಶಯಗಳಲ್ಲಿ ನೀರಿನ ಮಟ್ಟ ಚರಿತ್ರೆಯಲ್ಲೆಲ್ಲೂ ಕಂಡರಿಯದಷ್ಟರ ಮಟ್ಟಿಗೆ ಕಡಿಮೆ ದಾಖಲಾಗಿದೆ.ಇದು ಅಭೂತಪೂರ್ವ ಸನ್ನಿವೇಶ.

ನೈರುತ್ಯಮಾರುತದಲ್ಲಿ ಹೆಚ್ಚುವರಿ ಮಳೆ ಬರುವುದೆಂಬ ಭವಿಷ್ಯ ಹೇಳಿದ್ದರಿಂದ ರೈತರು ಅದಕ್ಕನುಗುಣವಾಗಿ ಉಳುಮೆಗೆಂದು ಎಲ್ಲ ಪೂರ್ವ ಸಿದ್ಧತೆಗಳನ್ನು ಮಾಡಿಕೊಂಡಿದ್ದರು. ಈ ಬಾರಿ ಮಳೆ ಕಡಿಮೆಯಾಗುತ್ತದೆಂಬ ನಿರೀಕ್ಷೆ ಇರಲಿಲ್ಲ. ಇದು ಈ ರಾಜ್ಯಗಳಲ್ಲಿ ಬಡ ರೈತರನ್ನುಮತ್ತು ಕೃಷಿ ಕಾರ್ಮಿಕರನ್ನು ವಿಪರೀತವಾಗಿ ತಟ್ಟಿದೆ. ಈ ಪರಿಸ್ಥಿತಿ ಉಲ್ಬಣಗೊಳ್ಳುತ್ತಿರುವಂತೆ ಎಲ್ಲ ವಿಭಾಗಗಳನ್ನೂ ತಟ್ಟಲಿದೆ. ನೀರಿನ ಕೊರತೆಯ ಒತ್ತಡ ಈ ರಾಜ್ಯಗಳ ಹಲವು ಭಾಗಗಲಲ್ಲಿ ಇಗಾಗಲೇ ಅನುಭವಕ್ಕೆ ಬಂದಿದೆ. ಇದರಿಂದಾಗಿ ಸರಕಾರಗಳು ಟ್ಯಾಂಕರ್‌ಗಳ ಮೂಲಕ ನೀರಿನ ಪೂರೈಕೆ ಮಾಡಬೇಕಾಗಿ ಬಂದಿದೆ.

ಅನಾಣ್ಯೀಕರಣದ ಮೂಲಕ ಆರ್ಥಿಕ ಸ್ಥಿರತೆಯನ್ನು ಬುಡಮೇಲು ಮಾಡುವ ಪೈಶಾಚಿಕ ಕೃತ್ಯದಿಂದಾಗಿ ಈಗಾಗಲೇ ಸಾಕಷ್ಟು ನೊಂದಿರುವ ಬಡಜನರು ಮತ್ತು ಕಾರ್ಮಿಕ ವರ್ಗದ ಬವಣೆ ಇನ್ನಷ್ಟು ಹೆಚ್ಚಾಗಿದೆ. ಕಷ್ಟಪಟ್ಟು ದುಡಿದ ನಗದಿನ ಲಭ್ಯತೆ ಸೀಮಿತವಾಗುತ್ತಿರುವುದರಿಂದ ಮತ್ತು ಸಹಕಾರೀ ವಲಯವನ್ನು ಬಲವಂತವಾಗಿ ನಿರುಪಯುಕ್ತಗೊಳಿಸಿರುವದರಿಂದಾಗಿ ರೈತರಿಗೆ ಈ ಸಂಕಟಗಳನ್ನು ಅನುಭವಿಸುವುದಲ್ಲದೆ, ಬೆವರು ಸುರಿಸುತ್ತಲೇ ಹೇಗೊ ಬದುಕುಳಿಯುವುದು ಇಲ್ಲವೇ ಆತ್ಮಹತ್ಯೆ ಮಾಡಿಕೊಳ್ಳುವುದಲ್ಲದೆ ಬೇರೆ ಏನೂ ಆಯ್ಕೆ ಇಲ್ಲದಂತೆ ಮಾಡಲಾಗಿದೆ.

ಈ ಎಲ್ಲ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸವಾದಿ) ಕೇಂದ್ರ ಸಮಿತಿ ಸಂಬಂಧಪಟ್ಟ ರಾಜ್ಯಸರಕಾರಗಳನ್ನು ಈ ಕೆಳಗಿನಂತೆ ಆಗ್ರಹಿಸುತ್ತದೆ:

1. ಕೇರಳ ಮತ್ತು ಕರ್ನಾಟಕ ರಾಜ್ಯಗಳು ಈಗಾಗಲೇ ತಮ್ಮ ರಾಜ್ಯವನ್ನು ಬರಪೀಡಿತ ಎಂದು ಘೋಷಿಸಿವೆ. ತಮಿಳುನಾಡು, ಆಂದ್ರಪ್ರದೇಶ, ತೆಲಂಗಾಣ, ಮತ್ತು ಕೆಂದ್ರಾಡಳಿತ ಪ್ರದೇಶವಾದ ಪುದುಚೆರಿಯ ಸರಕಾರಗಳು ತಕ್ಷಣ ತಮ್ಮ ರಾಜ್ಯಗಳು ಬರಪೀಡಿತ ರಾಜ್ಯಗಳೆಂದು ಘೋಷಣೆ ಮಾಡಬೇಕು.

2. ಭಾರತ ಸರಕಾರವು ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯ ಹೆಚ್ಚುವರಿ ನೆರವಿನ ನಿಬಂದನೆಗಳನ್ನು ಸಡಿಲಿಸಿ, ಸಂಬಂಧಪಟ್ಟ ರಾಜ್ಯಗಳು ವಿನಂತಿಸಿರುವ ಮೊತ್ತಗಳನ್ನು ಭಾರತ ಸರಕಾರ ತಕ್ಷಣ ಬಿಡುಗಡೆ ಮಾಡಬೇಕು.

3. ಕಳೆದ ಎರಡೂ ಸೀಜನ್‌ಗಳಲ್ಲಿ ಹಿಂದೆಂದೂ ಕಂಡಿರದಷ್ಟು ಮಳೆಯ ಕೊರತೆಯನ್ನು ಪರಿಗಣಿಸಿ ಎಲ್ಲ ರೈತರಿಗೂ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಿಂದ ಅನುಮೋದಿತ ದರಕ್ಕೆ ಎರಡುಪಟ್ಟು ನೆರವನ್ನು ಒದಗಿಸಬೇಕು.

4, ಬರ ಪೀಡಿತ ರಾಜ್ಯಗಳಿಗೆ ಕೃಷೀ ಮತ್ತು ಜಾನುವಾರು ಸಾಕಾಣಿಕಾ ವಲಯಗಳಿಗೆ ವಿಸೇಷ ನೆರವು ಪ್ಯಾಕೇಜ್‌ಗಳನ್ನು ಘೋಷಿಸಬೇಕು.

5. ಸಾರ್ವಜನಿಕ್ ವಿತರಣಾ ವ್ಯವಸ್ಥೆಯ ಮೂಲಕ ಬರ ಪೀಡಿತ ರಾಜ್ಯಗಳಿಗೆ ಹೆಚ್ಚುವರಿ ಆಹಾರ ಧಾನ್ಯಗಳು, ಭೇಳೆ ಕಾಳು, ಮತ್ತು ಸೀಮೆ ಎಣ್ಣೆಯನ್ನು ಒದಗಿಸಬೇಕು.

6. ಗ್ರಾಮೀಣ ಉದ್ಯೋಗ ಖಾತ್ರಿಗೆ ಹಣ ನೀಡಿಕೆಯನ್ನು ದುಪ್ಪಟ್ಟು ಮಾಡಬೇಕು ಹಾಗೂ ಬಾಕಿ ಇರುವ ಮೊತ್ತವನ್ನು ಕೂಡಲೇ ಪಾವತಿ ಮಾಡಬೇಕು.

## ಭೂಮಿಯ ಪ್ರಶ್ನೆಗಳ ಕುರಿತು.

2013ರ ಭೂಸ್ವಾಧೀನ ಮಸೂದೆಯ ಪ್ರಯೋಜನಕಾರೀ ನಿಭಂಧನೆಗಳನ್ನು ಕಡೆಗಣಿಸಿ ಹಲವಾರು ರಾಜ್ಯಗಳಲ್ಲಿ ಬಲವಂತವಾಗಿ ಭೂಮಿಯನ್ನು ಸ್ವಾಧೀನ ಮಾಡಿಕೊಂಡಿರುವದರ ವಿರುದ್ಧ ಹೋರಾಡುತ್ತಿರುವ ಎಲ್ಲ ರೈತರಿಗೂ ಭಾರತೀಯ ಮಾರ್ಕ್ಸವಾದೀ ಕಮ್ಯುನಿಷ್ಟ್ ಪಕ್ಷ ಸೌಹಾರ್ದ ಬೆಂಬಲವನ್ನು ನೀಡುತ್ತದೆ.

ಕೇಂದ್ರದಲ್ಲಿ ಬಿಜೆಪಿ ಮತ್ತದರ ಮಿತ್ರ ಪಕ್ಷಗಳು ಅಧೀಕಾರ ವಹಿಸಿಕೊಂಡ ನಂತರ, ಸದ್ಯದಲ್ಲಿರುವ ಭೂ ಸುಧಾರಣೆ, ಸ್ವಾಧೀನ, ಭೋಗ್ಯಕ್ಕೆ ಮತ್ತು ಉಪಯೋಗಕ್ಕೆ ಇರುವ ಕಾನೂನುಗಳನ್ನು ನಾಶಮಾಡಿದೆ. 2013ರ ಭೂ ಸ್ವಾಧೀನ ಮಸೂಧೆಯನ್ನು ತಿದ್ದುಪಡಿ ಮಾಡುವ ಬಿಜೆಪಿಯ ಪುನರಾವರ್ತಿತ ಪ್ರಯತ್ನ ವಿಫಲವಾಗಿದೆ, ತನ್ನ ಮೋಸದ ಅಜಂಡಾಗನ್ನು ಮುಂದಿಡುವ ಮೂಲಕ ಭೂ ಸುಧಾರಣಾ ಕಾಯ್ದೆಗೆ ಸಂಭಂದಿತ ಅನುಕೂಲಕರ ನಿಭಂಧನೆಗಳನ್ನು ದುರ್ಭಲಗೊಳಿಸುವ ಕ್ರಮವನ್ನು ನೀತಿ ಆಯೋಗಹ ಸಹಾಯದಿಂದ ರಾಜ್ಯ ಸರಕಾರದ ಒತ್ತಡ/ಮನವೊಲಿಕೆಗಳ ಮೂಲಕ ನಡೆಸಿದೆ. ಅನೇಕ ರಾಜ್ಯಗಳು ಭೂ ಮೇಲ್ಮಿತಿ ಮತ್ತು ಭೂ ಉಪಯೋಗ ನಿಯಮಗಳನ್ನು ತಿದ್ದುಪಡಿ ಮಾಡಿದೆ. ಆಂದ್ರ ಪ್ರದೇಶ ಭೂ ಸಂಚಯನ ಕಾಯ್ದೆಯನ್ನು ಅನುಮೋದಿಸಿದೆ, ತೆಲಂಗಾಣಾ ಸರಕಾರ ಒನ್ ಟೂ ತ್ರಿ ಗೋ (ಭೂ ಮಾಲೀಕರಿಂದ ಭೂಮಿಯನ್ನು ತ್ವರಿತವಾಗಿ ಸ್ವಾಧೀನ ಪಡಿಸಿಕೊಳ್ಳುವ ನಿಯಮ) ಬಿಡುಗಡೆ ಮಾಡಿದೆ. ಅಗಷ್ಟ 2016ರಲ್ಲಿ ಗುಜರಾತ್ ಸರಕಾರ 2013ರ ಭೂ ಸ್ವಾದೀನ ಮಸೂದೆಗೆ ತಿದ್ದುಪಡಿ ತಂದು ಅದನ್ನು ಅಂಗೀಕರಿಸಿದೆ. ರಾಜಸ್ಥಾನ್ ಸರಕಾರ ಭೂ ಅವಲಂಬಿತರ ಹಕ್ಕುಗಳನ್ನು ರಕ್ಷಣಾಕವಚಗಳನ್ನು ತೆಗೆದುಹಾಕುವದರ ಮೂಲಕ ಭೂ ಸ್ವಾದಿನವನ್ನು ಸರಳವಾಗಿಸಿದೆ. ಬಿಜೆಪಿ ಅಧಿಕಾರದಲ್ಲಿರುವ ಎಲ್ಲ ರಾಜ್ಯಗಳೂ ಇದೇ ನೀತಿಯನ್ನು ಅನುಸರಿಸಿದೆ. ಬಿಜೇಡಿ ಅಧಿಕಾರದಲ್ಲಿರುವ ಓಡಿಶಾದಲ್ಲೂ ಕಾನೂನು ತಂದಿದೆ, ಕಾಂಗ್ರೆಸ್ ನೇತೃತ್ವದ ಸರಕಾರ ಇರುವ

ಕಾರ್ನಾಟಕದಲ್ಲೂ ಭೂ ಸ್ವಾದೀನ ಕಾಯ್ದೆಗೆ ತಿದ್ದುಪಡಿಯನ್ನು ತಂದಿರುವದರಿಂದಾಗಿ ನೂರು ಎಕರೆಯ ವರಗೂ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬಹುದಾಗಿದೆ.

ಫಲವತ್ತಾದ ಕೃಷೀ ಭೂಮಿಯನ್ನೂ ಒಳಗೊಂಡು, ಅಭಿವೃದ್ಧಿಯ ಹೆಸರಿನಲ್ಲಿ ಕಾರ್ಪೊರೇಟ್‌ಗಳಿಗೆ ಭೂಮಿಯನ್ನು ಪಡೆಯಲು ಸರಕಾರಗಳು ಅನುಕೂಲ ಮಾಡಿಕೊಡುತ್ತಿವೆ. ಕೈಗಾರಿಕಾ ಕಾರಿಡಾರ್‌ಗಳ ಹೆಸರಿನಲ್ಲಿ ಲಕ್ಷಗಟ್ಟಲೆ ಎಕರೆ ಜಮೀನನ್ನು ಕೈಗಾರಿಕೆಗಳ ಮತ್ತು ಮೂಲಸೌಕರ್ಯಗಳ ಬಗ್ಗೆ ಯಾವುದೇ ಪಾರದರ್ಶಕತೆ ಇಲ್ಲದೇ ಆಕ್ರಮಿಸಿಕೊಳ್ಳಲಾಗುತ್ತದೆ. ಕಾರ್ಪೊರೇಟ್‌ಗಳಿಗೆ ಭೂಮಿಯನ್ನು ಉಚಿತವಾಗಿ ಅಥವಾ ತೀರಾ ಕಡಿಮೆ ಬೆಲೆಗೆ ನೀಡಲಾಗುತ್ತದೆ ಅದೇವೇಳೆ ರೈತರಿಗೆ ಯಾವುದೇ ಸಮರ್ಪಕ ಪರಿಹಾರವನ್ನು ನೀಡದೇ ಅವರ ಭೂಮಿಯಿಂದ ಖಾಲಿಮಾಡಿಸಲಾಗುತ್ತದೆ. ಭೂಮಿಯ ಮಾಲಿಕತ್ವ ಇರದ ಬಡವರು ಮತ್ತು ಅವಲಂಬಿತರಿಗೆ 2013ರ ಕಾಯ್ದೆಯಲ್ಲಿರುವ ಎಲ್ಲ ಪ್ರಯೋಜನಕಾರೀ ನಿಭಂದನೆಗಳನ್ನು ಕಡೆಗಣಿಸಲಾಗಿದೆ. ಬಡ ಮತ್ತು ಮದ್ಯಮ ವರ್ಗದ ರೈತರು, ಗ್ರಾಮೀಣ ಕುಶಲಕರ್ಮಿಗಳು, ಕೃಷೀ ಕಾರ್ಮಿಕರು ಈ ಎಲ್ಲ ಭೂ ಕಬಳಿಕೆಯ ಆಟದಲ್ಲಿ ಬಲಿಪಶುಗಳಾಗಿರುತ್ತಾರೆ.

ದೆಹಲಿ–ಮುಂಬಯ್ ಕೈಗಾರಿಕಾ ಕಾರಿಡಾರ್, ಬೆಂಗಳೂರು ಮುಂಬಯ್ ಇಕನಾಮಿಕ್ ಕಾರಿಡಾರ್, ಬೆಂಗಳೂರು ಚೆನ್ನೈ ಕೈಗಾರಿಕಾ ಕಾರಿಡಾರ್, ಕೊಲ್ಕತ್ತಾವರೆಗೆ ಚನ್ನೈ ವಿಶಾಖಾ ಪಟ್ಟನಂ ಕೈಗಾರಿಕಾ ಕಾರಿಡಾರ್(ಪೂರ್ವ ಕರಾವಳಿ ಇಕನಾಮಿಕ್ ಕಾರಿಡಾರ್), ಅಮೃತ್‌ಸರ್ ದೆಹಲಿ ಕೊಲ್ಕತ್ತಾ ಕೈಗಾರಿಕಾ ಕಾರಿಡಾರ್‌ಗಳ ವಿರುದ್ಧ ಕೆಲ ಅಂಶಗಳ ಮೇಲೆ ಪ್ರತಿಭಟನೆಗಳು ಎಳುತ್ತಿವೆ. ಎಸ್‌ಈಝೆಡ್‌ನ ಹೆಸರಿನಲ್ಲಿ ಸ್ವಾಧೀನ ಪಡಿಸಿಕೊಂಡ ಸಾವಿರಾರು ಎಕರೆ ಜಮೀನು, ಕೈಗಾರೀಕರಣದ ನೆಪವೊಡ್ಡಿ ಪಡೆದುಕೊಂಡ ಭೂಮಿ ಇನ್ನೂ ಯಾವುದೇ ರೀತಿಯಲ್ಲಿ ಉಪಯೋಗವಾಗದೇ ಹಾಗೆಯೇ ಉಳಿದುಕೊಂಡಿದೆ. ಭೂರಹಿತರನ್ನು ಅಣಿನೆರೆಸಲು ಈ ಭೂಮಿ ಉಪಯೋಗವಾಗಬಹುದು ಮತ್ತು ಜಮೀನ್ ವಾಪಸೀ ಘೋಷಣೆಯೊಂದಿಗೆ ಅದನ್ನು ಮರಳಿಪಡೆಯಬಹುದು.

ಬಲವಂತದ ಭೂಕಬಳಿಕೆ, ಪರಿಹಾರ ಪಾವತಿ ಮಾಡದಿರುವದು ಅಥವಾ ಅಸಮರ್ಪಕ ಪರಿಹಾರ ಪಾವತಿ, ಡಿ ಫಾರ್ಮ ಪಟ್ಟಾ ಹೊಂದಿರುವವರಿಗೆ ಪರಹಾರ ನಿರಾಕರಣೆ, ಫಲವತ್ತಾದ ಬಹು–ಬೆಳೆ ಭೂಮಿ, ಅಸಮರ್ಪಕ ಪುನರ್ವಸತಿ ಮತ್ತು ಪುನಶ್ಚೇತನ ನಿಭಂದನೆಗಳು, ಮುಂತಾದ ವಿಷಯಗಳಿಗಾಗಿ ಹಲವಾರು ರಾಜ್ಯಗಳಲ್ಲಿ ರೈತರು ಪ್ರತಿಭಟಿಸುತ್ತದ್ದಾರೆ ಮತ್ತು ಸಮರಧೀರ ಹೋರಾಟ ನಡೆಸುತ್ತಿದ್ದಾರೆ. ಚಳುವಳಿಗಾರರನ್ನು ನಿಗ್ರಹಿಸಲು ಸರಕಾರ ಎಲ್ಲ ರೀತಿಯ ದಮನಕಾರಿ ತಂತ್ರಗಳನ್ನೂ ಬಳಸುತ್ತಿದೆ. ಸಾವಿರಾರು ಜನ ಈಗಾಗಲೇ ಬಂಧಿಸಲ್ಪಟ್ಟಿದ್ದಾರೆ. ಸುಳ್ಳು ಮೊಕದ್ದಮ್ಮೆಗಳನ್ನು ಹೇರಿ ಇನ್ನೊಂದಿಷ್ಟು ನೂರಾರು ಜನರನ್ನು ಜೈಲಿಗೆ ಕಳುಹಿಸಲಾಗಿದೆ. ಭೀಕರವಾಗಿ ಲಾಟಿಚಾರ್ಜಮಾಡಿ ನೂರಾರು ಜನರನ್ನು

ಗಾಯಗೊಳಿಸಲಾಗಿದೆ. ತೆಲಂಗಾಣಾ, ಜಾರ್ಖಂಡ, ಒಡಿಶಾದಲ್ಲಿ ಪೊಲೀಸರಿಂದ ಲಾಠೀಚಾರ್ಜಕೂಡ ನಡೆದಿದೆ. ಧಾಳಿಯ ವೇಳೆ ಇಬ್ಬರು ವ್ಯಕ್ತಿಗಳು ತಮ್ಮ ಪ್ರಾಣವನ್ನೂಸಹ ಕಳೆದುಕೊಂಡಿದ್ದಾರೆ. ಬಿಹಾರದ ಭಾಗ್ಲಾಪುರದಲ್ಲಿ ಭೂರಹಿತ ದಲಿತರ ವಿರುದ್ಧ ಪೊಲೀಸರು ಅತ್ಯಂತ ಕ್ರೂರವಾಗಿ ಧಾಳಿಮಾಡಿದ್ದಾರೆ, ಅದರಲ್ಲಿ ಬಹುಪಾಲು ಮಹಿಳೆಯರೇ ಇದ್ದರು. ಎಲ್ಲ ರೀತಿಯ ದಮನಗಳ ಹೊರತಾಗಿಯೂ ಅನೇಕ ಕಡೆಗಳಲ್ಲಿ ರಾಜ್ಯಸರಕಾರಗಳ ರೈತವಿರೋಧಿ ಭೂ ಸ್ವಾಧಿನ ನೀತಿಗಳ ವಿರುದ್ಧ ಜನರು ಧೈರ್ಯದಿಂದ ಪ್ರತಿರೋಧ ವ್ಯಕ್ತಪಡಿಸುತ್ತಿದಾರೆ.

ಜೀವನೋಪಾಯಕ್ಕಾಗಿ ಭೂಮಿಯನ್ನು ಅವಲಂಬಿಸಿರುವ ಮತ್ತು ವಸತಿರಹಿತರಿಗೆ ವಸತಿಹಕ್ಕನ್ನು ಖಾತ್ರಿಪಡಿಸುವಲ್ಲಿ ಅಷ್ಟೇಅಲ್ಲದೇ ಪುನರ್‌ಹಂಚಿಕೆಯಾಧಾರಿತ ಭೂ ಸುದಾರಣೆಯ ಈಡೇರಿಕೆಗಾಗಿ ಭೂ ಕಬಳಿಕೆಗೆ ಮತ್ತು ನೀರು, ಅರಣ್ಯ ಹಾಗೂ ಖನಿಜ ಸಂಪನ್ಮೂಲಗಳ ಲೂಟಿ ವಿರುದ್ಧ ಪ್ರತಿರೋಧ ಅನಿವಾರ್ಯ ಆಗಿಬಿಡುತ್ತದೆ. ಸರಕಾರದ ಹೆಚ್ಚುವರಿ ಭೂಮಿಯಲ್ಲಿ ತಲೆಮಾರುಗಳಿಂದ ಉಳುಮೆ ಮಾಡುತ್ತಿರುವ ಜನರನ್ನು ದೊಡ್ಡ ಪ್ರಮಾಣದಲ್ಲಿ ಹೊರಹಾಕುವುದನ್ನು ತಡೆಗಟ್ಟಲು ಅಷ್ಟೇ ಅಲ್ಲದೇ ಸಾಂಪ್ರದಾಯಿಕ ಅರಣ್ಯ ನಿವಾಸಿಗಳು ಮತ್ತು ಆದಿವಾಸಿಗಳ ಅರಣ್ಯ ಹಕ್ಕನ್ನು ಉಳಿಸಲು ನಡೆಯುವ ಹೋರಾಟಕ್ಕೂ ಇದು ಸಂಭಂದಿಸಿರುತ್ತದೆ. ಉದ್ದೇಶಿತ ಪರಿಸ್ಥಿತಿ ಯಾವೆಲ್ಲಕಡೆಗಳಲ್ಲಿ ಅಸ್ತಿತ್ವದಲ್ಲಿದೆಯೋ ಅಲ್ಲೆಲ್ಲ ಭೂ ರಹಿತರಿಗೆ ಭೂಮಿ ಸಿಗುವಂತಾಗಲು ಹೋರಾಟ ನಡೆಸಬೇಕು. ಸಿಪಿಐಎಂ ಕೇಂದ್ರ ಸಮಿತಿ ಹೋರಾಟ ನಡೆಸುತ್ತಿರುವ ಎಲ್ಲಾ ರೈತರಗೂ ತನ್ನ ಸೌಹರ್ದ ಬೆಂಬಲ ನೀಡುತ್ತದೆ ಮತ್ತು ಬಿಜೇಪಿ ನೇತೃತ್ವದ ಕೇಂದ್ರ ಸರಕಾರ ಅನುಸರಿಸುತ್ತಿರುವ ರೈತವಿರೋಧಿ, ದಮನಕಾರೀ ಭೂ ನೀತಿಯನ್ನು ಹಿಮ್ಮೆಟ್ಟಿಸಲು ಪ್ರಜಾಸತ್ತಾತ್ಮಕ ವಲಯವನ್ನು ಸೌಹಾರ್ಧಯುತವಾಗಿ ಅಣಿನೆರೆಸಿ ದೇಶದಾದ್ಯಂತ ಸಂಪೂರ್ಣ ಬೆಂಬಲ ನೀಡುತ್ತದೆ. ರೈತರು ಮತ್ತು ಇತರ ಗ್ರಾಮೀಣ ಬಡಜನರ' ಹಿತಾಸಕ್ತಿಯನ್ನು ಕಾಪಾಡುವ ಬಗ್ಗೆ ಸರಕಾರಕ್ಕೆ ಒತ್ತಡ ತರಲು ಸಾಧ್ಯವಿರುವ ಎಲ್ಲ ಸಹಾಯವನ್ನು ಎಲ್ಲಾ ರಾಜ್ಯ ಸಮಿತಿಗಳು ಮಾಡಬೇಕೆಂದು ಒತ್ತಾಯಿಸುತ್ತದೆ.

## ಕೇರಳದಲ್ಲಿ ರಾಷ್ಟ್ರೀಯ ಆಹಾರ ಭದ್ರತಾಕಾಯ್ದೆ (ಎನ್‌ಎಫ್‌ಎಸ್‌ಎ)ಯ ಅನುಷ್ಠಾನದ ಪರಿಣಾಮಗಳು

ಕೇರಳದ ತಿರುವನಂತಪುರಂನಲ್ಲಿ ನಡೆದ ಈ ಬಾರಿಯ ಸಿಪಿಐಎಂನ ಕೇಂದ್ರ ಸಮಿತಿಸಭೆಯು, ಕೇರಳಕ್ಕೆ ಆಹಾರಧಾನ್ಯಗಳ ಕೋಟಾವನ್ನು ಹೆಚ್ಚಿಸಲು ತಕ್ಷಣ ಕ್ರಮ ಕೈಗೊಳ್ಳುವಂತೆ ಕೇಂದ್ರ ಸರಕಾರಕ್ಕೆ ಬೇಡಿಕೆಯನ್ನಿಟ್ಟಿತು.

ಕೇರಳ ರಾಜ್ಯದಲ್ಲಿ ಹಲವಾರು ದಶಕಗಳ ಹೋರಾಟದ ನಂತರ ಶಾಸನಬದ್ದ ಮತ್ತು ಸಾರ್ವತ್ರಿಕ ಪಡಿತರ ವ್ಯವಸ್ಥೆ ಬಂದಿದೆ. ಎಲ್ಲಾ ಕುಟುಂಬಗಳಿಗೂ ಮನೆಯ ಹತ್ತಿರದಲ್ಲಿ ಪಡಿತರ ಅಂಗಡಿಗಳನ್ನು ಒದಗಿಸಲು ಸಾಧ್ಯವಾಗಿರುವ ದೇಶದ ಅತೀ

ಉತ್ತಮ ಪಡಿತರ ವ್ಯವಸ್ಥೆ ಇದಾಗಿದೆ. ದೇಶದ ಎಲ್ಲಾ ನಾಗರಿಕರಿಗೂ ಆಹಾರದ ಭದ್ರತೆಯನ್ನು ಖಾತ್ರಿಪಡಿಸಲು ಯುಪಿಎ ಸರಕಾರ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯನ್ನು ಜಾರಿಗೆ ತಂದಿತು. 75% ಗ್ರಾಮೀಣ ಹಾಗೂ 50% ನಗರದ ಜನತೆ ಆದ್ಯತಾ ವರ್ಗವೆಂದು ಎನ್ಎಫ್ಎಸ್ಎ ಒಳಗೆ ಪರಿಗಣಿಸಬಹುದೆಂಬ ಊಹೆ ಇತ್ತು. ಆದಾಗ್ಯೂ ಕೇರಳದಲ್ಲಿ ಆದ್ಯತಾ ವರ್ಗವನ್ನು ಗುರುತಿಸುವ ಸಂದರ್ಭದಲ್ಲಿ ಕೇವಲ 46% ಜನತೆಯನ್ನು ಮಾತ್ರ ಆದ್ಯತಾ ವರ್ಗವೆಂದು ಗುರುತಿಸಲಾಗಿದೆ. ಇದರಿಂದಾಗಿ ಪಡಿತರ ವ್ಯವಸ್ಥೆಯ ಕೆಸವನ್ನು ದುರ್ಬಲಗೊಳಿಸಿದೆ.

ಎನ್ಎಫ್ಎಸ್ಎ ನಿಯಮಾವಳಿಗಳ ಪ್ರಕಾರ ಕೇರಳಕ್ಕೆ ಆಹಾರ ಧಾನ್ಯಗಳ ಹಂಚಿಕೆಯನ್ನು ಕಡಿಮೆ ಮಾಡಿ ಕೇವಲ 14.25ಮೆ.ಟ ನೀಡಲಾಗುತ್ತಿದೆ. 2013–13ರಲ್ಲಿ 16.2 ಹಾಗೂ 2014–15ರಲ್ಲಿ 16 ಮೆ.ಟ ಆಹಾರಧಾನ್ಯ ನೀಡಲಾಗುತ್ತಿತ್ತು. ಕೇಂದ್ರಿಂದ ಆಹಾರ ಧಾನ್ಯಗಳ ನಿಯಮಿತ ಪೋರೈಕೆಯಿಂದಾಗಿ ರಾಜ್ಯದ ಪಡಿತರ ವ್ಯವಸ್ಥೆಯಮೇಲೆ ದುಷ್ಪರಿಣಾಮ ಬೀರಿದೆಯಲ್ಲದೇ, ಸರಾಗವಾಗಿ ಸಾರ್ವಜನಿಕರಿಗೆ ಆಹಾರಧಾನ್ಯಗಳನ್ನು ಒದಗಿಸಲು ಸಾಧ್ಯವಾಗುತ್ತಿಲ್ಲ. ಕೇರಳ ರಾಜ್ಯ ಮೂಲತಃವಾಗಿ ತೀವ್ರ ಆಹಾರಧಾನ್ಯಗಳ ಕೊರತೆ ಇರುವ ರಾಜ್ಯವಾಗಿದ್ದು, ಅಗತ್ಯವಿರುವ 15%ದಷ್ಟು ಆಹಾರಧಾನ್ಯವನ್ನು ಮಾತ್ರ ಇಲ್ಲಿ ಉತ್ಪಾದಿಸಲಾಗುತ್ತದೆ ಎಂಬುದನ್ನು ನಿರ್ಲಕ್ಷಿಸಲಾಗಿದೆ ಮತ್ತು ಎನ್ಎಫ್ಎಸ್ಎನ ನಿಯಮಾವಳಿಗಳನ್ನು ರಾಜ್ಯಕ್ಕೆ ಲಾಗುಗೊಳಿಸಿ ಕೇಂದ್ರದಿಂದ ಹಂಚಲಾಗುತ್ತಿದ್ದ ಆಹಾರ ಧಾನ್ಯದ ಮಿತಿಯನ್ನು ನಿಗದಿಗೊಳಿಸಲಾಗಿದೆ.

ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೊಂದಿದೆ, ಎನ್ಎಫ್ಎಸ್ಎ ಪ್ರಕಾರ ಕೇರಳ ರಾಜ್ಯವೊಂದರಲ್ಲೇ 35ಲಕ್ಷ ಜನ ದೇಶದ ಇತರ ರಾಜ್ಯಗಳಿಂದ ವಲಸೇ ಬಂದ ಕಾರ್ಮಿಕರಿದ್ದಾರೆ, ಅವರೂ ಸಹ ತಮ್ಮ ಹಕ್ಕಾದ ಕಡ್ಡಾಯ ಆಹಾರಧಾನ್ಯ ಹಂಚಿಕೆಯ ಪಾಲನ್ನು ಪಡೆಯಲು ಅರ್ಹರಾಗಿರುತ್ತಾರೆ. ಹಂಚಿಕೆಯ ಸಂದರ್ಭದಲ್ಲಿ ಕೇಂದ್ರವು ಈ ಅಂಶವನ್ನು ಪರಿಗಣನೆಗೆ ತೆಗೆದುಕೊಂಡಿಲ್ಲ. ಇದು ಮದ್ಯಂತರ ಅವಧಿಯಲ್ಲಿ ಗಂಭೀರವಾದ ಸಾಮಾಜಿಕ ಪರಿಣಾಮಗಳನ್ನು ಬೀರುತ್ತದೆ.

ಮಸೂಧೆಯನ್ನು ರಚಿಸುವ ಸಂಧರ್ಭದಲ್ಲಿ ರಾಜ್ಯಸರಕಾರದೊಂದಿಗೆ ಸಮಾಲೋಚನೆ ನಡೆಸಿದ್ದೇನೋ ನಿಜ. ಆದರೆ, ಆಗ ಕೇರಳದಲ್ಲಿ ಅಧಕಾರದಲ್ಲಿದ್ದ ಯುಡಿಎಫ್ ಸರಕಾರ ಅಂದಿನ ಕೇರಳದಲ್ಲಿ ಇದ್ದ ನೈಜ ಸ್ಥಿತಿಗತಿಗಳನ್ನು ಪರಿಣಾಮಕಾರಿಯಾಗಿ ಕೇಂದ್ರ ಸರಕಾರ ಮುಂದಿಡಲು ಸಂಪೂರ್ಣ ವಿಫಲವಾಗಿದೆ. ಅಷ್ಟೇ ಅಲ್ಲದೇ, ಮಸೂಧೆಯನ್ನು ಜಾರಿಗೊಳಿಸುವಲ್ಲಿ ಆರಂಬಿಕ ಹೆಜ್ಜೆಯನ್ನು ಪ್ರಮಾಣಿಕವಾಗಿ ಇಟ್ಟಿಲ್ಲ ಆಕಾರಣಕ್ಕಾಗಿ ರಾಜ್ಯವು ಎನ್ಎಫ್ಎಸ್ಎ ಜಾರಿಗೊಳಿಸಲು ಇರುವ ಅಂತಿಮ ಗಡುವನ್ನು ತಲುಪಲು ಸಾಧ್ಯವಗಲಿಲ್ಲ. ಪಡಿತರ ಚೀಟಿ ಹೊಂದಿರುವವರ ಸಮೀಕ್ಷೆಯನ್ನು ನಡೆಸುವಲ್ಲಿ ಯುಡಿಎಫ್ ಸರಕಾರ ಹಲವಾರ ಅಕ್ರಮಗಳನ್ನು ಎಸಗಿದಂತೆ ತೋರುತ್ತದೆ, ಪರಿಣಾಮವಾಗಿ ರಾಜ್ಯದ ಎಲ್ಲ ಕಡೆಗಳಿಂದ

ಆಧ್ಯತಾ ವರ್ಗದೊಳಗೆ ಸೇರ್ಪಡೆಗೆ ಸಂಭಂದಿಸಿದಂತೆ ದೂರುಗಳು ಬರುತ್ತಿವೆ. ಸದ್ಯ ಆಢಳಿತದಲ್ಲಿರುವ ಸರಕಾರ ವೈಜ್ಞಾನಿಕವಾಗಿ ಆದ್ಯತಾ ವರ್ಗವನ್ನು ಗುರುತಿಸಲು ಮತ್ತು ಮಸೂದೆಯ ಸಮರ್ಪಕ ಜಾರಿಗಾಗಿ ಸಾಧ್ಯವಿರುವ ಎಲ್ಲ ಪರಿಣಾಮಕಾರಿ ಕ್ರಮಗಳನ್ನೂ ತೆಗೆದುಕೊಳ್ಳುತ್ತಿದೆ.

ಆಹಾರ ಧಾನ್ಯಗಳ ಕೊರತೆಯೊಂದಿಗೆ ಕೇರಳದ ವಿಶೇಷ ಸಾಮಾಜಿಕ–ಆರ್ಥಿಕ ಸ್ಥಿತಿಗತಿಗಳನ್ನು ವಾಸ್ತವಿಕವಾಗಿ ಪರಿಗಣಿಸುವದಾದರೆ ಮತ್ತು ಬೃಹತ್ ಸಂಖ್ಯೆಯ ವಲಸೆ ಕಾರ್ಮಿಕರನ್ನು ಗಣನೆಗೆ ತೆಗೆದುಕೊಳ್ಳುವಾಗ, ರಾಜ್ಯಕ್ಕೆ ಕೇಂದ್ರದ ನೀಡಿಕೆಯನ್ನು ಹೆಚ್ಚಿಸಬೇಕಾದ್ದು ಮತ್ತು ಆದ್ಯತೆಯ ವಿಧದ ಅಡಿಯಲ್ಲಿ ಅರ್ಹ ಜನಸಂಖ್ಯೆಯನ್ನು ಕೂಡ ಹೆಚ್ಚಿಸುವುದು ಅನಿವಾರ್ಯವಾಗಿದೆ.

## “ರೋಹಿತ್ ಮಸೂದೆ”ಗೆ ಶಾಸನ ರೂಪ

ಕೇರಳದ ತಿರುವನಂತಪುರಂನಲ್ಲಿ ನಡೆದ ಈ ಬಾರಿಯ ಸಿಪಿಐಎಂನ ಕೇಂದ್ರ ಸಮಿತಿಸಭೆಯು, 17 ಜನವರಿ 2017 ರೋಹಿತ ವೇಮುಲಾ ಅವರ ಸಾಸ್ಥಿಕ ಕೊಲೆಗೆ 1 ವರ್ಷ ಪೂರ್ಣವಾದ ಸಂಧರ್ಬದಲ್ಲಿ, ಹೋರಾಟದ ಜೊತೆಗಿದ್ದ ದಲಿತ, ವಿಧ್ಯಾರ್ಥಿ ಮಹಿಳಾ ಮತ್ತು ಪ್ರಜಾಸತ್ತಾತ್ಮಕ ಸಂಘಟನೆಗಳೊಂದಿಗೆ ಸೌಹಾರ್ಧತೆಯನ್ನು ವ್ಯಕ್ತಪಡಿಸಿತು. ಮೋದಿ ಸರಕಾರದ ಸಚಿವ ಸಂಪುಟದಲ್ಲಿರುವ ಎರಡು ಮಂತ್ರಿಗಳು ಹೈದರಾಬಾದ್ ವುಧ್ವ ವಿಧ್ಯಾಲಯದ ಆಢಳಿತದಮೇಲೆ ನಿರಂತರ ಒತ್ತಡ ಹೇರಿ, ಅವರ ಕ್ರೂರ ಅಸಂವೇಧನೆ ಮತ್ತು ಜಾತಿ ಪೂರ್ವಾಗ್ರಹದ ಕಾರಣದಿಂದಾಗಿ ಒಬ್ಬ ಬುದ್ದಿವಂಯ ಯುವ ದಲಿತ ವಿಧ್ಯಾರ್ಥಿಯನ್ನು ಆತ್ಮಹತ್ಯೆ ಮಾಡಿಕೊಳ್ಳುವಂತಹ ಅನಿವಾರ್ಯ ಸ್ಥತಿಗೆ ತಳ್ಳಿರುವದು ಅಣಕ ಎನಿಸುತ್ತದೆ. ರೋಹಿತ್ ಒಬ್ಬ ಸಂಶೋಧನಾ ವಿಧ್ಯಾರ್ಥಿ. ಸಾಮಾಜಿಕ ನ್ಯಾಯಕ್ಕೆ ತನ್ನಬದ್ಧತೆ ಮತ್ತು ಜಾತಾತೀತ ಭಾವನೆ ಹಾಗೂ ಮರಣದಂಡನೆಗೆ ತನ್ನ ವಿರೋಧವನ್ನು ವ್ಯಕ್ತ ಪಡಿಸಿದ್ದಕ್ಕೆ ಆತನನ್ನು ಬಲಿಪಶುಮಾಡಲಾಯಿತು. ವಿಶ್ವವಿದ್ಯಾಲಯದ ಉಪ ಕುಲಪತಿಗಳು ತಮ್ಮದೇ ಆದ ಸೈದ್ಧಾಂತಿಕ ಕಟ್ಟಳೆಯಿಂದಾಗಿ ಸಂಸ್ಥೆತ ಸ್ವಾಯುತ್ತತೆಯನ್ನು ಉಳಿಸಿಕೊಳ್ಳದೇ ರೋಹಿತ್ ವೇಮುಲಾ ಮತ್ತವರ ಗೆಳೆಯರೊಂದಿಗೆ ಅತೀವ ಪ್ರತಿಕಾರ ಮತ್ತು ಅನ್ಯಾಯಯುತವಾಗಿ ನಡೆದುಕೊಂಡರು. ಅವರನ್ನು ಹಾಸ್ಟೇಲ್‌ಗಳಿಂದ ಹೊರಹಾಕಿ, ಕೊರೆಯುವ ಚಳಿಯಲ್ಲಿ ಟೆಂಟ್‌ಗಳಲ್ಲಿ ಉಳಿಯುವಂತೆ ಮಾಡಲಾಯಿತು. ಕ್ಯಾಂಟೀನ್‌ಗಳಲ್ಲಿ ದೊರೆಯುವ ಸೌಲಭ್ಯವನ್ನು ಸಿಗದಂತೆ ಮಾಡಲಾಯಿತು, ಅನೇಕ ತಿಂಗಳುಗಳ ತನಕ ವಿಧ್ಯಾರ್ಥಿ ವೇತನವನ್ನು ಹಿಡಿದಿಟ್ಟುಕೊಳ್ಳಲಾಯಿತು. ಪೋಲೀಸರೂ ಸಹ ಈ ಯುವಕರನ್ನು ಹೆರಿಸುವದರಲ್ಲಿ ಹಿಂದುಳಿಯಲಿಲ್ಲ. ಈ ಎಲ್ಲ ಘಟನೆಗಳು ರೋಹಿತ್‌ವೇಮುಲಾ ಅವರನ್ನು ಸಂಪೂರ್ಣ ಹತಾಶೆಗೆ ಒಳಪಡಿಸಿತು, ಆಕಾರಣಕ್ಕೇ ಅವರು ಜನವರಿ 17, 2016 ರಂದು ಆತ್ಮಹತ್ಯೆಗೆ ಶರಣಾದರು.

ಮುಂದೆ, ಕೇಂದ್ರ ಸರಕಾರವೂ ಸಹ ರೋಹಿತ್ ವೇಮುಲಾ ಒಬ್ಬ ಪರಿಷಿಷ್ಟ ಜಾತಿಗೆ ಸೇರಿದವನಲ್ಲ ಎಂದು ಸಾಬೀತುಪಡಿಸಲು ಹಲಾರು ಪ್ರಯತ್ನಗಳನ್ನು ಮಾಡಿತು. ಪರಿಶಿಷ್ಟ ಜಾತಿ/ಪಂಗಡಗಳ ಮೇಲೆ ದೌರ್ಜನ್ಯತಡೆ ಕಾಯ್ದೆಯಿಂದ ರೋಹಿತ್ ವೇಮುಲಾ ಸಾವಿಗೆ ಕಾರಣರಾದ ಎಲ್ಲರನ್ನು ರಕ್ಷಿಸಲು ನಡೆಸಿದ ಪ್ರಯತ್ನ ಇದಾಗಿತ್ತು. ಕೇಂದ್ರ ಸರಕಾರವಾಗಲೀ ತೆಲಂಗಾಣಾ ಸರಕರವಾಗಲೀ ರೋಹಿತ್ ವೇಮುಲಾ ಅವರ ಬಡ ತಾಯಿ ಅಥವಾ ಅವರ ಕುಟುಂಬಕ್ಕೆ ಯಾವುದೇ ನೆರವನ್ನು ನೀಡಲಿಲ್ಲ.

ಸಿಪಿಐಎಂ ಕೇಂದ್ರ ಸಮಿತಿಯು ಹಲವಾರು ವಿಧ್ಯಾರ್ಥಿ ಸಂಘಟನೆ ಮತ್ತು ದಲಿತ ಸಂಘಟನೆಗಳು ಒತ್ತಾಯಿಸುತ್ತಿರುವ "ರೋಹಿತ್ ಮಸೂದೆ" ಬೇಡಿಕೆಯನ್ನು ಬೆಂಬಲಿಸುತ್ತದೆ. ಇದರಿಂದಾಗಿ ವಿಧ್ಯಾರ್ಥಿಗಳು ಜಾತಿ ತಾರತಮ್ಯ ಮತ್ತು ಜಾತಿ ದಭ್ಬಾಳಿಕೆಗಳಿಂದ ರಕ್ಷಣೆ ಪಡೆಯಬಹುದು ಅಷ್ಟೇ ಅಲ್ಲದೇ ಆರೀತಿಯ ದೌರ್ಜನ್ಯ ಎಸಗಿದವರ ಮೇಲೆ ಕೆಲಸದಿಂದ ವಜಾಗೊಳಿಸುವದು ಹಾಗೂ ಸೂಕ್ತ ಪ್ರಮಾಣದ ಶಕ್ಷೆಯನ್ನು ನೀಡಲು ಸಾಧ್ಯವಾಗುವದು.

ಸಿಪಿಐಎಂ ಇಂತಹ ಒಂದು ಕಾನೂನಿನ ಅಂಗೀಕಾರಕ್ಕೆ ತನ್ನ ಸಂಪೂರ್ಣ ಸೌಹಾರ್ಧ ಬೆಂಬಲ ನೀಡುತ್ತದೆ.